ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಮಾಯಾವತಿ ಹಳಿದ ದಯಾಶಂಕರ್



ಸಂಪುಟ 10 | ಸಂಚಿಕೆ 31 | ಪುಟ 16 | ಜುಲೈ 31, 2016 | ರೂ. 10/-

web: www.janashakthi.co.in e-mail : js_weekly@yahoo.com



ಬಿಜೆಪಿ ದಲಿತ-ವಿರೋಧಿ ಮುಖ ಬಯಲು

- ಕಾರಟ್

ಮುಂಬಯಿ ನೀಲಿ-ಕೆಂಪು ಸಂಗಮ



ಮೋದಿಯ 'ಮೇಕ್ ಇನ್ ಇಂಡಿಯಾ' ಸಿದ್ದು 'ಇನ್‌ವೆಸ್ಟ್ ಇನ್ ಕರ್ನಾಟಕ'ಗಳಿಗೆ ಪರ್ಯಾಯದತ್ತ





ಡಿವೈಎಸ್‌ಪಿ ಆತ್ಮಹತ್ಯೆಗಳ ಸುತ್ತ



ಸೆಪ್ಟೆಂಬರ್ 2 ಸಾರ್ವತ್ರಿಕ ಮುಷ್ಕರದತ್ತ...


ಸಾರ್ವಜನಿಕ ವಲಯದ ಮಾರಾಟ ನಿಲ್ಲಿಸಿ



'ಮೋ'ದಾನಿ ಮಾದರಿ

ಮುಂಬೈಯಲ್ಲಿ ಬೃಹತ್ ನೀಲಿ–ಕೆಂಪು ರ್‍ಯಾಲಿ

ಅಂಬೇಡ್ಕರ್ ಭವನ ಮತ್ತು ಪ್ರೆಸ್ ಧ್ವಂಸಕ್ಕೆ ಭಾರೀ ಪ್ರತಿಭಟನೆ



ಜುಲೈ 19ರಂದು ಮುಂಬೈಯ ಐತಿಹಾಸಿಕ ಸಿಎಸ್‌ಟಿ(ಹಿಂದೆ ಬೋರೀಬಂದರ್) ರೈಲ್ವೆ ನಿಲ್ದಾಣ ಮತ್ತು ಆಝಾದ್ ಮೈದಾನ್ ನಡುವಿನ ವಿಶಾಲ ಪ್ರದೇಶ ಕೆಂಬಾವುಟಗಳು ಮತ್ತು ನೀಲಿ ಬಾವುಟಗಳನ್ನು ಹಿಡಿದ ಸುಮಾರು 50 ಸಾವಿರ ಜನಗಳಿಂದ ತುಂಬಿ ತುಳುಕಿತು.

ಅದು ಮುಂಬೈಯ ಕೇಂದ್ರ ಪ್ರದೇಶವಾದ ದಾದರ್‌ನ ರೈಲ್ವೆ ನಿಲ್ದಾಣದ ಬಳಿ ಇರುವ ಅಂಬೇಡ್ಕರ್ ಭವನ ಮತ್ತು ಬುದ್ಧಭೂಷಣ ಮುದ್ರಣಾಲಯವನ್ನು ನೆಲಸಮ ಮಾಡಿರುವುದರ ವಿರುದ್ಧ ಉಂಟಾಗಿರುವ ಆಕ್ರೋಶದ ಪ್ರತೀಕವಾಗಿತ್ತು.

ಇವೆರಡೂ ಸ್ವತಃ ಬಾಬಾಸಾಹೇಬ್ ಅಂಬೇಡ್ಕರ್ 1930ರ ದಶಕದಲ್ಲಿ ಸಾಮಾಜಿಕವಾಗಿ ದಮನಕ್ಕೊಳಗಾಗಿರುವ ದಲಿತರು ಮತ್ತು ಆರ್ಥಿಕವಾಗಿ ಶೋಷಣೆಗೊಳಗಾಗಿರುವ ಕಾರ್ಮಿಕರ ಎಲ್ಲ ಆಂದೋಲನಗಳಿಗೆ ಕೇಂದ್ರವಾಗಲಿ ಎಂದು ಕಟ್ಟಿಸಿದವುಗಳು. ಈ ಮುದ್ರಣಾಲಯ ಡಾ.ಅಂಬೇಡ್ಕರ್ ಬರೆದ ಹಲವಾರು ಮಹತ್ವದ ಕೃತಿಗಳನ್ನು, ಮತ್ತು ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ ವಿವಿಧ ನಿಯತಕಾಲಿಕಗಳನ್ನು ಮುದ್ರಿಸಿರುವಂತದ್ದು. ಅಲ್ಲೊಂದು ಪುಸ್ತಕಾಲಯವೂ ಇತ್ತು. ಅಂಬೇಡ್ಕರ್‌ರವರ ನಿಧನದ ನಂತರವೂ ಇದು ಹಲವು ದಶಕಗಳಿಂದ ದಲಿತ ಆಂದೋಲನದ ಕೇಂದ್ರವಾಗಿತ್ತು. ಇತ್ತೀಚೆಗೆ ರೋಹಿತ್ ವೆಮುಲಾನ ತಾಯಿ ಮತ್ತು ತಮ್ಮ ಬೌದ್ಧ ಧರ್ಮ ಸ್ವೀಕರಿಸಿದ್ದೂ ಇಲ್ಲಿಯೇ.

ಜೂನ್ 25ರ ರಾತ್ರಿ 2 ಗಂಟೆಯ ವೇಳೆಗೆ ಕಳ್ಳತನದಿಂದ ಬುಲ್‌ಡೋಝರ್‌ಗಳನ್ನು ತಂದು ಇವನ್ನು ನೆಲಸಮ ಮಾಡಲಾಯಿತು. ತೋರಿಕೆಗೆ ಈ ಧ್ವಂಸ ಕಾರ್ಯಕ್ಕೆ ಅವಕಾಶ ಮಾಡಿಕೊಟ್ಟದ್ದು ಈ ಆವರಣದ ಒಂದು ಭಾಗವನ್ನು ಬಳಸುತ್ತಿರುವ ಪೀಪಲ್ಸ್ ಇಂಪ್ರೂವ್‌ಮೆಂಟ್ ಟ್ರಸ್ಟ್. ಈಗ ಈ ಟ್ರಸ್ಟ್ ಒಬ್ಬ ನಿವೃತ್ತ ಐಎಎಸ್‌ಅಧಿಕಾರಿ ರತ್ನಾಕರ ಗಾಯಕವಾಡ್ ಎಂಬವರ ಹತೋಟಿಯಲ್ಲಿದೆ. ಈ ಆವರಣವನ್ನು ದಲಿತ ಆಂದೋಲನಕ್ಕಾಗಿ ಬಳಸುತ್ತಿರುವ ದಾದಾಸಾಹೇಬ್ ಅಂಬೇಡ್ಕರ್ ಅವರ ಮೊಮ್ಮಕ್ಕಳಾದ ಪ್ರಕಾಶ, ಆನಂದರಾಜ್ ಮತ್ತು ಭೀಮರಾವ್ ಅವರನ್ನು ಬದಿಗೊತ್ತಿ ಈ ಧ್ವಂಸಕಾರ್ಯದ ನಿರ್ಧಾರವನ್ನು ಕೈಗೊಳ್ಳಲಾಗಿತ್ತು. ಆ ಕಟ್ಟಡ ಶಿಥಿಲಾವಸ್ಥೆಯಲ್ಲಿತ್ತು, ಅದರ ಸ್ಥಾನದಲ್ಲಿ ಒಂದು 17 ಅಂತಸ್ತಿನ ಭವ್ಯ ಸ್ಮಾರಕವನ್ನು ಕಟ್ಟಲಿಕ್ಕಾಗಿ ಅದನ್ನು ನೆಲಸಮ ಮಾಡಲಾಯಿತು ಎಂದು ಹೇಳಲಾಗುತ್ತಿದ್ದರೂ, ಮುಂಬೈ ಮಹಾನಗರದ ಕೇಂದ್ರಸ್ಥಳದಲ್ಲಿರುವ ಇದರ ಹಿಂದೆ ಕಮರ್ಶಿಯಲ್, ರಿಯಲ್‌ಎಸ್ಟೇಟ್ ಹಿತಾಸಕ್ತಿಗಳ ಕೈವಾಡ ಇದೆ ಎನ್ನಲಾಗುತ್ತಿದೆ.

ಅದೇನೇ ಇದ್ದರೂ ಡಾ.ಅಂಬೇಡ್ಕರ್ ಅವರ ಬದುಕು ಮತ್ತು ಕೆಲಸಗಳೊಂದಿಗೆ ಅತ್ಯಂತ ನಿಕಟ ಸಂಬಂಧವಿರುವ ಒಂದು ಪರಂಪರೆಯ ಕಟ್ಟಡವನ್ನು ಬಿಜೆಪಿ–ಆರೆಸ್ಸೆಸ್ ನಿಯಂತ್ರಣದಲ್ಲಿರುವ ಮಹಾರಾಷ್ಟ್ರ ರಾಜ್ಯ ಸರಕಾರದ ಮಂಜೂರಾತಿ ಇಲ್ಲದೆ ಈ ರೀತಿ ನೆಲಸಮ ಮಾಡುವುದು ಸಾಧ್ಯವಿಲ್ಲ ಎಂಬುದು ಸ್ಪಷ್ಟ.

ಬೃಹತ್ ಪ್ರತಿಭಟನಾ ಆಂದೋಲನ

ನೆಲಸಮದ ಸುದ್ದಿ ತಿಳಿದ ಕೂಡಲೇ ರಾಜ್ಯದ ಹಲವೆಡೆಗಳಲ್ಲಿ ಪ್ರತಿಭಟನೆಗಳು ನಡೆದವು. ಅಂಬೇಡ್ಕರ್‌ವಾದಿ ಸಂಘಟನೆಗಳು ಮತ್ತು ಎಡಪಕ್ಷಗಳು ಈ ಪ್ರತಿಭಟನೆಗಳಿಗೆ ನೇತೃತ್ವ ನೀಡಿದವು. ಸಿಪಿಐ(ಎಂ) ಮಹಾರಾಷ್ಟ್ರ ರಾಜ್ಯ ಸಮಿತಿ ಇದನ್ನು ಬಲವಾಗಿ ಖಂಡಿಸಿತು. ನಂತರ ಜುಲೈ19ರಂದು ಮುಂಬಯಿಯಲ್ಲಿ ಒಂದು ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಲು ಜಂಟಿಯಾಗಿ ನಿರ್ಧರಿಸಲಾಯಿತು.

ಈ ನಡುವೆ ಮಹಾರಾಷ್ಟ್ರಕ್ಕೆ ತಮ್ಮ ಭೇಟಿಯ ಸಂದರ್ಭದಲ್ಲಿ ಜೂನ್ 16ರಂದು ಮುಂಬೈಗೆ ಬಂದಿದ್ದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಈ ಸ್ಥಳಕ್ಕೂ ಭೇಟಿ ನೀಡಿ ಈ ಧ್ವಂಸಕಾರ್ಯವನ್ನು ಖಂಡಿಸಿದರು. ಪ್ರಕಾಶ ಅಂಬೇಡ್ಕರ್ ಅವರೊಂದಿಗೂ ಮಾತಾಡಿದರು. ಅಗ ಅವರು ಜುಲೈ 19ರ ರ್‍ಯಾಲಿಯಲ್ಲಿ ಭಾಗವಹಿಸಲು ಯೆಚೂರಿಯವರನ್ನು ಆಹ್ವಾನಿಸಿದರು.

ರಾಜ್ಯಸಭೆಯಲ್ಲಿ ಪ್ರಸ್ತಾಪ

ಜುಲೈ 119ರ ಬೆಳಿಗ್ಯೆ ಸೀತಾರಾಮ್ ಯೆಚೂರಿ ರಾಜ್ಯಸಭೆಯಲ್ಲಿ ಈ ಪ್ರಶ್ನೆಯನ್ನು ಎತ್ತಿದ್ದರು.

“ಮುಂಬೈಯ ಅಂಬೇಡ್ಕರ್ ಭವನ ನಮ್ಮ ಸ್ವಾತಂತ್ರ್ಯ ಹೋರಾಟದ ಮತ್ತು ದಲಿತ ಆಂದೋಲನದ ಪರಂಪರೆಯ ಪ್ರತಿನಿಧಿ. ಅಂಬೇಡ್ಕರ್ ಅವರು ಮುಂಬೈಗೆ ಬರುತ್ತಿದ್ದ ದಲಿತರಿಗಾಗಿ ಇದನ್ನು ನಿರ್ಮಿಸಿದ್ದರು. ಅದು ನಮ್ಮ ದೇಶದ ದಲಿತ ಆಂದೋಲನದ ಕೇಂದ್ರವಾಯಿತು. ಅದು ಕೇವಲ ಒಂದು ಪರಂಪರೆಯ ಕಟ್ಟಡವಷ್ಟೇ ಅಲ್ಲ, ‘ಒಂದು ವ್ಯಕ್ತಿ, ಒಂದು ಮತ’ ಎಂಬ ಅಂಬೇಡ್ಕರ್ ಕನಸಿನ ಸಂಕೇತವದು” ಎಂದು ತುರ್ತಿನ ಮಹತ್ವದ ಪ್ರಶ್ನೆಗಳನ್ನು ಎತ್ತುವ ರಾಜ್ಯಸಭೆಯ ಶೂನ್ಯವೇಳೆಯಲ್ಲಿ ಈ ಪ್ರಶ್ನೆಯನ್ನೆತ್ತುತ್ತ ಅವರು ಹೇಳಿದರು.

ಬಿಜೆಪಿ ನೇತೃತ್ವದ ಸರಕಾರ ಸಾಮಾಜಿಕ ನ್ಯಾಯದ ಎಲ್ಲ ರಚನೆಗಳನ್ನು ಧ್ವಂಸ ಮಾಡುತ್ತಿದೆ, ಯೋಜನಾ ಆಯೋಗದ ಧ್ವಂಸದೊಂದಿಗೆ ದಲಿತ ಸಮುದಾಯದ ಉದ್ಧಾರಕ್ಕೆ ಈಗ ಉಪಯೋಜನೆಗಳೂ ಇಲ್ಲವಾಗಿವೆ, ಸಾಮಾಜಿಕ ನ್ಯಾಯದ ಭೌತಿಕ ಸಂಕೇತಗಳನ್ನುಮಾತ್ರವಲ್ಲ, ಸಾಮಾಜಿಕ ನ್ಯಾಯದ ಕಣ್ಣೋಟವನ್ನೇ ನೆಲಸಮ ಮಾಡಲಾಗುತ್ತಿದೆ ಎಂದು ಖಾರವಾಗಿ ನುಡಿದರು.

ಇದಕ್ಕೆ ಪ್ರತಿಪಕ್ಷಗಳ ಹಲವು ಮುಖಂಡರಿಂದ ಬೆಂಬಲ ವ್ಯಕ್ತವಾಯಿತು.

ಬಿಎಸ್‌ಪಿಯ ಮುಖ್ಯಸ್ಥರಾದ ಮಾಯಾವತಿ ಯವರು ಮಾತಾಡುತ್ತ “ಒಂದೆಡೆಯಲ್ಲಿ ಅಂಬೇಡ್ಕರ್ ಲಂಡನ್‌ನಲ್ಲಿ ಬಳಸುತ್ತಿದ್ದ ಕೋಣೆಯನ್ನು ಖರೀದಿಸುವುದಾಗಿ ಹೇಳುವ ಸರಕಾರ ಇಲ್ಲಿ, ನಮ್ಮ ನಾಡಿನಲ್ಲಿ ಅಂಬೇಡ್ಕರ್‌ರವರೇ ಕಟ್ಟಿಸಿದ್ದ ಒಂದು ಕಟ್ಟಡವನ್ನು ನೆಲಸಮ ಮಾಡಲು ಬಿಡುತ್ತದೆ” ಎಂದು ಟೀಕಿಸಿದರು.

ಕಾಂಗ್ರೆಸ್ ಮುಖಂಡ ಆನಂದ ಶರ್ಮ ಕೂಡ ಯೆಚೂರಿಯವರನ್ನು ಬೆಂಬಲಿಸುತ್ತ ಸರಕಾರ ಅವರು ಎತ್ತಿದ ಪ್ರಶ್ನೆಯ ಬಗ್ಗೆ ಮೌನವಾಗಿರಲು ಸಾಧ್ಯವಿಲ್ಲ ಎಂದರು.

ಚರ್ಚೆಗೆ ಉತ್ತರಿಸಿ ಮಾತನಾಡಿದ ಸಾಮಾಜಿಕ

ಪುಟ 14 ನೋಡಿ

ಗುಜರಾತದಲ್ಲಿ ದಲಿತರ ಮೇಲೆ ಅತ್ಯಾಚಾರ:

“ಗೋರಕ್ಷಾ ಸಮಿತಿ”ಗಳ ಚಟುವಟಿಕೆಗಳನ್ನು ನಿಷೇಧಿಸಿ

ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ಗುಜರಾತಿನ ಗಿರ್ ಸೋಮನಾಥ ಜಿಲ್ಲೆಯ ಉನಾದಲ್ಲಿ ದಲಿತರ ಮೆಲೆ ನಡೆದಿರುವ ಅತ್ಯಾಚಾರವನ್ನು ಸಿಪಿಐ(ಎಂ) ಪಲೊಟ್‌ಬ್ಯುರೊ ಬಲವಾಗಿ ಖಂಡಿಸಿದೆ. ‘ಜನಶಕ್ತಿ’ಯ ಕಳೆದ ಸಂಚಿಕೆಯಲ್ಲಿ ಪ್ರಕಟವಾದಂತೆ, ಜುಲೈ 11ರಂದು ಊನಾದಲ್ಲಿ ‘ಗೋರಕ್ಷಾ ಸಮಿತಿ’ಯವರು ಸತ್ತ ದನದ ಚರ್ಮ ಕೀಳುತ್ತಿದ್ದ ಏಳು ದಲಿತರನ್ನು ಕಬ್ಬಿಣದ ಸಲಾಕೆಗಳಿಂದ ಬಡಿದು ಅವರಲ್ಲಿ ನಾಲ್ವರನ್ನು ಸಾರ್ವಜನಿಕವಾಗಿ ಮೆರವಣಿಗೆ ಮಾಡಿಸಿದರು. ಇವರೆಲ್ಲ ತೀವ್ರವಾಗಿ ಗಾಯಗೊಂಡು ಈಗ ಆಸ್ಪತ್ರೆಯಲ್ಲಿದ್ದಾರೆ.

ಈ ಅಮಾನುಷ ದಾಳಿಗೆ ಈಗ ದಲಿತರಿಂದ ಗುಜರಾತ್ ರಾಜ್ಯಾದ್ಯಂತ ತೀವ್ರ ಪ್ರತಿಭಟನೆ ನಡೆ–ಯುತ್ತಿದೆ. ಪೋಲೀಸರು ಅದನ್ನು ದಮನ ಮಾಡಲು ಪ್ರಯತ್ನಿಸುತ್ತಿದ್ದಾರೆ.

ಈ ಊನಾ ದಾಳಿ ಮತ್ತೊಮ್ಮೆ ಗೋರಕ್ಷಾ ಸಮಿತಿ ಎಂದು ಹೇಳಿಕೊಳ್ಳುವವರು ವಹಿಸುತ್ತಿರುವ ದುಷ್ಟ ಪಾತ್ರವನ್ನು ಎತ್ತಿ ತೋರಿದೆ ಎಂದಿರುವ ಸಿಪಿಐ(ಎಂ) ಈ ಸಮಿತಿಗಳು ರಾಸುಗಳ ವ್ಯಾಪಾರ ಮತ್ತು ಸತ್ತ ಪ್ರಾಣಿಗಳ ಚರ್ಮ ತೆಗೆಯುವ ಕೆಲಸ ಮಾಡುತ್ತಿರುವ ಮುಸ್ಲಿಮರು ಮತ್ತು ದಲಿತರ ಮೇಲೆ ಗುರಿಯಿಟ್ಟಿರುವ ಕೋಮುವಾದಿ ಸಂಘಟನೆಗಳಲ್ಲದೆ ಬೇರೇನೂ ಅಲ್ಲ ಎಂದು ಹೇಳಿದೆ.

ಗುಜರಾತ ಸರಕಾರ ಊನಾ ಪ್ರಕರಣದ ಅಪರಾಧಿಗಳ ಮೇಲೆ ಬಲವಾದ ಕ್ರಮಗಳನ್ನು ಕೈಗೊಳ್ಳುವುದಲ್ಲದೆ ಈ ಗೋರಕ್ಷಾ ಸಮಿತಿಗಳ ಚಟುವಟಿಕೆಗಳ ಮೇಲೆ ನಿಷೇಧ ಹೇರಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ. ದಲಿತರ ಮೇಲೆ ಅತ್ಯಾಚಾರವನ್ನು ವಿರೋಧಿಸುತ್ತಿರುವವರ ವಿರುದ್ಧ ದಮನ ಚಕ್ರ ನಡೆಸುವುದನ್ನು ನಿಲ್ಲಿಸಬೇಕು ಎಂದು ಆಡಳಿತ ಕೂಡಲೇ ಪೋಲೀಸರಿಗೆ ನಿರ್ದೇಶನ ನೀಡಬೇಕು ಎಂದು ಅದು ಆಗ್ರಹಿಸಿದೆ.

ಜುಲೈ 25ರಂದು ದೇಶವ್ಯಾಪಿ ಪ್ರತಿಭಟನೆಗೆ ಡಿಎಸ್‌ಎಂಎಂ ಕರೆ

ಪುಟ 7ನೋಡಿ

ಅಕ್ಲಾಖ್ ಕುಟುಂಬದ ಮೇಲೆ ಎಫ್‌ಐಆರ್ ಆದೇಶ: ನ್ಯಾಯದ ಅಪಹಾಸ್ಯ

ಗೋಮಾಂಸ ತಿಂದನೆಂಬ ನೆಪಮಾಡಿ ಸಾರ್ವಜನಿಕವಾಗಿ ಕೊಚ್ಚಿ ಹಾಕಲ್ಪಟ್ಟ ಮಹಮ್ಮದ್ ಅಕ್ಲಾಖ್ ಕುಟುಂಬಕ್ಕೆ ನ್ಯಾಯ ಒದಗಿಸುವ ಬದಲು ಉತ್ತರ ಪ್ರದೇಶದ ಒಂದು ಸ್ಥಳೀಯ ನ್ಯಾಯಾಲಯ ಆತನ ಕುಟುಂಬದ ಮೇಲೆಯೇ ಎಫ್‌ಐಆರ್ ದಾಖಲಿಸಬೇಕೆಂದು ಆದೇಶ ನೀಡಿದೆ. ಇದು ನ್ಯಾಯಕ್ಕೆ ಮಾಡಿರುವ ದೊಡ್ಡ ಅಪಹಾಸ್ಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಅಕ್ಲಾಖ್‌ನನ್ನು ಅಮಾನುಷವಾಗಿ ಸಾಯಿಸುವಲ್ಲಿ ಪಾತ್ರ ವಹಿಸಿದವರು ಸಲ್ಲಿಸಿದ ಅರ್ಜಿಯ ಮೇರೆಗೆ ನ್ಯಾಯಾಲಯ ಈ ಆದೇಶ ನೀಡಿದೆ. ಈ ಮಂದಿ ಅಕ್ಲಾಖ್ ಕುಟುಂಬದವರು ನೀಡಿರುವ ದೂರನ್ನು ಹಿಂದಕ್ಕೆ ಪಡೆಯುವಂತೆ ಇದುವರೆಗೆ ಅವರ ಮೇಲೆ ಒತ್ತಡ ಹಾಕುತ್ತಿದ್ದರು. ಆಘಾತಕಾರಿ ಸಂಗತಿಯೆಂದರೆ ನ್ಯಾಯಾಲಯ ಅಕ್ಲಾಖ್ ಕುಟುಂಬದ ವಕೀಲರ ವಾದವನ್ನು ಕೇಳದೆಯೇ ಈ ಆದೇಶ ನೀಡಿದೆ ಎಂದು ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ.

ಉತ್ತರ ಪ್ರದೇಶ ಸರಕಾರ ತಕ್ಷಣವೇ ಮಧ್ಯಪ್ರವೇಶಿಸಿ ಕೋರ್ಟ್ ಆದೇಶದ ವಿರುದ್ಧ ಅಗತ್ಯ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

aÀiÁvÉAzÀgÉEzÀÄ

ಸಂಪ್ರದಾಯಶರಣ ಸಮಾಜವಾದ

ಬಂಡವಾಳಶಾಹಿ ಸಮಾಜವು ತನ್ನ ಅಸ್ತಿತ್ವವನ್ನು ಮುಂದುವರೆಸಿಕೊಂಡು ಹೋಗುವುದನ್ನು ಗಟ್ಟಿಗೊಳಿಸುವುದಕ್ಕಾಗಿಯೇ ಬಂಡವಾಳಶಾಹಿಯ ಒಂದು ಭಾಗವು ಸಾಮಾಜಿಕ ಕುಂದು–ಕೊರತೆಗಳನ್ನು ನಿವಾರಿಸಬಯಸುತ್ತದೆ.

ಅರ್ಥಶಾಸ್ತ್ರಜ್ಞರು, ಜನೋಪಕಾರಿಗಳು, ಮಾನವತಾವಾದಿಗಳು, ಕಾರ್ಮಿಕ ವರ್ಗದ ಸ್ಥಿತಿಗತಿಗಳ ಸುಧಾರಕರು, ದಾನ ಧರ್ಮಗಳ ಸಂಘಟಕರು, ಪ್ರಾಣಿದಯಾ ಸಂಘಗಳ ಸದಸ್ಯರು, ಮದ್ಯಪಾನ ನಿರ್ಮೂಲನೆಯ ಉತ್ಕಟ ಪ್ರಚಾರಕರು, ಹೀಗೆ, ಊಹೆಗೆ ನಿಲುಕಬಹುದಾದ ಇನ್ನೂ ಅನೇಕ ಬಗೆಯ ಹುಸಿ ಸಮಾಜಸುಧಾರಕರು ಈ ವಿಭಾಗಕ್ಕೆ ಸೇರಿದವರಾಗಿದ್ದಾರೆ. ಈ ರೀತಿಯ ಸಮಾಜವಾದವನ್ನು ಅವರು ಸಂಪೂರ್ಣ ಶಾಸ್ತ್ರಬದ್ಧ ವ್ಯವಸ್ಥೆಗಳನ್ನಾಗಿ ರೂಪಿಸಿದ್ದಾರೆ.

–ಮಾರ್ಕ್ಸ್ ಮತ್ತು ಎಂಗಲ್ಸ್ (ಕಮ್ಯುನಿಸ್ಟ್ ಪಕ್ಷದ ಪ್ರಣಾಳಿಕೆ)

ಕಾಶ್ಮೀರ: ಎಲ್ಲಿ ಹೋಯಿತು ವಾಜಪೇಯಿಯವರ ‘ಮಾನವೀಯತೆ’ಯ ಮಾತು?–ರಾಜ್ಯಸಭೆಯಲ್ಲಿ ಯೆಚೂರಿ ಪ್ರಶ್ನೆ

“ಕಾಶ್ಮೀರ ನಮ್ಮ ದೇಶದ ಅಭಿನ್ನ ಅಂಗ ಎನ್ನುತ್ತೇವೆ. ಆ ಅಂಗಕ್ಕೆ ಉಂಟಾಗುತ್ತಿರುವ ನೋವು ಇಡೀ ದೇಹವನ್ನು ತಟ್ಟುತ್ತಿದೆ. ಮೂವತ್ತನಾಲ್ಕು ಯುವಜನರ ಹತ್ಯೆಯಾಗಿದೆ. ಇನ್ನೊಂದೆಡೆಯಲ್ಲಿ ಒಬ್ಬ ಪೋಲೀಸ್ ಅಧಿಕಾರಿ ಪ್ರಾಣ ಕಳಕೊಂಡಿದ್ದಾರೆ. ಇದು ಬಲಾಬಲವನ್ನು ತೋರಿಸುತ್ತದೆ. 1400ಕ್ಕಿಂತಲೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಅವರಲ್ಲಿ ಹಲವರು ಕಣ್ಣಿನ ದೃಷ್ಟಿ ಕಳಕೊಳ್ಳುವ ಭಯವಿದೆ. ಕೃತಕ ಗುಂಡುಗಳ ತಪ್ಪು ಬಳಕೆಯಾಗುತ್ತಿದೆ”–ರಾಜ್ಯಸಭೆಯಲ್ಲಿ ಕಾಶ್ಮೀರದಲ್ಲಿ ಗಂಭೀರ ಪರಿಸ್ಥಿತಿಯ ಬಗ್ಗೆ ಚರ್ಚೆಯಲ್ಲಿ ಭಾಗವಹಿಸುತ್ತ ಸೀತಾರಾಮ್ ಯೆಚೂರಿಯವರು ಹೇಳಿದ ಮಾತಿದು.(ಇತ್ತೀಚಿನ ವರದಿಗಳ ಪ್ರಕಾರ ಸಾವುಗಳ ಸಂಖ್ಯೆ 42 ಮತ್ತು ಗಾಯಗೊಂಡವರ ಸಂಖ್ಯೆ 3400ಕ್ಕಿಂತಲೂ ಹೆಚ್ಚು).



ಸರಕಾರ ಅಲ್ಲಿಗೆ ಕಳಿಸಬೇಕೆಂದಿರುವ ಹೆಚ್ಚಿನ ತುಕಡಿಗಳೊಂದಿಗೆ ವೈದ್ಯಕೀಯ ನೆರವನ್ನೂ, ಡಾಕ್ಟರುಗಳನ್ನೂ ಕಳಿಸಬೇಕು ಎಂದು ಅವರು ಆಗ್ರಹಿಸಿದರು.

ಸದನದ ಮುಖಂಡ ಇದು ಪಾಕಿಸ್ತಾನ ಪಿತೂರಿ ಎಂದು ಹೇಳಿದ್ದಕ್ಕೆ ಪ್ರತಿಕ್ರಿಯಿಸುತ್ತ, ಅವರೇನೋ ಪಿತೂರಿ ಮಾಡುತ್ತಾರೆ, ಆ ಬಗ್ಗೆ ನಾವೇನು ಮಾಡುತ್ತಿದ್ದೇವೆ ಎಂಬುದೇ ಪ್ರಶ್ನೆ ಎಂದ ಅವರು ಇದು ಕೇವಲ ಪಾಕಿಸ್ತಾನದ ಸೃಷ್ಟಿ, ಅಥವ ಪ್ರತ್ಯೇಕತಾವಾದಿಗಳು ಮತ್ತು ಭಾರತದ ನಡುವಿನ ಯುದ್ಧ ಎಂಬುದನ್ನು ಒಪ್ಪಲು ಸಾಧ್ಯವಿಲ್ಲ ಎಂದರು. ಅಲ್ಲಿಯ ಯುವಜನರೇಕೇ ಅಸಂತುಷ್ಟರಾಗಿದ್ದಾರೆ ಎಂದು ಪ್ರಶ್ನಿಸಿದರು.

ಪುಟ 14 ನೋಡಿ

ಡಿವೈಎಸ್‌ಪಿ ಆತ್ಮಹತ್ಯೆಗಳ ಸುತ್ತ ಹಲವು ಪ್ರಶ್ನೆಗಳು

ಎಸ್.ವೈ.ಗುರುಶಾಂತ್

ಮಡಿಕೇರಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ಡಿವೈಎಸ್‌ಪಿ ಎಂ.ಕೆ. ಗಣಪತಿಯವರ ವಿವಾದದಲ್ಲಿ ಸಚಿವ ಕೆ.ಜೆ.ಜಾರ್ಜ್‌ರವರು ರಾಜೀನಾಮೆ ಸಲ್ಲಿಸಿದ್ದು ಈ ವಾರದ ಪ್ರಮುಖ ರಾಜಕೀಯ ವಿದ್ಯಾಮಾನ. ಇದೇ 2016ರ ಜುಲೈ 18ರಂದು ದಿವಂಗತ ಗಣಪತಿಯವರ ಮಗ ನೇಹಲ್‌ರವರ ಖಾಸಗಿ ದೂರನ್ನು ಪರಿಗಣಿಸಿ ಮಡಿಕೇರಿಯ ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯವು ನಗರಾಭಿವೃದ್ಧಿ ಸಚಿವ ಜಾರ್ಜ್ ಮತ್ತು ಐಪಿಎಸ್ ಅಧಿಕಾರಿಗಳಾದ ಲೋಕಾಯುಕ್ತ ಐಜಿಪಿ ಪ್ರಣವ್ ಮೊಹಂತಿ, ಎಡಿಜಿಪಿ ಯಾಗಿರುವ ಎ.ಎಂ.ಪ್ರಸಾದ್‌ರವರ ಮೇಲೆ ಎಫ್.ಐ.ಆರ್. ದಾಖಲಿಸಲು ನಿರ್ದೇಶಿಸಿದ ಬಳಿಕ ಸಚಿವರಾಗಿದ್ದ ಜಾರ್ಜ್ ರಾಜೀನಾಮೆ ನೀಡಿದರು. 'ರಾಜೀನಾಮೆ ನೀಡಲೇಬೇಕಾದ ಅನಿವಾರ್ಯತೆ ಇರಲಿಲ್ಲ, ಇದು ಸ್ವಯಂಪ್ರೇರಣೆಯದ್ದು' ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಸಮಜಾಯಿಸಿ ನೀಡಿದ್ದಾರೆ.

ಸಚಿವ ಜಾರ್ಜ್ ರಾಜೀನಾಮೆ ನೀಡಬೇಕು, ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಆಗ್ರಹಿಸಿ ವಿಧಾನಸಭೆಯಲ್ಲಿನ 8 ದಿನ ಕಲಾಪದಲ್ಲಿ 7 ದಿನಗಳು ಕಲಾಪ ನಡೆಯದಂತೆ ವಿರೋಧ ಪಕ್ಷವಾದ ಬಿಜೆಪಿ ಗದ್ದಲವೆಬ್ಬಿಸಿ ಧರಣಿಯನ್ನು ನಡೆಸಿತು. ಗಣಪತಿಯವರು ಆತ್ಮಹತ್ಯೆ ಮಾಡಿಕೊಳ್ಳುವ ಮೊದಲು ಟಿ.ವಿ.ಚಾನೆಲ್ ಒಂದಕ್ಕೆ ನೀಡಿದ ಸಂದರ್ಶನದಲ್ಲಿ ಜಾರ್ಜ್ ಒಳಗೊಂಡು ಹಿರಿಯ ಅಧಿಕಾರಿಗಳ ಕಿರುಕುಳವಾಗುತ್ತಿರುವ ಬಗ್ಗೆ ಪ್ರಸ್ತಾಪಿಸಿದ್ದರು. ನೇರವಾಗಿ ಆತ್ಮಹತ್ಯೆಗೆ ಇವರೇ ಕಾರಣ ಎಂಬ ಅಂಶ ಕಾಣದಿರುವುದರಿಂದ ರಾಜೀನಾಮೆ ಕೇಳುವ, ಇಲ್ಲವೇ ಕ್ರಮವಹಿಸುವ ಪ್ರಮೇಯ ಬರುವುದಿಲ್ಲ, ಪ್ರಕರಣವನ್ನು ತನಿಖೆ ಮಾಡಿದ ಬಳಿಕವಷ್ಟೇ ಕ್ರಮ ಸಾಧ್ಯವೆಂದು ಸರಕಾರ ಸಿಬಿಐ ತನಿಖೆಗೂ, ಬಳಿಕ ನ್ಯಾಯಾಂಗ ತನಿಖೆಗೂ ಒಪ್ಪಿಸಿತ್ತು. ಆದರೀಗ ಮಡಿಕೇರಿ ನ್ಯಾಯಾಲಯವು ಇವರ ಹೆಸರುಗಳು ಆತ್ಮಹತ್ಯೆ ಪೂರ್ವ ಪ್ರಸ್ತಾಪವಾಗಿರುವುದರಿಂದ ಆತ್ಮಹತ್ಯೆಗೆ ಪ್ರಚೋದನೆ, ಒತ್ತಡ ವಿರಬಹುದು ಎಂಬ ಅಂಶವನ್ನೂ ಪರಿಗಣಿಸಿದೆ. ಆದಾಗ್ಯೂ ಈ ಚಾನೆಲ್ ಚಿತ್ರೀಕರಣ, ಸಮಯ, ಸಂದರ್ಭ ಆತ್ಮಹತ್ಯೆಯ ನಿಜಕಾರಣಗಳು. ಮುಂತಾಗಿ ಆಳವಾದ ತನಿಖೆಯ ನಂತರವೇ ಸತ್ಯಗಳು ಬಹಿರಂಗಗೊಳ್ಳಬೇಕಿದೆ.

ಗಣಪತಿಯವರ ಆತ್ಮಹತ್ಯೆ ನಿಜಕ್ಕೂ ದುರಂತ ಹಾಗೂ ದುಃಖದಾಯಕ. ಒಂದು ವೇಳೆ ಕೆಲಸ ನಿರ್ವಹಿಸಲಾಗದ ಸ್ಥಿತಿಯಿದ್ದಲ್ಲಿ ಯಾರೇ ಆಗಲೀ ರಾಜೀನಾಮೆ ನೀಡಿ ಹೊರಬರುವುದಕ್ಕೆ ಅವಕಾಶಗಳಿವೆ. ಆದರೆ ಗಣಪತಿಯವರು ಪೊಲೀಸ್ ಇಲಾಖೆಯಲ್ಲಿ ಸಾಮಾನ್ಯ ಪೇದೆಯಾಗಿರಲಿಲ್ಲ. ಅವರು ಉನ್ನತ ಹಂತದ ಒಬ್ಬ ಅಧಿಕಾರಿ, ಅದರಲ್ಲೂ ಎಂತಹ ಒತ್ತಡಗಳ ನಡುವೆಯೂ ಕಾರ್ಯನಿರ್ವಹಿಸಲೇಬೇಕಾದ ಮಾನಸಿಕ ಸ್ಥಿಮಿತತೆ, ಎದೆಗಾರಿಕೆ ಇರಲೇಬೇಕಾದ ಇಲಾಖೆಯದ್ದು. ತನ್ನ ಮೇಲಾಧಿಕಾರಿಗಳನ್ನು ಹೊರತು ಪಡಿಸಿದರೂ, ಇಲಾಖೆಯಲ್ಲಿ ಬರುವ ಹತ್ತಾರು ವಿಭಿನ್ನ ಸ್ವರೂಪದ ಪ್ರಕರಣಗಳಲ್ಲಿಯೂ ಹಲವು ಬಗೆಯ ಒತ್ತಡಗಳನ್ನು ಎದುರಿಸಲೇಬೇಕಾದ ಅನಿವಾರ್ಯತೆ ಇದೆ. ಅಂತಹ ಸಾಮರ್ಥ್ಯ, ಸ್ಥಿಮಿತತೆ ಇಲ್ಲವೆಂದರೆ ಅಥವಾ ತಾನು ಅನುಭವಿಸಿದ ಒತ್ತಡಗಳ ಕಹಿ ಸತ್ಯವನ್ನು ಅರಗಿಸಿಕೊಳ್ಳಲಾರದೇ ಹೋಗುವ ಸ್ಥಿತಿ ಏರ್ಪಟ್ಟಿತ್ತೇ ? ಹಾಗಿದ್ದರೆ ಅವೇನು ? ಇವುಗಳ ಸುಳಿವು ಇನ್ನೂ ಸಿಕ್ಕಿಲ್ಲ. ಆದರೀಗ ಹೇಳಲಾಗುವಂತೆ ಆರೋಪಿತರಾದವರ ಪಾತ್ರ, ಒತ್ತಡದ ಸ್ವರೂಪ–ವಿವರಗಳನ್ನೂ ದಿವಂಗತ ಗಣಪತಿಯವರೂ ಹೇಳಿಲ್ಲ. ಹೀಗಾಗಿಯೇ ಇಲಾಖೆಯ ಹೊರಗೆ ಇರಬಹುದಾದ ವಿಷಯಗಳ ಸುತ್ತಲೂ ಅನುಮಾನಗಳು ಹುಟ್ಟಿವೆ. ಘಟನೆ ಬಳಿಕ ಮಾತನಾಡಿದ ಅವರ ಕುಟುಂಬದ ಸದಸ್ಯರ ಅಭಿಪ್ರಾಯಗಳು, ಅಂದರೆ ಇತ್ತೀಚಿಗೆ ಗಣಪತಿಯವರಿಗೆ ಪ್ರಮೋಷನ್ ಸಿಕ್ಕಿದ್ದು, ಅಂತಹ ಕಿರುಕುಳ ಇರಲಿಲ್ಲ ಎಂಬುದು, ಮಾನಸಿಕ ಖಿನ್ನತೆ, ಸಂಸಾರಿಕ ಭಿನ್ನಾಭಿಪ್ರಾಯಗಳು ಇತ್ಯಾದಿಗಳ ಸುತ್ತಲೂ ತನಿಖೆ ನಡೆಯಬೇಕೆಂಬ ಅಂಶಗಳನ್ನು ನಿರಾಕರಿಸುವುದು ಅಷ್ಟು ಸುಲಭವಲ್ಲ.

ಆದರೆ ಒಂದಂತೂ ನಿಜ, ವಿರೋಧ ಪಕ್ಷ ಬಿಜೆಪಿ ಮತ್ತು ಕೆಲವು ಬಹುತೇಕ ಮಾಧ್ಯಮಗಳ ಅಬ್ಬರದಂತೆ ಗಣಪತಿಯವರು ಅತ್ಯಂತ ದಕ್ಷ, ಪ್ರಾಮಾಣಿಕ, ಹೀಗಾಗಿಯೇ 'ದಮನಿತ' ಎಂಬುದನ್ನು ದಿ:ಗಣಪತಿಯವರ ಹಳೆ ರೆಕಾರ್ಡ್ ನೋಡಿದರೆ ಸಮರ್ಥಿಸುವುದಿಲ್ಲ. ಇದೇ ಬಿಜೆಪಿ ರಾಜ್ಯ ಸರಕಾರದಲ್ಲಿಯೇ ಎರಡು ಬಾರಿ ಅಮಾನತು, ತನಿಖೆಯ 'ಕಿರಿಕಿರಿ'ಯನ್ನು ಗಣಪತಿಯವರು ಅನುಭವಿಸಿದ್ದರು. ಮಂಗಳೂರಿನ ಚರ್ಚ್ ಮೇಲಿನ ಧಾಳಿಯಲ್ಲಿ, ಅವರು ಬಜರಂಗದಳದ ಕಾರ್ಯಕರ್ತರಂತೆ ವರ್ತಿಸಿದ್ದರು. ಪ್ರಜಾಸತ್ತಾತ್ಮಕ ಯುವಜನರ ಬೆಳವಣಿಗೆಯನ್ನು ಬಗ್ಗು ಬಡಿಯಲು ಲಾಠಿ ಹಿಡಿದು ಅಬ್ಬರಿಸಿದ್ದರು.

ಬೆಂಗಳೂರಿನಲ್ಲಿಯೂ 'ಎನ್‌ಕೌಂಟರ್' ಹತ್ಯೆ, ಕಳ್ಳನಿಂದ ವಶಪಡಿಸಿಕೊಂಡ ಲಕ್ಷಾಂತರ ಹಣದ ಅಪರಾತಪರ ಪ್ರಕರಣಗಳು ಬಿಜೆಪಿಯವರು ನೀಡುವ ಚಿತ್ರಣವನ್ನೇ ಭಿನ್ನವಾಗಿ ತೋರಿಸುತ್ತವೆ. ಈ ಎಲ್ಲಾ ಅಂಶಗಳು ಗೊತ್ತಿದ್ದರೂ ಬಿಜೆಪಿ ಮತ್ತು ಮಾಧ್ಯಮಗಳು ಅರಚಾಟ ಒಂದು ರಾಜಕೀಯ ಪ್ರಯೋಜನದ ದುರುದ್ದೇಶದ್ದು. ಮೇಲಾಗಿ ದಿವಂಗತ ಗಣಪತಿಯವರು ಸಂಘ ಪರಿವಾರದ ಜೊತೆಗೆ ಮಿಲನವಾಗಿದ್ದು ನಂಟಸ್ತಿಕೆ !

ಅಂದರೆ ಗಣಪತಿಯವರ ಆತ್ಮಹತ್ಯೆಯ ಪ್ರಕರಣವನ್ನು ಕಾಂಗ್ರೆಸ್ ಸರಕಾರದ ಮೇಲೆ ಧಾಳಿ ನಡೆಸಿ, ಅದರ ರಾಜಕೀಯ ದುರ್ಲಾಭ ಹೊಡೆಯಲು ಬಿಜೆಪಿ ಎಲ್ಲಿಲ್ಲದ ಕಸರತ್ತು ನಡೆಸಿದ್ದು ಸ್ಪಷ್ಟ. ಮೇಲಾಗಿ ವಿಶೇಷವಾಗಿ ಕೊಡಗಿನಲ್ಲಿ ಕೊಡವರ ನಡುವೆ ಅನುಕಂಪದ ಅಲೆ ಸೆಳೆದು ಗಟ್ಟಿಗೊಳಿಸುವುದು ಮತ್ತು ಕೊಡವರ ನಡುವೆ ಕೆಲವು ಸಂಕುಚಿತವಾದಿ ತೀವ್ರಗಾಮಿಗಳ ಪೈಪೋಟಿಯ ಕಾರಣದಿಂದ ಈಗಾಗಲೇ ವಿವಿಧ ಜಾತಿಗಳ ನಡುವೆ ತೀವ್ರ ಒಡಕು ಉಂಟಾಗಿರುವ ಸ್ಥಿತಿಯಿಂದ ಪಾರಾಗುವುದು ಅದರ ಮುಖ್ಯ ಉದ್ದೇಶವಾಗಿತ್ತು. ಟಿಪ್ಪು ಸುಲ್ತಾನ್, 60 ಸಾವಿರ ಕೊಡವರನ್ನು ಕೊಂದ ಎಂದೂ, ಅದಕ್ಕಾಗಿ ಅಕ್ರಮವಾಗಿ ಸ್ಮಾರಕ ನಿರ್ಮಿಸುವ ಕೊಡವ ಸಮುದಾಯದ ಹೆಸರಿನಲ್ಲಿ ಕೆಲವರ ಯತ್ನವು ಸೃಷ್ಟಿಸಿದ ಜಾತಿ ಆಧಾರಿತ ಒಡಕು ಬಿಜೆಪಿಯನ್ನೂ ಇಬ್ಬಾಗವಾಗಿಸಿದೆ. ಈ ಬೆಳವಣಿಗೆ 'ಬೆಣ್ಣೆ ಕಿತ್ತು ಬಾಲ ಸಿಕ್ಕಿಸಿಕೊಂಡ ಕೋತಿ'ಯ ಸ್ಥಿತಿಯನ್ನೂ ಬಿಜೆಪಿ–ಆರ್‌ಎಸ್‌ಎಸ್‌ಗೆ ಸೃಷ್ಟಿಸಿದೆ. ಹೀಗಾಗಿ ಗಣಪತಿ ಪ್ರಕರಣ ಬಿಜೆಪಿಗೆ ತಾನೇ ಸೃಷ್ಟಿಸಿಕೊಂಡ ಸ್ಥಿತಿಯನ್ನು ತಾತ್ಕಾಲಿಕ ಮರೆಸಲು ಬಳಸಲು ಅವಕಾಶ ನೀಡಿತು. ಹಾಗಾಗಿಯೇ ಜಾರ್ಜ್ ರಾಜೀನಾಮೆ, ಎಫ್.ಐ.ಆರ್. ನಿಂದಲೂ ತೃಪ್ತವಾಗದ ಬಿಜೆಪಿ ಈ ಪ್ರಕರಣವನ್ನೂ ಮತ್ತೆ ಎಳೆದಾಡುವುದರಲ್ಲಿ ಹಿಂದೆ ಬೀಳಲಿಕ್ಕಿಲ್ಲ. ಬಿಜೆಪಿ ಈಗ ಸಿಬಿಐ ತನಿಖೆಗೆ ಒತ್ತಾಯಿಸಿ ರಾಜ್ಯಾದ್ಯಂತ ಚಳುವಳಿ ನಡೆಸುವುದಾಗಿ ಘೋಷಿಸಿದೆ.

ವಿಚಿತ್ರವೆಂದರೆ ಇದೇ ಬಿಜೆಪಿ ಹಿಂದೆ ಸಿಬಿಐ ಯನ್ನು ಕಾಂಗ್ರೆಸ್ ಬ್ಯೂರೋ ಎಂದೇ ವ್ಯಂಗ್ಯವಾಡುತ್ತಿತ್ತು. ಈಗ ಮೋದಿ ಕೈಯಲ್ಲಿ ಅದು ಪವಿತ್ರವಾಗಿ ಬಿಟ್ಟಿತೇ ? ಅದಿರಲಿ, ಇದುವರೆಗೂ ಬಿಜೆಪಿಯ ರಂಪಾಟದಿಂದಲೇ ಸಿಬಿಐಗೆ ಒಪ್ಪಿಸಲ್ಪಟ್ಟ ಐ.ಎ.ಎಸ್. ಅಧಿಕಾರಿ ಡಿ.ಕೆ.ರವಿಯವರ ಆತ್ಮಹತ್ಯೆ ಪ್ರಕರಣದ ತನಿಖೆ ಎಲ್ಲಿಗೆ ಬಂದಿದೆ ? ಧರ್ಮಸ್ಥಳದ ಸೌಜನ್ಯಳ ಕೊಲೆಯ ಪ್ರಕರಣದಲ್ಲಿ ಸಿಬಿಐ ಕಾಲಹರಣ ಮಾಡಿ ಅಪರಾಧಿಗಳು ರಾಜಾರೋಷವಾಗಿ ತಿರುಗಾಡಲು ಅನುವು ಮಾಡಿರುವುದು ಬಿಟ್ಟರೆ ಇನ್ನೇನು ಮಾಡಿದೆ ? ಹೋಗಲಿ ದೇಶದಲ್ಲಿ ಸಿಬಿಐಯನ್ನೂ ಬಳಸಿ ವಿವಿಧ ಪಕ್ಷಗಳ ಮುಖಂಡರನ್ನು ಹಣಿಯಲು ಮೋದಿ ಸರಕಾರ ಬಳಸುತ್ತಿಲ್ಲವೇ ? ಆದ್ದರಿಂದ ಈಗ ಸರಕಾರ ನಿರ್ಧರಿಸಿದ ತನಿಖೆಗಳು ಪೂರ್ಣಗೊಂಡು ಸತ್ಯ ಹೊರಬರಬೇಕಾದದ್ದು ಅಗತ್ಯ.

ಪರಿಸ್ಥಿತಿ ಹೀಗಿರುವಾಗ ಬಿಜೆಪಿಯ ಅಕ್ರಮಣವನ್ನೂ ಸದನದಲ್ಲಿಯೂ, ಹೊರಗೆ ಸಮಾಜದಲ್ಲಿಯೂ ಎದುರಿಸುವಲ್ಲಿ ಕಾಂಗ್ರೆಸ್ ಒಂದು ಆಡಳಿತದ ರಾಜಕೀಯ ಪಕ್ಷವಾಗಿ, ಸರಕಾರವಾಗಿ ವಿಫಲವಾಗಿದೆ. ತನ್ನ ಬಳಿಯಿರುವ, ಮಾಹಿತಿಗಳು, ಅವಕಾಶಗಳನ್ನೂ ಅದರು ಸಮರ್ಥವಾಗಿ ಬಳಸದೇ ಬಿಜೆಪಿಯ ಅಬ್ಬರದ ಎದುರು ಮಂಕಾಗಿ ಹೋಗಿದೆ. ಹೇಗಾದರೂ ಅಧಿಕಾರ ಹಿಡಿದೇ ತೀರಬೇಕು ಎಂಬ ಧಾವಂತದಲ್ಲಿರುವ ಬಿಜೆಪಿ ಕೇಂದ್ರ ಸರಕಾರದ ಬಲವಲ್ಲದೇ, ಸಂಘಪರಿವಾರದ ಎಲ್ಲಾ ಜಾಲವನ್ನೂ, ಹಣವನ್ನೂ ಬಳಸುತ್ತಿದೆ. ಅದಕ್ಕೆ ಒಂದು ದೀರ್ಘಾವಧಿ ಅಜೆಂಡಾವಿದೆ. ವಿಪರ್ಯಾಸವೆಂದರೆ ಇಂತಹ ಬಿಜೆಪಿಯೊಂದಿಗೆ ಜಾತ್ಯಾತೀತ ಜನತಾದಳವೂ ಹಗಲೂ–ರಾತ್ರಿ ಧರಣಿಯಲ್ಲಿ ಪಾಲ್ಗೊಂಡಿತು. ಸಿಬಿಐ ತನಿಖೆಗೆ ಆಗ್ರಹಿಸುವುದಿಲ್ಲ ಎಂದು ಅದರ ನಾಯಕರು ಹೇಳಿದ್ದಾಗಲೂ, ಕೋಮುವಾದಿ ಬಿಜೆಪಿಯೊಂದಿಗೆ ಅದರ ಸಹ ಭಾಗಿತ್ವದ ಸಮೀಕರಣ ರಾಜಕೀಯ ಆತ್ಮಹತ್ಯೆ ದಾರಿ ಎಂದಿನಿಸಿದ್ದರೆ ಅವನತಿಯತ್ತ ಇಡುವ ಮತ್ತೊಂದು ಹೆಜ್ಜೆ ಅಷ್ಟೇ.

ಇಂದು ರಾಜ್ಯದಲ್ಲಿ ಒಂದು ವಿಚಿತ್ರವಾದ ವಿಶಿಷ್ಟ ವಾತಾವರಣವೇ ಸೃಷ್ಟಿಯಾಗುತ್ತಿದೆ. ಸರಿಸುಮಾರು ಗಣಪತಿಯವರ ಆತ್ಮಹತ್ಯೆಗೆ ಕೆಲವೇ ದಿನಗಳ ಮೊದಲು ಚಿಕ್ಕಮಗಳೂರಿನಲ್ಲಿ ಪೊಲೀಸ್ ಅಧಿಕಾರಿಯಾಗಿದ್ದ ಕಲ್ಲಪ್ಪ ಹಂಡಿಬಾಗ್ ಆತ್ಮಹತ್ಯೆ ಮಾಡಿಕೊಂಡರು. ಅದರ ಹಿಂದೆ ಕೂಡ್ಲಿಗಿ ಡಿವೈಎಸ್‌ಪಿ ಅನುಪಮಾ ಶೆಣೈ ಸಚಿವರ 'ಕಿರುಕುಳ ತಾಳದೇ' ರಾಜೀನಾಮೆ ನೀಡಿರುವುದಾಗಿ ಹೇಳಿ ಹೊರಬಂದರು. ಮೈಸೂರಿನ ಜಿಲ್ಲಾಧಿಕಾರಿ ಶಿಖಾರವರು ಸಿ.ಎಂ. ಆಪ್ತನೊಬ್ಬನ ದಬಾವಣೆ ಬಗ್ಗೆ ದೂರು ನೀಡಿದ್ದಾರೆ. ಹಾಸನದ ಎ.ಸಿ.ವಿಜಯಾ ಆತ್ಮಹತ್ಯೆಗೆ ಯತ್ನಿಸಿ, ಬಚಾವಾಗಿದ್ದಾರೆ. ಇವೆಲ್ಲಾ ಗಮನಿಸಿದಾಗ ಅಧಿಕಾರಿಗಳ, ನಡುವೆ ಒಂದು ಬಗೆತ 'ಹೊರ ಹೋಗುವಿಕೆಯ' ಸರಣಿ ಕಾಣುತ್ತಿದೆ. ಕಲ್ಲಪ್ಪ ಹಂಡಿಬಾಗ್ ಆತ್ಮಹತ್ಯೆ ಪ್ರಕರಣ ನಿಜಕ್ಕೂ ಅತ್ಯಂತ ಗಂಭೀರ. ಇದರಲ್ಲಿ ಮಾಜಿ ಸಚಿವ, ವಿಶ್ವ ಹಿಂದೂ ಪರಿಷತ್ – ಬಜರಂಗ ದಳದ ನಾಯಕರು, ಹಿರಿಯ ಅಧಿಕಾರಿಗಳು, ಭೂ ದಂಧೆ ಮಾಫಿಯಾಗಳು ಭಾಗಿಯಾದ ಸಂಗತಿಗಳು ಬಯಲಿಗೆ ಬಂದಿವೆ. ಪ್ರಾಥಮಿಕ ವರದಿಗಳಂತೆ ಹಂಡಿಬಾಗ್ ತನ್ನದೇ ನೇರ ಕಾರಣವಿಲ್ಲದೆಯೂ ಆರೋಪಿಯಾಗಿ ಶಿಕ್ಷೆ ಅನುಭವಿಸಬೇಕಾದ ಅನಿವಾರ್ಯತೆ, ಅವಮಾನಗಳಿಂದ ಆತ್ಮಹತ್ಯೆಗೆ ಶರಣಾದ ಎಂಬ ಅಂಶಗಳು ಹೊರಬಂದಿವೆ. ಆದರೆ ಗಣಪತಿ ಸಾವಿನ ಬಗ್ಗೆ ಅರಚಾಡಿದ ಬಿಜೆಪಿ, ಈ ಪ್ರಕರಣದಲ್ಲಿ ಘನಘೋರ ಮೌನ ಇರುವುದೇಕೆ ?. ಕಲ್ಲಪ್ಪ ಸಾಮಾನ್ಯ ರೈತ ಕುಟುಂಬದ ಮಗನೆಂದೇ ? ಇಲ್ಲಿ 'ರಾಜಕಾರಣ' ಮಾಡಲಾಗದು ಎಂದೇ ? ಅಥವಾ ಈ ಆತ್ಮಹತ್ಯೆಯ ಕಗ್ಗೊಲೆಯಲ್ಲಿ ತನ್ನ ಕರುಳ ಕುಡಿಗಳ, ಕೈಗಳು ಹೊರ ಬರುತ್ತವೆ ಎಂಬ ಆತಂಕವೇ ? ಇಲ್ಲೂ ಅವರು ಹೋರಾಡ ಬಹುದಿತ್ತಲ್ಲ. ಈ ಇಬ್ಬಗೆಯ ನೀತಿಯ ಅರ್ಥವೇನು ? ಇಂತಹವರು ಅಧಿಕಾರಕ್ಕೆ ಮತ್ತೆ ಬಂದರೆ ಕರ್ನಾಟಕ ಏನಾದೀತು ?

ಇನ್ನು, ಅನುಪಮಾ ಶೆಣೈ, ಗಣಪತಿ, ಹಂಡಿಬಾಗ್ ಈ ಪ್ರಕರಣಗಳಿಗೂ ಬಿಜೆಪಿ ಸಂಘ ಪರಿವಾರದ ಎಳೆಗಳೇ ಇರುವುದನ್ನೂ ನಿರ್ಲಕ್ಷಿಸಲಾಗದು.

ಈ ವಿಷಯ ಅದೇನೇ ಇದ್ದರೂ ಸರಕಾರದ ಅಧಿಕಾರಿಗಳು ಯಾವುದೇ ಒತ್ತಡಗಳಿಗೆ ತಲೆ ಬಾಗಬೇಕಿಲ್ಲ, ಸಾಯುವುದೂ ಬೇಕಿಲ್ಲ. ಅವರಿಗೆ ನಮ್ಮ ಸಂವಿಧಾನ, ಕಾನೂನುಗಳು ಹಲವು ಅವಕಾಶ, ಹಕ್ಕುಗಳನ್ನೂ ನೀಡಿವೆ. ನ್ಯಾಯದ ಪರ ನಿಂತಲ್ಲಿ ನಾಗರೀಕ ಸಮಾಜವೂ ಬೆಂಬಲಿಸಲಿದೆ. ಆತ್ಮಹತ್ಯೆಯ ಸಾಂಕ್ರಾಮಿಕ ರೋಗಾಣುವಿಗೆ ಯಾರೂ ಬಲಿಯಾಗಬೇಕಿಲ್ಲ. ಹಾಗಾದಲ್ಲಿ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ಅಲುಗಾಡೀತು. ಇದೇ ಹೊತ್ತಿನಲ್ಲಿ 'ಅಧಿಕಾರಶಾಹಿ'ಯೂ ಜನ ಪರವಾಗಿ, ಸಂವಿಧಾನ ಪರವಾಗಿ ಕೆಲಸ ಮಾಡುವ ಕರ್ತವ್ಯವೂ ಇದೆ.

ಈ ಎಲ್ಲಾ ಪ್ರಕರಣಗಳೂ ನಮ್ಮೆಲ್ಲರನ್ನೂ ಗಂಭೀರವಾಗಿ ಚಿಂತಿಸುವಂತೆ ಮಾಡುತ್ತಿವೆ. ಅದು ಪರ್ಯಾಯ ಏನು ಎಂಬುದರತ್ತ, ಪರ್ಯಾಯ ಎಂಬುದು ಆಗಸದಿಂದ ಉದುರುವುದಿಲ್ಲ. ಅದು ಜನಸಮೂಹದ ಆಂದೋಲನಗಳಿಂದ ಮಾತ್ರ ರೂಪುಗೊಳ್ಳಲು ಸಾಧ್ಯ ಅಲ್ಲವೇ?

ನಾಳಿನ ಕಾರ್ಯಕ್ರಮಗಳು

ಜುಲೈ 17 ರಿಂದ 25	ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿರುವ ಬೆಲೆ ಏರಿಕೆ, ನಿರುದ್ಯೋಗದ ವಿರುದ್ಧ ರಾಜ್ಯವ್ಯಾಪಿ ಪ್ರತಿಭಟನಾ ಕಾರ್ಯಾಚರಣೆ.
ಜುಲೈ 23 ರಿಂದ 25	ದಲಿತ ಶೋಷಣ ಮುಕ್ತಿ ಮಂಚ್ (ಡಿಎಸ್‌ಎಂಎಂ) ಅಖಿಲ ಭಾರತ ಅಧ್ಯಯನ ಶಿಬಿರ, ಅಂಬೇಡ್ಕರ್ ಭವನ, ಹಾಸನ.
ಜುಲೈ 25	ಸರಕಾರಿ ಸಾರಿಗೆ ನೌಕರರ ಮುಷ್ಕರ
ಆಗಸ್ಟ್ 09	ಜೆಸಿಟಿಯು ವತಿಯಿಂದ ರಾಜ್ಯ ಮಟ್ಟದ ಬೃಹತ್ ರ್‍ಯಾಲಿ, ಬೆಂಗಳೂರು.
ಆಗಸ್ಟ್ 14	ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಬೆಂಗಳೂರು ಉತ್ತರ ಜಿಲ್ಲಾ ಸಮ್ಮೇಳನ, ರಾಜಾಜಿನಗರ, ಬೆಂಗಳೂರು.
ಆಗಸ್ಟ್ 20–21	ದುಡಿಯುವ ಮಹಿಳೆಯರ ಸಮನ್ವಯ ಸಮಿತಿ(ಸಿಐಟಿಯು) ರಾಜ್ಯ ಸಮಾವೇಶ, ಮೈಸೂರು.
ಆಗಸ್ಟ್ 26–28	ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯ ಸಮ್ಮೇಳನ, ಕೋಲಾರ.
ಸೆಪ್ಟಂಬರ್ 02	ಅಖಿಲ ಭಾರತ ಸಾರ್ವತ್ರಿಕ ಮುಷ್ಕರ

ಸಿಐಟಿಯು ಜಿಲ್ಲಾ ಸಮ್ಮೇಳನಗಳು

ಜುಲೈ 24–25 : ಬೆಂಗಳೂರು ದಕ್ಷಿಣ ಜಿಲ್ಲೆ	ಆಗಸ್ಟ್ 06–07 ಬೆಳಗಾಂ
ಜುಲೈ 29–30 : ಕಲಬುರಗಿ ಜಿಲ್ಲೆ	ಆಗಸ್ಟ್ 6–7 : ತುಮಕೂರು ಜಿಲ್ಲೆ
ಜುಲೈ 30–31 – ಉತ್ತರ ಕನ್ನಡ	ಆಗಸ್ಟ್ 11–12 : ವಿಜಯಪುರ ಜಿಲ್ಲೆ
ಜುಲೈ 30–31 – ಚಿತ್ರದುರ್ಗ	ಆಗಸ್ಟ್ 13 : ಬೀದರ್ ಜಿಲ್ಲೆ
ಜುಲೈ 30 : ಯಾದಗಿರಿ ಜಿಲ್ಲೆ	ಆಗಸ್ಟ್ 13–14 : ಹಾಸನ ಜಿಲ್ಲೆ
ಜುಲೈ 31– ಆಗಸ್ಟ್ 01 : ಕೋಲಾರ ಜಿಲ್ಲೆ	

ಅತಿಥಿ ಉಪನ್ಯಾಸಕರನ್ನು ಕೈಬಿಟ್ಟ ಸರ್ಕಾರ : ಕಾಲೇಜು ಶಿಕ್ಷಣ ಇಲಾಖೆಗೆ ಮುತ್ತಿಗೆ



ಸೇವೆ ಸಲ್ಲಿಸುತ್ತಿರುವ 14,531 ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆಯನ್ನು ಒದಗಿಸಬೇಕೆಂದು ಹಲವಾರು ಬಾರಿ ಹೋರಾಟ ಮಾಡಿರುವುದರ ಭಾಗವಾಗಿ ಅಂದಿನ ಉನ್ನತ ಶಿಕ್ಷಣ ಸಚಿವರಾಗಿದ್ದ ಟಿ.ಬಿ ಜಯಚಂದ್ರರವರು ಸಂಘದ ಪದಾಧಿಕಾರಿಗಳೊಂದಿಗೆ ಮಾತುಕತೆ ನಡೆಸಿ ಸಚಿವರು ಮತ್ತು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಪ್ರಸಕ್ತ 2016–17ನೆಯ ಶೈಕ್ಷಣಿಕ ವರ್ಷಕ್ಕೆ ಮುಂದುವರಿಸಲಾಗುವುದೆಂದು, ಅಧಿಕೃತವಾಗಿ ಮತ್ತು ಅಧಿಕೃತ ಅದೇಶವನ್ನು ಹೊರಡಿಸಲಾಗುವುದು ಎಂದು ಹೇಳಿದ್ದರು. ಅದರಂತೆ ತಡವಾಗಿಯಾದರೂ, ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಕಳೆದ ವರ್ಷ ಸೇವೆಯಲ್ಲಿದ್ದ ಅತಿಥಿ ಉಪನ್ಯಾಸಕರನ್ನು ಮುಂದುವರೆಸುವ ಕುರಿತು ಆದೇಶ ಹೊರಡಿಸಿ ಕಾಲೇಜು ಶಿಕ್ಷಣ ಇಲಾಖೆಗೆ ಕಳಿಸಿರುತ್ತಾರೆ.

ಆದರೆ ಕಾಲೇಜು ಶಿಕ್ಷಣ ಇಲಾಖೆ ತನ್ನ ಉದ್ಧಟತನವನ್ನು ಪ್ರದರ್ಶಿಸಿ, ಪ್ರಸಕ್ತ ವರ್ಷಕ್ಕೆ ಹೊಸದಾಗಿ ಆನ್ ಲೈನ್ ಮುಖಾಂತರ ಅತಿಥಿ ಉಪನ್ಯಾಸಕರಿಗೆ ಆಯ್ಕೆ ಮಾಡಲು ಮುಂದಾಗುತ್ತಿರುವುದರಿಂದ ಕಳೆದ 15–20 ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದವರು ಈಗ ಬೀದಿಗೆ ಬಿದ್ದಿದ್ದಾರೆ.

ಹೀಗಾಗಿ ಕರ್ನಾಟಕ ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘ ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಕರ್ನಾಟಕ ರಾಜ್ಯ ಸಮಿತಿಗಳ ನೇತೃತ್ವದಲ್ಲಿ ಜುಲೈ 21, 2016 ರಂದು ಅತಿಥಿ ಉಪನ್ಯಾಸಕರು ಕಾಲೇಜು ಶಿಕ್ಷಣ ಇಲಾಖೆಯನ್ನು ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದ್ದಾರೆ.

ಪ್ರತಿಭಟನೆಯಲ್ಲಿ ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಹಾಗೂ ಸಂಘಟನೆಯ ಗೌರವಾಧ್ಯಕ್ಷರಾದ ಬಿ.ರಾಜಶೇಖರಮೂರ್ತಿ, ರಾಜ್ಯಾಧ್ಯಕ್ಷರಾದ ಶ್ರೀನಿವಾಸಾಚಾರ್ ಎನ್., ಸಂಘಟನಾ ಕಾರ್ಯದರ್ಶಿ ಫಯಾಜುಲ್ಲಾ, ಜಿಲ್ಲಾಧ್ಯಕ್ಷರಾದ ಡಾ.ಹೇಮಲತಾ ರಾಜಣ್ಣ ಮುಂತಾದವರು ಭಾಗವಹಿಸಿದ್ದರು.

ಬೆಲೆ ಏರಿಕೆ, ನಿರುದ್ಯೋಗ ವಿರುದ್ಧ ಸಿಪಿಐ(ಎಂ) ನಿಂದ ತುಮಕೂರಿನಲ್ಲಿ ಪ್ರಚಾರ



ಬೆಲೆ ಏರಿಕೆಯನ್ನು ತಡೆಗಟ್ಟಲು, ರೈತರ ಸಾಲ ಮನ್ನಾ ಮಾಡಲು ಒತ್ತಾಯಿಸಿ, ಉದ್ಯೋಗ ಸೃಷ್ಠಿಗಾಗಿ, ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಬಲಪಡಿಸಲು, ಎಲ್ಲಾ ಬಡವರಿಗೆ ನಿವೇಶನ ಸಹಿತ ಮನೆಗಾಗಿ, ಸರಕಾರಿ ಜಮೀನುಗಳಿಗೆ ಹಕ್ಕುಪತ್ರಕ್ಕಾಗಿ, ಮಹಾನಗರ ಪಾಲಿಕೆಯ ಅವೈಜ್ಞಾನಿಕ ತೆರಿಗೆ ನೀತಿ ಖಂಡಿಸಿ, ಸಮರ್ಪಕ ಕುಡಿಯುವ ನೀರಿಗಾಗಿ ಆಗ್ರಹಿಸಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳನ್ನು ಖಂಡಿಸಿ ಸಿಪಿಐ(ಎಂ) ಪಕ್ಷದಿಂದ ತುಮಕೂರಿನಲ್ಲಿ ಪ್ರಚಾರಂದೋಲನವನ್ನು ಹಮ್ಮಿಕೊಳ್ಳಲಾಗಿತ್ತು. ನಗರದ ವಿವಿಧ ಬಡಾವಣೆಗಳಲ್ಲಿ ಪ್ರಚಾರ ನಡೆಸಿದ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ಜಿಲ್ಲೆಯ ವಿವಿಧೆಡೆ ಪ್ರಚಾರವನ್ನು ಹಮ್ಮಿಕೊಂಡಿದ್ದರು.

ಇದೇ ಸಂದರ್ಭದಲ್ಲಿ ತುಮಕೂರು ಮಹಾನಗರ ಪಾಲಿಕೆಯು ಜನತೆಗೆ ಹಲವು ರೀತಿಯ ತೆರಿಗೆಗಳನ್ನು ಹಾಕುವ ಮಹಾನಗರ ಪಾಲಿಕೆ ಜನತೆಗೆ ಅಗತ್ಯವಾಗಿ ಬೇಕಾದ ಮೂಲಭೂತ ವ್ಯವಸ್ಥೆಗಳ ಕಡೆ ಗಮನಹರಿಸುತ್ತಿಲ್ಲ. ಜನ ಪ್ರತಿ ದಿನ ಕುಡಿಯುವ ನೀರಿಗಾಗಿ ಪರಿತಪಿಸುವ ಸ್ಥಿತಿ ನಿರ್ಮಾಣವಾಗಿದೆ ಎಲ್ಲಾ ಬಡವಣೆಗಳಿಗೂ ಸಮರ್ಪಕವಾದ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗಿದೆ. ಇದಕ್ಕಾಗಿ ಓವರ್ ಟ್ಯಾಂಕ್‌ಗಳ ನಿರ್ಮಾಣಕ್ಕಾಗಿ ಸಿಪಿಐ(ಎಂ) ಒತ್ತಾಯಿಸುತ್ತದೆ ಮತ್ತು ನೀರಿನ ಖಾಸಗೀಕರಣವನ್ನು ವಿರೋಧಿಸುತ್ತದೆ ಎಂದು ಪ್ರಚಾರ ನಡೆಸಲಾಯಿತು.

ತೆರಿಗೆ ಪದ್ಧತಿ ಅವೈಜ್ಞಾನಿಕವಾಗಿದ್ದು ಪುನರ್ ಪರಿಶೀಲಿಸಿ ವೈಜ್ಞಾನಿಕ ದರ ನಿಗದಿಪಡಿಸಬೇಕು. ಮಹಾನಗರ ಪಾಲಿಕೆಯು ಸರಳ ಖಾತೆಯ ಆಂದೋಲನದ ಮೂಲಕ ಸರ್ಕಾರಿ ಜಾಗಗಳಲ್ಲಿ ಮನೆಗಳನ್ನು ನಿರ್ಮಿಸಿಕೊಂಡಿರುವ ಬಡಜನರಿಗೆ ಖಾತೆಗಳನ್ನು ಮಾಡಿಸಿಕೊಳ್ಳಲು ಅನುವು ಮಾಡಿಕೊಡಬೇಕು, ಹಕ್ಕು ಪತ್ರಗಳನ್ನು ವಿತರಣೆ ಮಾಡಬೇಕು ಎಂದು ಸಿಪಿಐ(ಎಂ) ಒತ್ತಾಯಿಸಿದೆ.

ಜನತೆಯ ಹಕ್ಕುಗಳ ಇತ್ಯಾರ್ಥಕ್ಕಾಗಿ ಜುಲೈ 25, 2016 ಸೋಮವಾರ ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಎನ್. ಕೆ.ಸುಬ್ರಮಣ್ಯ, ನಗರ ಕಾರ್ಯದರ್ಶಿ ಎಸ್. ರಾಘವೇಂದ್ರ, ಜೂನಿ, ಷಣ್ಮುಖಪ್ಪ, ರಾಮಚಂದ್ರು, ಮಂಜು, ಶಂಕರಪ್ಪ ಸೇರಿದಂತೆ ಮುಂತಾದವರು ನೇತೃತ್ವವಹಿಸಿದ್ದರು.

ಬಿಜಿವಿಎಸ್‌ನ ಶ್ರೀಮತಿ ಎನ್ ರೇಖಾ ನಿಧನ

ಭಾರತ ಜ್ಞಾನ ವಿಜ್ಞಾನ ಸಮಿತಿಯ ಹಾಸನ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯೆ ಹಾಗೂ ಸಮಾಜಮುಖಿ ಚಿಂತಕಿ ಶ್ರೀಮತಿ ಎನ್ ರೇಖಾರವರ ನಿಧನಕ್ಕೆ ಬಿಜಿವಿಎಸ್ ಕಚೇರಿಯಲ್ಲಿ ಜುಲೈ 20ರಂದು ನಡೆದ ಶ್ರದ್ಧಾಂಜಲಿ ಸಭೆ ನಡೆಸಲಾಯಿತು.

ಬಿಜಿವಿಎಸ್ ಜಿಲ್ಲಾ ಉಪಾಧ್ಯಕ್ಷ ಬಿ.ಜಿ.ಗೋಪಾಲಕೃಷ್ಣ ಶ್ರದ್ಧಾಂಜಲಿ ನಿರ್ಣಯ ಮಂಡಿಸಿ ಮಾತನಾಡಿ ಶ್ರೀಮತಿ ರೇಖ ರವರು ಕಳೆದ ನಾಲ್ಕು ವರ್ಷಗಳಿಂದ ಭಾರತ ಜ್ಞಾನ ವಿಜ್ಞಾನ ಸಮಿತಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು ಉತ್ತರ ಬಡಾವಣಾ ಘಟಕ ಖಜಾಂಚಿಯಾಗಿ ನಂತರ ಕಾರ್ಯದರ್ಶಿಯಾಗಿ ತಾರಸಿ ಕೃಷಿ, ಸಾಂಸ್ಕೃತಿಕ ಸಂವಹನ, ಪರಿಸರ ಪಯಣ, ಅಡುಗೆ ಮನೆಯಲ್ಲಿ ವಿಜ್ಞಾನ ಚಟುವಟಿಕೆಯ ಸಂಚಾಲಕರಾಗಿ ಕಾರ್ಯನಿರ್ವಹಿಸಿ ಜನಪ್ರೀತಿಗಳಿಸಿ ಉತ್ತಮ ಸಂಘಟಕಿಯಾಗಿದ್ದರು.

ಕಳೆದ ಎರಡು ವರ್ಷಗಳ ಕಾಲ ಹಾಸನ ತಾಲೋಕು ಖಜಾಂಚಿಯಾಗಿ ಹಾಸನ ನಗರದ ಹಿಂದುಳಿದ ಬಡಾವಣೆಗಳಲ್ಲಿ ಆರೋಗ್ಯ, ನೈರ್ಮಲ್ಯ ಜ್ಞಾನ ನೀಡುವ ಸಂಬಂಧ ಘಟಕಗಳನ್ನು ವಿಸ್ತರಿಸುವ ಜವಾಬ್ದಾರಿ ಹೊತ್ತು ಬಿಜಿವಿಎಸ್ ನ ಹೆಚ್ಚಿನ ಸದಸತ್ವ ನೊಂದಾಯಿಸಿದ್ದರು ಹಾಗೂ ಹಾಸನ ಜಿಲ್ಲೆಯಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿ ಮತ್ತು ಮಕ್ಕಳ ರಕ್ಷಣಾ ಘಟಕ ಜಂಟಿಯಾಗಿ ಆಯೋಜಿಸಿದ್ದ ಮಕ್ಕಳ ಕಾವ್ಯಕಮ್ಮಟದ ಜಿಲ್ಲಾ ಸಂಚಾಲಕಿಯಾಗಿ ನೇತೃತ್ವ ವಹಿಸಿ ಜಿಲ್ಲೆಯಾದ್ಯಂತ ಯಶಸ್ವಿಯಾಗಿ ಜಾರಿಗೊಳಿಸಿದ್ದರು. ಅವರ ಕಾರ್ಯದ ವೇಗ, ಬದ್ಧತೆ ಮತ್ತು ವೈಚಾರಿಕ ಗುಣಲಕ್ಷಣ ಗುರುತಿಸಿ ಬಿಜಿವಿಎಸ್ ಜಿಲ್ಲಾ ಕಾರ್ಯಕಾರಿ ಮಂಡಳಿ ಸದಸ್ಯರನ್ನಾಗಿ ಆರನೇ ಜಿಲ್ಲಾ ಸಮ್ಮೇಳನ ಅವರನ್ನು ಆಯ್ಕೆ ಮಾಡಿತ್ತು. ರೇಖರವರ ಅಕಾಲಿಕ ಮರಣದಿಂದ ಜಿಲ್ಲೆಯಲ್ಲಿ ಬಿಜಿವಿಎಸ್ ಬೆಳವಣಿಗೆಯ ವೇಗಕ್ಕೆ ಬಹು ದೊಡ್ಡ ತಡೆ ಉಂಟಾಗಿದೆ ಎಂದು ಮಂಡಿಸಿದರು.



ಶ್ರದ್ಧಾಂಜಲಿ ಸಭೆಯಲ್ಲಿ ಬಿಜಿವಿಎಸ್ ರಾಜ್ಯ ಉಪಾಧ್ಯಕ್ಷ ಅಹಮದ್ ಹಗರೆ ಮಾತನಾಡಿ ರೇಖ ಬಡತನವನ್ನೆ ಹಾಸು ಹೊದ್ದು ಮಲಗಿದ್ದವರು ತಮ್ಮ ಬಡತನ ಮತ್ತು ಸಾಮಾಜಿಕ ಅಭದ್ರತೆ ಅವರನ್ನು ಒಬ್ಬ ಸಮಾಜಮುಖಿ ಕಾರ್ಯಕರ್ತೆಯನ್ನಾಗಿ ರೂಪಿಸಿತ್ತು. ಸಮಾಜದ ಅಭಿವೃದ್ಧಿಯಿಂದ ಮಾತ್ರವೇ ವೈಯಕ್ತಿಕ ಅಭಿವೃದ್ಧಿಯೂ ಸಹ ಬೆಳವಣಿಗೆ ಹೊಂದುತ್ತದೆ ಎಂದು ಅನುಭವದಿಂದ ನಂಬಿದ್ದ ರೇಖ ತಮ್ಮ ವೈಯುಕ್ತಿಕ ಸಮಸ್ಯೆಗಳನ್ನು ಮರೆತು ಜನ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆಯನ್ನು ಬಿಜಿವಿಎಸ್ ಜಿಲ್ಲಾ ಸಮಿತಿ ಅಧ್ಯಕ್ಷ ಎಚ್.ಟಿ.ಗುರುರಾಜು ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಮಮತಾ ಶಿವು ಬಿಜಿವಿಎಸ್ ಹಾಸನ ತಾಲ್ಲೂಕು ಉಪಾಧ್ಯಕ್ಷ ಪುರುಶೋತ್ತಮ, ಜಿಲ್ಲಾ ಬಿಜಿವಿಎಸ್ ಖಜಾಂಚಿ ಜಯಪ್ರಕಾಶ್, ಸ್ಕಾಲರ್ ಶಾಲೆಯ ಮುಖ್ಯ ಶಿಕ್ಷಕ ಹೆಚ್.ಆರ್ ರವೀಶ್ ಉಪಸ್ಥಿತರಿದ್ದು ಮಾತನಾಡಿದರು.

ಮಮತ ಶಿವು

ವಿಧಾನಸಭೆಯಲ್ಲಿ ಭವಿಷ್ಯನಿಧಿ ಕರಡು ಮಂಡಿಸಿ



ವಿಧಾನಸಭಾ ಅಧಿವೇಶನದಲ್ಲಿ ಹಮಾಲಿ ಕಾರ್ಮಿಕರಿಗಾಗಿ ಕಾರ್ಮಿಕ ಇಲಾಖೆ ಸಿದ್ಧಪಡಿಸಿರುವ 'ಭವಿಷ್ಯ ನಿಧಿ' ಕರಡನ್ನು ವಿಧಾನಸಭೆ ಅಧಿವೇಶನದಲ್ಲಿ ಮಂಡಿಸಿ ಕಾಯ್ದೆ ರೂಪಿಸಬೇಕೆಂದು ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್(ಸಿಐಟಿಯು) ವತಿಯಿಂದ ಜುಲೈ 20ರಂದು ಹಮಾಲಿ ಕಾರ್ಮಿಕರು ರಾಜ್ಯಾದ್ಯಂತ ಶಾಸಕರ ಕಛೇರಿ ಮತ್ತು ಮನೆ ಮುಂಭಾಗ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದ್ದಾರೆ.

ಬೆಂಗಳೂರಿನಲ್ಲಿ ಮಹಾಲಕ್ಷ್ಮೀ ಬಡಾವಣೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಶಾಸಕರಾದ ಕೆ.ಗೋಪಾಲಯ್ಯರವರಿಗೆ ಯಶವಂತಪುರ ಎಪಿಎಂಸಿ ಕಾರ್ಮಿಕರು, ಆಟೋ ಚಾಲಕರು ಮತ್ತು ಕಾರ್ಮಿಕ ಮುಖಂಡರು ಭಾಗವಹಿಸಿ ಮನವಿ ಸಲ್ಲಿಸದ್ದಾರೆ. ಮನವಿ ಸ್ಪಂದಿಸಿದ ಶಾಸಕರು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಸಚಿವರಿಗೆ ಪತ್ರ ಬರೆಯುವುದಾಗಿ ತಿಳಿಸಿದರು. ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ, ಸಿಐಟಿಯು ಉಪಾಧ್ಯಕ್ಷರಾದ ಟಿ.ಲೀಲಾವತಿ, ಆಟೋ ಚಾಲಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರುದ್ರಮೂರ್ತಿ, ಹಮಾಲಿ ಕಾರ್ಮಿಕ ಸಂಘದ ಮುಖಂಡರಾದ ಕುಮರೇಶ್, ಮೂರ್ತಿ, ತಂಗಮ್ಮ, ಮಣಿಮಾಲ, ತಿಮ್ಮೇಗೌಡ, ಗೋಪಿ ಮತ್ತು ಸಿಡಬ್ಲ್ಯೂಎಫ್ಐ ಜಿಲ್ಲಾಧ್ಯಕ್ಷರಾದ ಕೆ.ವೀರಣ್ಣ, ಉಪಾಧ್ಯಕ್ಷರಾದ ಪಾರ್ಥಿಬನ್, ನೀಲಕಂಠ, ಮುಂತಾದವರು ಭಾಗವಹಿಸಿದ್ದರು.

ಹುಬ್ಬಳಿಯ ಮಿನಿ ವಿಧಾನಸೌಧದ ಎದುರು ಹಮಾಲಿ ಕಾರ್ಮಿಕರು ಪ್ರತಿಭಟನೆ ನಡೆಸಿ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಮಹೇಶ್ ಪತ್ತಾರ್ ಮತ್ತು ಇತರ ಮುಖಂಡರು ಭಾಗವಹಿಸಿದ್ದರು. ಲಿಂಗಸಗೂರಿನಲ್ಲಿ ಶಾಸಕ ಮಾನಪ್ಪ ವಜ್ಜಲ ಅವರ ಕಛೇರಿ ಮುಂಭಾಗ ಪ್ರತಿಭಟನೆ ನಡೆಸಲಾಗಿದೆ. ತುಮಕೂರಿನಲ್ಲಿಯೂ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಗಿದೆ. ಎನ್.ಕೆ.ಸುಬ್ರಮಣ್ಯ ಮತ್ತು ಇತರೆ ಮುಖಂಡರು ಭಾಗವಹಿಸಿದ್ದರು.

ರಾಜ್ಯದ ವಿವಿಡೆಡೆ ಸುಮಾರು 60ಕ್ಕೂ ಹೆಚ್ಚಿನ ಶಾಸಕರಿಗೆ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್ (ಸಿಐಟಿಯು) ವತಿಯಿಂದ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಗಿದೆ.

ಬಳ್ಳಾರಿ ಜಿಲ್ಲಾಧಿಕಾರಿ ಕಛೇರಿ ಮುಂಭಾಗ ಮಂಗಳವಾದ್ಯ ಕಲಾವಿದರ ಪ್ರತಿಭಟನೆ

ಮಂಗಳವಾದ್ಯ (ಬ್ಯಾಂಡ್ ವಾದ್ಯ) ಕಲಾವಿದರ ಸಂಘ. ಬಳ್ಳಾರಿ ಜಿಲ್ಲೆ. ಮಂಗಳವಾದ್ಯ ಕಲೆಯನ್ನು ಸಂರಕ್ಷಿಸಲು ಮತ್ತು ಕಲಾವಿದರ ಕುಟುಂಬಗಳ ಅಭಿವೃದ್ಧಿಗಾಗಿ ಶ್ರಮಿಸಲು ಜುಲೈ 21ರಂದು ಬಳ್ಳಾರಿ ಜಿಲ್ಲಾಧಿಕಾರಿ ಕಛೇರಿ ಮುಂಭಾಗ ಬೃಹತ್ ಪ್ರತಿಭಟನಾ ಮೇಳವನ್ನು ಆಯೋಜಿಸಿತು.

ಕಳೆದ ತಿಂಗಳು ಹೊಸಪೇಟೆ ನಗರದಲ್ಲಿ ಜಿಲ್ಲಾ ಮಟ್ಟದ ಸಮಾವೇಶವನ್ನು ನಡೆಸುವ ಮೂಲಕ ಸಂಘಟನೆ ಅಸ್ತಿತ್ವಕ್ಕೆ ಬಂದಿದೆ. ಸಮಾವೇಶದಲ್ಲಿ 15 ಪ್ರಮುಖ ಹಕ್ಕೊತ್ತಾಯಗಳನ್ನು ಪರಿಹರಿಸುವಂತೆ ರಾಜ್ಯ ಹಾಗೂ ಕೇಂದ್ರ ಸರಕಾರಗಳನ್ನು ಒತ್ತಾಯಿಸಲು ಪ್ರತಿಭಟನಾ ಪ್ರದರ್ಶನ ನಡೆಸಿದರು. ಜಿಲ್ಲೆಯ ಎಲ್ಲಾ ತಾಲೂಕುಗಳು ಮತ್ತು ಗ್ರಾಮಗಳ ಮಂಗಳವಾದ್ಯ (ಬ್ಯಾಂಡ್)ಕಂಪೆನಿಗಳು, ಇತರೇ ಎಲ್ಲಾ ಮಂಗಳವಾದ್ಯ ಕಲಾವಿದರು, ತಮ್ಮ ತಮ್ಮ ವಾದ್ಯಗಳೊಂದಿಗೆ ಮತ್ತು ಇತರೇ ಕುಟುಂಬದ ಸದಸ್ಯರೊಂದಿಗೆ ಸೇರಿದರು.

ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳು, ಸಮಾಜ ಕಲ್ಯಾಣ ಸಚಿವರಾದ ಹೆಚ್.ಆಂಜನೇಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾದ ಶ್ರೀಮತಿ ಉಮಾಶ್ರೀರವರಿಗೆ ಮನವಿ ಸಲ್ಲಿಸಿದರು.

ಎಲ್ಲಾ ಸಮುದಾಯಗಳ ಮತ್ತು ಗ್ರಾಮ/ನಗರದ ಶುಭ ಸಮಾರಂಭಗಳಿಗೆ ನಮ್ಮ ಮಂಗಳವಾದ್ಯ ಮತ್ತು ನಮ್ಮ ಕಲೆ ಬೇಕಾಗಿದೆ. ಅದು ಎಲ್ಲರಿಗೆ ಶುಭವನ್ನು ತರಲಿದೆ, ಆದರೇ ನಾವು ಮಾತ್ರ ಯಾರಿಗೂ ಬೇಡಾ! ಮದುವೆ, ಮುಂಜಿ, ಹುಟ್ಟುಹಬ್ಬ, ದೇವಸ್ಥಾನಗಳ ಪೂಜೆ, ಜಾತ್ರೆಗಳು, ರಾಜಕಾರಣಿಗಳ ಆಗಮನ, ಸಾವಿಗೂ ಮಂಗಳವಾದ್ಯ ಮೊಳಗಲೇಬೇಕು ಅದರ ಶುಭಾಶಯ ಬೇಕೇಬೇಕು. ಆದರೇ, ಸಾವಿರಾರು ವರ್ಷಗಳಿಂದ ಅಷ್ಟೇ ಏಕೆ, ಆದಿಕಾಲದ ಮಂಗಳವಾದ್ಯ ಪರಿಕರ ತಯಾರಿಯಿಂದ ಹಿಡಿದು, ಅದನ್ನು ಅಭಿವೃದ್ಧಿ ಪಡಿಸುವುದರಿಂದ ಮತ್ತು ಎಲ್ಲರಿಗೂ ಸಂತೋಷ ಮತ್ತು ಉಲ್ಲಾಸ ಉಂಟು ಮಾಡುವ ಸಂಗೀತವನ್ನು ಅಭಿವೃದ್ಧಿಪಡಿಸಿ, ಅಲ್ಲಿಂದ ಇಲ್ಲಿಯವರೆಗೆ ನಮ್ಮ ಜೀವವನ್ನೇ ಉಸಿರಾಗಿಸಿ ಸಂಗೀತ ನುಡಿಸಿ ಸಮಾಜ ಸೇವೆಯಲ್ಲಿ ತೊಡಗಿ ನಮ್ಮ ಜೀವದ ಶ್ರೀಗಂಧವನ್ನು ಸಮಾಜಕ್ಕಾಗಿ ತೇಯ್ದು ಪರಿಮಳವನ್ನು ಹರಡಿದ್ದೇವೆ. ಆದರೇ ನಾವುಗಳು ಮಾತ್ರ ಯಾರಿಗೂ ಬೇಡಾ – ಎಂಬ ಅಳಲು ಈ ಪ್ರತಿಭಟನೆಯಲ್ಲಿ ವ್ಯಕ್ತವಾಯಿತು.



ಸಮಾಜದಲ್ಲಿ ನಾವು ಅಸ್ಪೃಶ್ಯರು, ಕೀಳು, ಬಹಿಷ್ಕೃತರಾಗಿದ್ದೇವೆ. ಶುಭ ಸಮಾರಂಭಗಳಲ್ಲಿ ನಮ್ಮನ್ನು ನಡೆಸಿಕೊಳ್ಳುವ ರೀತಿಯು ಬೇಸರ ತರಿಸುವಂತಹುದಾಗಿದೆ. ಅಲ್ಲಿ ದೊರೆಯುವ ವೇತನವೂ ಬೆಲೆ ಏರಿಕೆಗೆ ಅನುಸಾರವಾಗಿಲ್ಲ. ಸಭ್ಯ ನಾಗರೀಕ ಸಮಾಜ ಈ ರೀತಿಯಲ್ಲಿ ನಡೆಸಿಕೊಂಡರೇ, ಸಾಮಾಜಿಕ ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸುತ್ತೇವೆಂದು ಹೇಳುವ ಕೇಂದ್ರ ಹಾಗೂ ರಾಜ್ಯ ಸರಕಾರಗಳ ನಮ್ಮ ಕಲೆ ಮತ್ತು ಕಲಾವಿದರ ಮತ್ತು ನಮ್ಮ ಕುಟುಂಬಗಳ ಕುರಿತ ಅವುಗಳ ವರ್ತನೆ ಅದಕ್ಕಿಂತಲೂ ಬೇಸರ ತರುವಂತಹದ್ದಾಗಿದೆ. ನಮ್ಮ ಕಲೆಗಾಗಲೀ, ಕಲಾವಿಧರಿಗಾಗಲೀ ಪ್ರೋತ್ಸಾಹವಿಲ್ಲವಾಗಿದೆ. ಅದೇ ರೀತಿ, ನಮ್ಮ ಕುಟುಂಬಗಳಿಗೆ ರಕ್ಷಣೆಯಿಲ್ಲವಾಗಿದೆ. ಹೀಗಾಗಿ, ಈ ಬೇಸರ ತರಿಸುವ ಮತ್ತು ಉಸಿರುಗಟ್ಟಿಸುವ ವಾತಾವರಣದಿಂದಾಗಿ ನಮ್ಮ ಅನೇಕ ಕುಟುಂಬಗಳು ಈ ಕಲೆಯಿಂದ ದೂರ ಸರಿಯುವಂತಾಗಿ ನಮ್ಮ ಪರಂಪರೆಯಲ್ಲಿ ಹುಟ್ಟಿ ಅಭಿವೃದ್ಧಿಗೊಳಿಸಲ್ಪಟ್ಟ ಈ ಕಲೆ ಅವಸಾನದಂಚಿಗೆ ಸಾಗುವಂತಾಗಿದೆ ಎಂದು ಪ್ರತಿಭಟನೆಯಲ್ಲಿ ಆಗ್ರಹಿಸಿದರು.

ಮಂಗಳವಾದ್ಯ ಕಲಾವಿದರಿಗೆ ಕನಿಷ್ಠ 3000ರೂಗಳ ಮಾಸಾಶನ ಒದಗಿಸಬೇಕು, ಮಂಗಳವಾದ್ಯ ಪರಿಕರಗಳ ಖರೀದಿಗಾಗಿ ಶೇ.75ರಂತೆ ಸಬ್ಸಿಡಿಸಹಿತ ಮತ್ತು ಉಳಿದ ಶೇ 25 ಸಾಲಕ್ಕೆ ಬಡ್ಡಿರಹಿತ ಸಾಲ ಸೌಲಭ್ಯ ಒದಗಿಸಬೇಕು, ಮಂಗಳವಾದ್ಯ ಕಲಾವಿದರ ಕಲ್ಯಾಣ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ಮಂಗಳವಾದ್ಯ ಕಲೆಯ ಇತಿಹಾಸ ಸಂಶೋಧನೆಗೆ ನೆರವು ನೀಡಬೇಕು, ಬದುಕಿಗಾಗಿ ಇತರೆ ಉದ್ಯೋಗಗಳನ್ನು ಕೈಗೊಳ್ಳಲು ಶೇ.75 ಸಹಾಯಧನದಲ್ಲಿ ಕನಿಷ್ಠ 05 ಲಕ್ಷರೂವರೆಗೆ ಸಾಲ ಒದಗಿಸಬೇಕು ಮತ್ತಿತರ ಬೇಡಿಕೆಗಳನ್ನು ಸಂಘಟನೆ ಮುಂದಿಟ್ಟಿದೆ.

ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡಗಳ ಜನಸಂಖ್ಯೆಗನುಗುಣವಾಗಿ ಬಜೆಟ್‌ನ ಅನುದಾನ ಒದಗಿಸಲು ಕೇಂದ್ರ ಸರಕಾರ ಶಾಸನ ರೂಪಿಸಬೇಕು. ರಾಜ್ಯ ಸರಕಾರ ರೂಪಿಸಿರುವ ಇಂತಹ ಶಾಸನಕ್ಕೆ ತಕ್ಷಣ ನಿಯಮಗಳನ್ನು ರೂಪಿಸಬೇಕು ಮತ್ತು

ಪುಟ 6 ಕ್ಕೆ

ಮೈಸೂರು ಸಿಐಟಿಯು ಸಮ್ಮೇಳನ: ಮಹಾರಾಜರ ನಗರಿ ಕಾರ್ಮಿಕರ ನಗರಿ ಆಗಬೇಕಿದೆ

ಮೈಸೂರು ಜಿಲ್ಲಾ 8ನೇ ಜಿಲ್ಲಾ ಸಮ್ಮೇಳನ ಜುಲೈ 9 ಮತ್ತು 10 ರಂದು ಮೈಸೂರಿನ ಗೀತಾ ಮಂದಿರದಲ್ಲಿ ನಡೆಯಿತು. ಜಿಲ್ಲಾ ಅಧ್ಯಕ್ಷರಾದ ಎನ್. ಕೆ. ಬಾಲಾಜಿರಾವ್ ಧ್ವಜಾರೋಹಣ ನಡೆಸಿದರು. ಸುಮಾರಂಭದ ಉದ್ಘಾಟನೆಯನ್ನು ರಾಜ್ಯಾದ–್ಷರಾದ ಕಾಂ. ವಿಜೆಕೆ ನಾಯರ್ ನೇರವೇರಿಸಿ ಮಾತನಾಡಿದರು. ಸಿಐಟಿಯುಗೆ 46ರ ಹುಟ್ಟು ಹಬ್ಬ ಆಗಿದೆ. ಅದು ಇನ್ನೂ ಯುವಕ ಬಹಳ ಫಾಸ್ಟ್ ಆಗಿ ಕೆಲಸ ಮಾಡುತ್ತಿದೆ. ಸದಾ ಚಳುವಳಿಯ ಮುಂಚೂಣಿಯಲ್ಲಿ ಇದೆ. ದೇಶ ಬೇಗ ಅಭಿವೃದ್ಧಿ ಆಗಿದೆ. ಡಿಜಿಟಲ್ ಇಂಡಿಯಾ ಅಂತಾರೆ ಆದರೆ ಬೆಲೆ ಏರಿಕೆ ಹಾಗೇ ಅಭಿವೃದ್ಧಿ ಆಗಿ ಜನ ಸಾಮಾನ್ಯರ ಬದುಕಿನ ಮೇಲೆ ದಾಳಿ ಮಾಡಿದೆ. ಎಣ್ಣೆ, ಬೇಳೆಕಾಳು, ಅಕ್ಕಿ ತರಕಾರಿ ಎಲ್ಲಾ ಬೆಲೆ ಏರಿಕೆ ಆಗಿದೆ. ಬೆಲೆ ಏರಿಕೆ ತಡೆಯುವುವಲ್ಲಿ ಸರ್ಕಾರ ವಿಫಲವಾಗಿದೆ. ಗುತ್ತೆದಾರಿ ಪರವಾಗಿ ನಿಯಂತ್ರಣ ಆಗುತ್ತಿದೆ. ಮಾರುಕಟ್ಟೆಯಲ್ಲಿ ಪೆಟ್ರೋಲ್ ಬೆಲೆ ಇಳಿಕೆ ಆದ್ರು ತೈಲಬೆಲೆಯಲ್ಲಿ ಇಳಿಕೆ ಆಗಿಲ್ಲ ಸಿಐಟಿಯು ಬೇಡಿಕೆ ದುಡಿಯುವ ವರ್ಗದ ಬೇಡಿಕೆ ಇದು ಜಾರಿ ಆಗಬೇಕು. ದೇಶದಲ್ಲಿ ಗುತ್ತಿಗೆಯಲ್ಲಿ ದುಡಿಸುವುದು ಹೆಚ್ಚಾಗಿ ಕಾಯಂ ಹುದ್ದೆ ಇಲ್ಲವಾಗಿದೆ. ಕಾರ್ಮಿಕರ ಆದಾಯ ಕಡಿಮೆ ಆಗಿದೆ. ಮಾಲೀಕರ ಆದಾಯ ಹೆಚ್ಚಾಗಿದೆ.

ಕಾರ್ಮಿಕ ಕಾನೂನುಗಳನ್ನು ಮಾಲೀಕರ ಪರ ಕಾನೂನಾಗಿ ತಿದ್ದುಪಡಿ ಮಾಡುವ ಹುನ್ನಾರ ನಡೆದಿದೆ. ಒಂದೆಡೆ ಕಾಂಟ್ರಾಕ್ಟ್ ಪದ್ಧತಿ, ಕಾನೂನು ತಿದ್ದುಪಡಿ, ಬೆಲೆ ಏರಿಕೆ, ಜನರನ್ನು ಬಾಧಿಸುತ್ತಿದೆ. ಸೆಪ್ಟಂಬರ್ 2 ರಂದು ಜನಸಾಮಾನ್ಯರು ಹಾಗೂ ದುಡಿಯುವ ವರ್ಗ ಸರ್ಕಾರಕ್ಕೆ ಎಚ್ಚರಿಕೆ ನೀಡಬೇಕಿದೆ. ಹೋರಾಟ ಪ್ರತಿ ಹಳ್ಳಿ ಹಳ್ಳಿಗಳನ್ನು ಬಂದ್ ಆಗುವ ರೀತಿ ತಯಾರಿ ನಡೆಸಲು ಆಗಬೇಕಿದೆ ಎಂದು ಅವರು ಕರೆ ನೀಡಿದರು.



ನಂತರ ರಾಜ್ಯ ಕಾರ್ಯದರ್ಶಿಗಳಾದ ಕಾಂ. ಉಮೇಶ್ ಮಾತನಾಡಿ ಸರ್ಕಾರ ಕಾಯ್ದೆಗಳನ್ನು ತಿದ್ದುಪಡಿ ಮಾಡಲು ಮುಂದಾಗಿದೆ. ಎಂಪ್ಲಾಯಿಸ್ ಅಂತ ಎಲ್ಲರನ್ನು ಸೇರಿಸಿ ಕೊಳ್ತಾರೆ ಆದರೆ 30% ಅಪ್ರೆಂಟಿಸ್ ಆಗಿ ಸೇರಿಸಿಕೊಳ್ತಾರೆ. ಮುಖ್ಯಮಂತ್ರಿ ಹೇಳುವುದಕ್ಕೂ ಇರುವ ಅಂಕಿ ಅಂಶಗಳಿಗೂ ಬಹಳ ವ್ಯತ್ಯಾಸ ಇದೆ. ಅವರು ಬಂಡವಾಳಗಾರರ ಪರ ಧೋರಣೆ ತಾಳಿದ್ದಾರೆ. ಎಲ್ಲರಿಗೂ ಕೆಲಸ ಸಿಕ್ಕಿದೆಯೆ? ಎಲ್ಲರಿಗೂ ಊಟ, ವಸತಿ ಸಿಕ್ಕಿದೆಯೆ? ಆನರ ಬವಣೆ ನೀಗಿದೆಯೆ? ಪೆನ್ಷನ್ ನೀಡುವುದು ಬರಿ ಭಾಗ್ಯಗಳನ್ನು ನೀಡುವುದು ಸರ್ಕಾರದ ಸಾಧನೆ ಅಲ್ಲ ಎಂದರು.

ಮೈಸೂರು ಮಹಾರಾಜರ ನಗರಿ ಆಗಿದೆ. ಮುಂದಿನ ಸಮ್ಮೇಳನಕ್ಕೆ ಕಾರ್ಮಿಕರ ನಗರಿ ಆಗಬೇಕಿದೆ ಇದಕ್ಕೆ ಎಲ್ಲಾ ಕಾರ್ಮಿಕರು ಪರಿಶ್ರಮ ಅಗತ್ಯ ಎಂದು ಅವರು ಕರೆ ನೀಡಿದರು.

ಅಖಿಲ ಭಾರತ ವಿಮಾ ನೌಕರರ ಸಂಘದ ಬೆಂಗಳೂರು ವಲಯದ ಮುಖಂಡರಾದ ಬಲರಾಂ ಶುಭ ಕೋರಿದರು.

ಪೆನ್ಷನಿಯರ್ಸ್ ಅಸೋಸಿಯೇಷನ್ ನಿಂದ ಕಾಂ. ಚಂದ್ರಶೇಖರ ಶುಭಕೋರಿದರು. ಕಾರ್ಯದರ್ಶಿ ಕಾಂ. ಜಯರಾಂ ವರದಿ ಮಂಡಿಸಿದರು. ವರದಿ ಮೇಲೆ 21 ಜನ ಮಾತನಾಡಿದರು. ಸಮ್ಮೇಳನದಲ್ಲಿ ಹಲವಾರು ನಿರ್ಣಯಗಳನ್ನು ಕೈಗೊಳ್ಳಲಾಯ್ತು, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿಗಳಾದ ಕಾಂ. ಕೆ. ಬಸವರಾಜು ಶುಭಕೋರಿ ಮಾತನಾಡಿದರು. ಅಂಗನವಾಡಿ ನೌಕರರ ಸಂಘದ ರಾಜ್ಯ ಕಾರ್ಯದರ್ಶಿ ಕಾಂ. ಸುನಂದ ಮೈಸೂರು ಜಿಲ್ಲೆಯಲ್ಲಿ ನಡೆಯುವ 8ನೇ ದುಡಿಯುವ ಮಹಿಳೆಯರ ಕಾರ್ಯಕ್ರಮದ ಬಗ್ಗೆ ಯಶಸ್ವಿಯಾಗಿ ಎಲ್ಲಾ ಸಂಗಾತಿಗಳು ಕೆಲಸಕ್ಕಿಳಿಯಲು ಹಾಗೂ ತಯಾರಿ ಬಗ್ಗೆ ಮಾತನಾಡಿದರು. ನಂತರ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯ್ತು, ಸಮಾರೋಪ ಸಮಾರಂಭದಲ್ಲಿ ಕಾಂ. ವಿಜೆಕೆ ನಾಯರ್ ಹಾಗೂ ಕಾಂ. ಕೆ.ಎನ್. ಉಮೇಶ್ ಮಾತನಾಡಿದರು.

ಸಮ್ಮೇಳನದಲ್ಲಿ ಒಟ್ಟು 99 ಜನ ಪ್ರತಿನಿಧಿಗಳು ಭಾಗವಹಿಸಿದ್ದರು 18 ಜನರ ಪದಾಧಿಕಾರಿಗಳು ಹಾಗೂ 44 ಜನರ ಕಾರ್ಯಕಾರಿ ಸಮಿತಿ ಆಯ್ಕೆ ಆದರು.

ಅಧ್ಯಕ್ಷರು ಎನ್.ಕೆ. ಬಾಲಾಜಿರಾವ್, ಪ್ರಧಾನ ಕಾರ್ಯದರ್ಶಿ ಜಿ ಜಯರಾಂ, ಖಜಾಂಚಿ ಎಂ. ಅಣ್ಣಪ್ಪ, ಉಪಾಧ್ಯಕ್ಷರಾಗಿ: ಗೋವಿಂದಸ್ವಾಮಿ, ಹೆಚ್.ಎಸ್. ಸುನಂದ, ಕೆ. ಬಸವರಾಜು, ಶಿವಪ್ಪ, ಮುರಳಿಧರ ಪೇಶ್ವ, ಟಿಜೆ ಮಹದೇವು, ಜಿ. ಶಕುಂತಲಾ, ಕಾರ್ಯದರ್ಶಿಗಳಾಗಿ: ಶಶಿಕುಮಾರ್, ನಾಗರಾಜು, ಕಾವೇರಮ್ಮ ಕೆಪಿ, ಮಂಜುಳಾ, ಪುಟ್ಟಸ್ವಾಮಿ, ಜಗದೀಶ್ ಸೂರ್ಯ, ಸೋಮೇಶ್ ಆಯ್ಕೆ ಮಾಡಲಾಯಿತು.

ವರದಿ : ಹೆಚ್.ಎಸ್. ಸುನಂದಾ

ಕೇಂದ್ರದ ಜನ ವಿರೋಧಿ ನೀತಿ ವಿರುದ್ಧ ಬೆಳ್ತಂಗಡಿಯಲ್ಲಿ ಪ್ರತಿಭಟನೆ



ಬೆಲೆ ಏರಿಕೆಯನ್ನು ಇಳಿಸುತ್ತೇವೆ, ಜನರಿಗೆ ಒಳ್ಳೆಯ ದಿನಗಳನ್ನು ತರುತ್ತೇವೆ ಎಂದು ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಇಂದು ಮಾಡುವ ಎಲ್ಲಾ ಕೆಲಸಗಳು ಜನ ವಿರೋಧಿಯಾಗಿದ್ದು ನಿರಂತರ ಬೆಲೆ ಏರಿಕೆ, ಕಾರ್ಮಿಕರಿಗೆ, ರೈತರಿಗೆ ಅಭದ್ರತೆ, ನಿರುದ್ಯೋಗ, ದಲಿತರ ಮೇಲೆ ದೌರ್ಜನ್ಯಗಳೇ ಅಲ್ಲದೆ ಕೋಮುವಾದಿಗಳ ಅಟ್ಟಹಾಸಕ್ಕೆ ಆಸ್ಪದ ನೀಡುತ್ತಾ ಸರ್ವಾಧಿಕಾರಿ ಆಡಳಿತ ನಡೆಸುತ್ತಾ ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ ಎಂದು ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಸಮಿತಿ ಕಾರ್ಯದರ್ಶಿ ನ್ಯಾಯವಾದಿ ಬಿ.ಎಂ.ಭಟ್ ಹೇಳಿದರು.

ಸಿಪಿಐ(ಎಂ) ಪಕ್ಷದ ವತಿಯಿಂದ ದೇಶದಾದ್ಯಂತ ಜುಲೈ 11 ರಿಂದ 25 ರವರೆಗೆ ನಡೆಯುತ್ತಿರುವ ಕೇಂದ್ರ ಸರಕಾರದ ಜನವಿರೋದಿ ನೀತಿಯ ವಿರುದ್ದ ನಡೆಯುತ್ತಿರುವ ಹೋರಾಟದ ಅಂಗವಾಗಿ ಇಂದು ಬೆಳ್ತಂಗಡಿ ತಾಲೂಕು ಕಚೇರಿ ಎದುರು ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತಾಡಿದರು.

ಸೌಜನ್ಯ ಪ್ರಕರಣದಲ್ಲಿ ಸಿಬಿಐ ತನಿಖೆಗೆ ಆದೇಶವಾಗಿದ್ದರೂ ಇನ್ನೂ ನ್ಯಾಯ ಸಿಗಲಿಲ್ಲ ಎಂಬ ಸತ್ಯ ಗೊತ್ತಿರುವ ಬಿಜೆಪಿ ಡಿ.ವೈ.ಎಸ್.ಪಿ ಗಣಪತಿ ಅವರಿಗೂ ಮೋಸ ಮಾಡುವ ಇರಾದೆಯಿಂದ ಸಿಬಿಐ ತನಿಖೆಗೆ ಒತ್ತಾಯಿಸುತ್ತಿದೆ ಎಂದ ಅವರು, ಮೊದಲು ಸಿಬಿಐ ಸೌಜನ್ಯಳಿಗೆ ನ್ಯಾಯ ಒದಗಿಸಿ ತಾನು ಸಾಚಾ ಎಂದು ಸಾಬೀತು ಗೊಳಿಸಲಿ ಎಂದು ಸವಾಲು ಹಾಕಿದರು. ಕೊಕ್ಕಡದಲ್ಲಿ ವೈದ್ಯರ ಮೇಲೆಯೇ ಹಲ್ಲೆ ನಡೆಸುವ ಬಿಜೆಪಿ ಮುಖಂಡರು, ತಾಲೂಕು ಪಂಚಾಯತು ಸದಸ್ಯರುಗಳಿರುವ ಬಿಜೆಪಿಯಿಂದ ಯಾರನ್ನು ಉಳಿಸಲು ಸಾದ–್ಯ ಎಂದು ವ್ಯಂಗ್ಯವಾಡಿದರು. ಮೋದಿಯ ಜಪ ಮಾಡುವ ಬದಲು ಜನರ ಸಂಕಷ್ಟಗಳ ಬಗ್ಗೆ ಗಮನ ನೀಡಲಿ, ನಿತ್ಯೋಪಯೋಗಿ ವಸ್ತುಗಳ ಬೆಲೆಗಳನ್ನು ಇಳಿಸಲಿ ಎಂದರು.

ನಂತರ ಮಾತಾಡಿದ ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ನ್ಯಾಯವಾದಿ ಶಿವಕುಮಾರ್ ಅವರು ರೈತರಿಗೆ ನಕಲಿ ಬೀಜಗಳನ್ನು ವಿತರಿಸಿ ಮೋಸ ಮಾಡಲಾಗುತ್ತಿದೆ. ಪೆಟ್ರೋಲ್ ದರ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರಿ ಇಳಿತವಾಗಿ ಲೀಟರಿಗೆ 16 ರೂಗೆ ಸಿಗಬೇಕಾಗಿದ್ದ ಪೆಟ್ರೋಲನ್ನು 66 ರೂಗೆ ಮಾರಾಟ ಮಾಡುವಂತೆ ಮಾಡಿದ ಮೋದಿ ಸರಕಾರವು ಆಹಾರ ವಸ್ತುಗಳ ಬೆಲೆ ಏರಿಕೆಗೂ ಕಾರಣವಾಗಿದೆ.

ತಾಲ್ಲೂಕು ಕಛೇರಿ ಮನವಿ ಸಲ್ಲಿಸಿ ರಾಷ್ಟ್ರಪತಿರವರಿಗೆ ಕಳುಹಿಸಿಕೊಡಬೇಕೆಂದು ಪ್ರತಿಭಟನೆಯನ್ನು ಕೊನೆಗೊಳಿಸಲಾಯಿತು. ಪಕ್ಷದ ತಾಲೂಕು ಸಮಿತಿ ಸದಸ್ಯರಾದ ರೋಹಿಣಿ ಮನವಿ ಓದಿದರು. ಪಟ್ರಮೆ ಪಂಚಾಯತು ಸದಸ್ಯರೂ ರೈತ ಮುಖಂಡರೂ ಆದ ಶ್ಯಾಮರಾಜ್ ಅವರು ವಂದಿಸಿದರು. ಹೋರಾಟದ ನೇತೃತ್ವದಲ್ಲಿ ಪಕ್ಷದ ತಾಲೂಕು ಮುಖಂಡರುಗಳಾದ ಶ್ರೀಮತಿ ನೆಬಿಸಾ, ಜಯರಾಮ ಮಯ್ಯ, ಡೊಂಬಯ ಗೌಡ ಹಾಗೂ ಸಂಘಟನೆಗಳ ಮುಖಂಡರುಗಳಾದ ಧನಂಜಯ ಗೌಡ, ವಸಂತ ಪಟ್ರಮೆ, ಶ್ರೀಮತಿಗಳಾದ ಮೀನಾಕ್ಷಿ, ಜಯಂತಿ, ಜಯಶ್ರೀ, ಇಂದಿರಾ, ಕಿರಣಪ್ರಭ, ಶ್ರೀಮತಿ ಕುಮಾರಿ, ರಾಮಚಂದ್ರ, ವೀಣಾ ಹೊಸಂಗಡಿ, ಕುಸುಮಾವತಿ ಮೊದಲಾದವರು ಇದ್ದರು.

●



ಮಂಗಳೂರು: ದುರವಸ್ಥೆ ವಿರುದ್ಧ ಸಿಪಿಐ(ಎಂ) ಪ್ರತಿಭಟನೆ

ಮಂಗಳೂರು ನಗರದ ಹೃದಯ ಭಾಗದಲ್ಲಿರುವ ರಾವ್ ಆ್ಯಂಡ್ ರಾವ್ ವೃತ್ತದ ಬಳಿ ಒಳಚರಂಡಿ ದುರಸ್ತಿಗೊಳಿಸದೇ ಇರುವುದರಿಂದ ಅಲ್ಲದೆ ಮುಖ್ಯ ಕಾಂಕ್ರೀಟು ರಸ್ತೆಯನ್ನು ಒಡೆದಿರುವುದರಿಂದ, ಮಳೆಗಾಲದ ಗಲೀಜು ನೀರು ತುಂಬಿ ದುರ್ನಾತ ಬೀರುತ್ತಿರುವುದರಿಂದ ಮಹಾನಗರ ಪಾಲಿಕೆ ವಿರುದ್ಧ ಸಿಪಿಐ(ಎಂ) ಮಂಗಳೂರು ನಗರ ಕೇಂದ್ರ ವಿಭಾಗ ಸಮಿತಿ ವತಿಯಿಂದ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ದುರಸ್ಥಿ ಕಾರ್ಯವನ್ನು ಆರಂಭಿಸಿ ಒಂದೂವರೆ ತಿಂಗಳಾಗಿದ್ದರೂ, ಇನ್ನೂ ಪೂರ್ಣಗೊಳಿಸಿಲ್ಲ. ಒಡೆದ ರಸ್ತೆಯ ತಿಳಿವಳಿಕೆ ಇಲ್ಲದೆ ಇಬ್ಬರು ಈಗಾಗಲೇ ರಸ್ತೆ ಚರಂಡಿಯಲ್ಲಿ ಬಿದ್ದು ಗಾಯಗೊಂಡಿದ್ದಾ–ರೆ. ದುರಾವಸ್ಥೆ ಕೆಲವು ವರ್ಷಗಳಿಂದ ಇದ್ದರೂ, ಮಂಗಳೂರು ಮಹಾನಗರ ಪಾಲಿಕೆ ದುರಸ್ತಿಯನ್ನು ಆದ್ಯತೆಯಾಗಿ ತೆಗೆದುಕೊಂಡಿಲ್ಲ ಎಂದು ಪ್ರತಿಭಟನೆಯಲ್ಲಿ ಆಗ್ರಹಿಸಲಾಯಿತು.

ಸಿಪಿಐ(ಎಂ) ಮಂಗಳೂರು ನಗರ ದಕ್ಷಣ ಸಮಿತಿ ಕಾರ್ಯದರ್ಶಿ ಸುನಿಲ್‌ಕುಮಾರ್ ಬಜಾಲ್ ಈ ಸಂದರ್ಭದಲ್ಲಿ ಮಾತನಾಡಿ "ಜೂನ್ 15ರಿಂದ ಅಕ್ಟೋಬರ್ 15ರ ಮಳೆಗಾಲದ ಅವಧಿಯಲ್ಲಿ ಮಂಗಳೂರು ನಗರದಲ್ಲಿ ಯಾವ ರಸ್ತೆ ಒಡೆಯುವ ಕಾಮಗಾರಿ ಮಾಡಬಾರದೆಂದು ಪಾಲಿಕೆ ನಿರ್ಣಯ ಕೈಗೊಂಡಿದ್ದರೂ, ರಾವ್ ಆ್ಯಂಡ್ ರಾವ್ ವೃತ್ತದಲ್ಲಿ ಚರಂಡಿ ಕಾಮಗಾರಿಗಾಗಿ ರಸ್ತೆ ಒಡೆದು ಕೈಬಿಟ್ಟಿರುತ್ತಾರೆ. ತುರ್ತು ಕಾಮಗಾರಿಗಾಗಿ 'ನಿರ್ಮಿತಿ ಕೇಂದ್ರ'ಕ್ಕೆ ಕಾಮಗಾರಿಯನ್ನು ನೀಡಲಾಗಿದೆ ಎಂದು ತಿಳಿದು ಬರುತ್ತದೆ. ಆದಾಗ್ಯೂ ಕಾಮಗಾರಿಯನ್ನು ಆರಂಭಿಸದೆ ನಗರ ಕೇಂದ್ರವನ್ನು ದುರ್ನಾತಗೊಳಿಸಿರುವುದು ಖಂಡನೀಯ" ಎಂದು ತಿಳಿಸಿದರು.

ರಾವ್ ಆ್ಯಂಡ್ ರಾವ್ ವೃತ್ತದಲ್ಲಿ ನಗರದ ಮೂರು ವಾರ್ಡುಗಳು ಸ್ಪಂಧಿಸುತ್ತಿದ್ದು, ಮೂವರು ಕಾರ್ಪರೇಟರುಗಳು ಅಭಿವೃದ್ಧಿ ಜವಾಬ್ದಾರಿ ಹೊಂದಿದ್ದಾರೆ. ಸ್ವಚ್ಛತಾ ಅಭಿಯಾನದ ದೀಕ್ಷೆತೊಟ್ಟಿರುವ ಬಿಜೆಪಿ ಪಕ್ಷದ ಇಬ್ಬರು ಕಾರ್ಪರೇಟರುಗಳಿದ್ದೂ, ದುರಸ್ತಿಕಾರ್ಯ ನಡೆಯದಿರುವುದು ಆ ಪಕ್ಷದ ನಾಯಕರ ಇಬ್ಬಂದಿತನವನ್ನು ತೋರಿಸುತ್ತದೆ ಎಂದು ಈ ಸಂದರ್ಭ ಮಾತನಾಡಿದ ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಸದಸ್ಯ ವಾಸುದೇವ ಉಚ್ಚಿಲ ಹೇಳಿದರು.

ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಸದಸ್ಯ ಯೋಗೀಶ್ ಜಪ್ಪಿನಮೊಗರು ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಬೀದಿಬದಿ ಕಾರ್ಮಿಕರ ಸಂಘಟನೆಯ ಸಂತೋಷ್ ಆರ್.ಎಸ್. ಧನ್ಯವಾದ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಸಿಪಿಐ(ಎಂ) ನಗರ ಮುಖಂಡರಾದ ಲಿಂಗಪ್ಪ ನಂತೂರು, ಭಾರತಿ ಬೋಳಾರ, ಸುರೇಶ್ ಬಜಾಲ್ ಭಾಗವಹಿಸಿದ್ದರು. ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ನಗರ ಪಾಲಿಕೆ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಸುನಿಲ್ ಕುಮಾರ್ ಬಜಾಲ್

ರಸ್ತೆ ಸಾರಿಗೆ ಸುರಕ್ಷತಾ ಮಸೂದೆ – 2015 ಚಾಲಕರ ವಿರೋಧಿ

ಕೇಂದ್ರ ಸರಕಾರ ಜಾರಿಗೆ ತರಲು ಹೊರಟಿರುವ ರಸ್ತೆ ಸಾರಿಗೆ ಸುರಕ್ಷತಾ ಮಸೂದೆ 2015, ಚಾಲಕರ ವಿರೋಧಿಯಾಗಿದೆ. ಜನ ಸಾಮಾನ್ಯರ ಸಾರಿಗೆ ವ್ಯವಸ್ಥೆಯನ್ನು ರದ್ದು ಮಾಡುವ, ಈ ಮಸೂದೆಯು ಜನರ ಸಾರಿಗೆ ವ್ಯವಸ್ಥೆಯನ್ನೆ ನಾಶ ಮಾಡುತ್ತದೆ ಎಂದು ಫೆಡರೇಶನ್ ಆಫ್ ಕರ್ನಾಟಕ ಆಟೋ ರಿಕ್ಷಾ ಡ್ರೈವರ್ಸ್ ಯೂನಿಯನ್ ರಾಜ್ಯ ಸಮಿತಿಯ ಕೋಶಾಧಿಕಾರಿ ಸಿ.ಎನ್.ಶ್ರೀನಿವಾಸ್‌ರವರು ಹೇಳಿದರು.



ಅವರು ಜುಲೈ 17ರಂದು ಕುಂದಾಪುರ ತಾಲೂಕು ಆಟೋ ರಿಕ್ಷಾ ಮತ್ತು ವಾಹನ ಚಾಲಕರ ಸಂಘ (ಸಿಐಟಿಯು) ಇದರ 40ನೇ ವಾರ್ಷಿಕ ಮಹಾಸಭೆಯಲ್ಲಿ ಮುಖ್ಯ ಅತಿ–ಥಿಯಾಗಿ ಮಾತನಾಡುತ್ತಿದ್ದರು. ಈಗಿರುವ ಮೋಟಾರು ವಾಹನ ಕಾಯಿದೆ 1988ರ ಬದಲಿಗೆ ಕೇಂದ್ರ ಸರಕಾರ ತರುತ್ತಿರುವ ಈ ಹೊಸ ರಸ್ತೆ ಸಾರಿಗೆ ಮತ್ತು ಸುರಕ್ಷತಾ ಮಸೂದೆ–2015 ಕಾಯ್ದೆಯು ಎಲ್ಲಾ ರಸ್ತೆ ಸಾರಿಗೆ ವಲಯಗಳಿಗೆ ಆತ್ಮಹತ್ಯೆಕಾರಿಯಾಗಿದೆ ಮತ್ತು ಕಾರ್ಪೋರೇಟ್ ವಲಯದವರಿಗೆ ಉತ್ತೇಜನಕಾರಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ಕಾಯ್ದೆ ಕಾನೂನಾಗಿ ಬಂದರೆ ಪ್ರತಿಯೊಬ್ಬ ಚಾಲಕ, ಅಂದರೆ ಆಟೋ ಟ್ಯಾಕ್ಸಿ, ಬಸ್ಸ್, ಟ್ರಕ್ ಗೂಡ್ಸ್, ಇತ್ಯಾದಿ ಎಲ್ಲಾ ಚಾಲಕ ರೂ. 1,100/– ದಿಂದ 3 ಲಕ್ಷ ರೂಪಾಯಿವರೆಗೆ ದಂಡ ಅಥವಾ ಜೈಲು ವಾಸ ಅಥವಾ ಎರಡನ್ನೂ ಅನುಭವಿಸಬೇಕಾಗಿ ಬರಬಹುದು ಎಂದರು.

ದಿನಬಳಕೆ ಆಹಾರ ವಸ್ತುಗಳ ಬೆಲೆ ಏರಿಕೆ ತಡೆಗಟ್ಟಲು ಒತ್ತಾಯಿಸಿ ಹಾಗೂ ಸೆಪ್ಟಂಬರ್ 2 ಅಖಿಲ ಭಾರತ ಮುಷ್ಕರ ಯಶಸ್ವಿಗೊಳಿಸಬೇಕೆಂದು ಸಮಾವೇಶದಲ್ಲಿ ನಿರ್ಣಯವನ್ನು ಅಂಗೀಕರಿಸಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ರಮೇಶ ಅವರು ಚಟುವಟಿಕೆಯ ವರದಿ ಮಂಡಿಸಿದರು. ಸಂಘದ ಗೌರವ ಅಧ್ಯಕ್ಷ ಎಚ್.ಕರುಣಾಕರ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಿಐಟಿಯು ಕುಂದಾಪುರ ತಾಲೂಕು ಅಧ್ಯಕ್ಷ ಎಚ್. ನರಸಿಂಹ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಶುಭಾಶಯ ಕೋರಿ ಮಾತನಾಡಿದರು.

ಸಂಘದ ಅಧ್ಯಕ್ಷ ಲಕ್ಷ್ಮಣ ಬರೆಕಟ್ಟು – ಅಧ್ಯಕ್ಷತೆ ವಹಿಸಿದ್ದರು. ಸಂಘದ ಪದಾಧಿಕಾರಿಗಳಾದ – ಗೋವಿಂದ ಗುಡಾರ ಹಕ್ಲು, ಎನ್.ಉಮೇಶ, ವಿ.ನಾರಾಯಣ ಮಲ್ಲಿಕಾರ್ಜುನ, ಅರುಣಕುಮಾರ, ರವೀಂದ್ರ ಶೆಟ್ಟಿ, ಶೀನ ಕಟ್ಕೇರಿ, ವಿ.ಚಂದ್ರ ಕೃಷ್ಣ ದೇವಾಡಿಗ, ಶೇಖರ ಪೂಜಾರಿ, ರಮೇಶ ನಾಯ್ಕ, ಅರೆಹೊಳೆ, ರಮೇಶ ಮಕ್ಕಿ, ರಮೇಶ ಕುಂಭಾಶಿ, ರಾಜೇಶ ಪಡುಕೋಣೆ, ಕೃಷ್ಣ ತಲ್ಲೂರು, ಸಂತೋಷ ಕಲ್ಲಾಗರ, ರಾಘವೇಂದ್ರ ಉಪಸ್ಥಿತರಿದ್ದರು. ಸಂಘಟನಾ ಕಾರ್ಯದರ್ಶಿ ಕಾರ್ಯಕ್ರಮ ನಿರೂಪಿಸಿದರು.

ವೆಂಕಟೇಶ ಕೋಣಿ

ಮಂಗಳವಾದ್ಯ ಕಲಾವಿದರ ಪ್ರತಿಭಟನೆ........... ಪುಟ 5 ರಿಂದ

ಕಾಯ್ದೆಯಲ್ಲಿರುವ ಸೋರಿಕೆಗಳನ್ನು ತಡೆಯಲು ತಿದ್ದುಪಡಿಗೆ ಕ್ರಮವಹಿಸಬೇಕು ಮತ್ತು ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡಗಳ ದೌರ್ಜನ್ಯ ತಡೆ ಕಾಯ್ದೆಗೆ ತಿದ್ದುಪಡಿ ವಿಧೇಯಕವನ್ನು ಕೇಂದ್ರ ಸರಕಾರ ತಕ್ಷಣ ಅಂಗೀಕರಿಸಬೇಕು ಎಂದೂ ಸಂಘಟನೆ ಒತ್ತಾಯಿಸುತ್ತಿದೆ.

ಪ್ರತಿಭಟನೆಯಲ್ಲಿ ಮಂಗಳವಾದ್ಯ(ಬ್ಯಾಂಡ್‌ವಾದ್ಯ) ಕಲಾವಿದರ ಸಂಘದ ಜಿಲ್ಲಾ ಸಂಚಾಲಕರುಗಳಾದ ಕೆ.ರಾಮಣ್ಣ–ಹೊಸಪೇಟೆ, ಕೆ.ಗೋವಿಂದರಪ್ಪ–ಹಗರಿಬೊಮ್ಮನಹಳ್ಳಿ, ಮಲ್ಲಪ್ಪ–ತೋರಣಗಲ್, ಕೆ.ರಮೇಶ–ಎಲ್‌ಐಸಿ ಏಜೆಂಟ್, ಬಸವರಾಜ–ಹಗರಿಬೊಮ್ಮನಹಳ್ಳಿ, ಮತ್ತು ದಲಿತ ಹಕ್ಕುಗಳ ಸಮಿತಿ ರಾಜ್ಯ ಸಹ ಸಂಚಾಲಕರಾದ ಯು.ಬಸವರಾಜ್, ಜಿಲ್ಲಾ ಸಹ ಸಂಚಾಲಕರಾದ ಮಲ್ಲಿಕಾರ್ಜುನ ಮಾನ್ವಡೆ ಮತ್ತು ಕೆ.ನಾಗರತ್ನ, ಜನವಾದಿ ಮಹಿಳಾ ಸಂಘಟನೆ ಸಂಚಾಲಕರಾದ ಚಂದ್ರಕುಮಾರಿ ಮುಂತಾದ ಮುಖಂಡರು ಭಾಗವಹಿಸಿದ್ದರು.

●

ಬಿಜೆಪಿ-ಆರ್‌ಎಸ್‌ಎಸ್ ಕೂಟ ತುಂಬಾ ಜಾಗೃತೆಯಿಂದ ಕಟ್ಟಿರುವ 'ದಲಿತ ಪ್ರೇಮ'ವನ್ನು ಉನಾ ಪ್ರಕರಣ ಬಟಾಬಯಲುಗೊಳಿಸಿದೆ. ಗುಜರಾತ್‌ನಾದ್ಯಂತ ದಲಿತರು ನಡೆಸುತ್ತಿರುವ ಆಕ್ರೋಶಭರಿತ ಪ್ರತಿಭಟನೆಗಳು ಆ ರಾಜ್ಯದಲ್ಲಿ ಬಿಜೆಪಿ ಆಡಳಿತದಡಿಯಲ್ಲಿ ದಲಿತರು ಅನುಭವಿಸುತ್ತಿರುವ ದಬ್ಬಾಳಿಕೆಯ ವಿರುದ್ಧದ ಅಭಿವ್ಯಕ್ತಿಯಾಗಿದೆ. ಪ್ರತಿಭಟನೆಗಳ ವೇಳೆ 20ಕ್ಕೂ ಹೆಚ್ಚು ದಲಿತರು ಆತ್ಮಾಹುತಿಗೆ ಯತ್ನಿಸಿದ್ದು ದಲಿತ ಸಮುದಾಯದಲ್ಲಿ ಮಡುಗಟ್ಟಿರುವ ಹತಾಶೆಯ ಪ್ರತೀಕವಾಗಿದೆ.



ಬಿಜೆಪಿಯ ದಲಿತ ಪರ ಕಾಳಜಿ: ಕಳಚಿದೆ ಬೂಟಾಟಿಕೆಯ ಮುಖವಾಡ





*** ಪ್ರಕಾಶ್ ಕಾರಟ್**

ಗುಜರಾತ್‌ನ ಉನಾದಲ್ಲಿ ಏಳು ದಲಿತರ ಮೇಲೆ ಹಲ್ಲೆ ನಡೆಸಿ ಆ ಪೈಕಿ ನಾಲ್ವರನ್ನು ನಗ್ನಗೊಳಿಸಿ ಪಟ್ಟಣದಲ್ಲಿ ಮೆರವಣಿಗೆ ಮಾಡಿದ ದಲಿತರ ಮೇಲಿನ ದೌರ್ಜನ್ಯದ ಇತ್ತೀಚಿನ ಪ್ರಕರಣ ಇಡೀ ದೇಶದ ಗಮನ ಸೆಳೆದಿದೆ. ಗುಜರಾತ್‌ನಲ್ಲೇ ಈ ಪ್ರಕರಣ ನಡೆದಿರುವುದು ಗಮನಾರ್ಹ. ಗೋಹತ್ಯೆ ವಿರುದ್ಧ ಹಿಂದೂತ್ವ ಪ್ರಚಾರ ಮತ್ತು ಈ ಸಂಬಂಧ ಮುಸ್ಲಿಮರು ಹಾಗೂ ದಲಿತರನ್ನು ಗುರಿಯಾಗಿಸಿಕೊಳ್ಳುವುದು ಇಡೀ ದೇಶದಲ್ಲಿ ನಡೆಯುತ್ತಿದೆ. ಆದರೆ ಬಿಜೆಪಿಯ ಭದ್ರಕೋಟೆಯಲ್ಲಿ ಇದು ಇನ್ನಷ್ಟು ವಿಷಮಯವಾಗಿದೆ. ಹಲ್ಲೆಗೊಳಗಾದ ನಾಲ್ಕು ಜನರು ಸತ್ತ ದನವೊಂದರ ಮಾಲಿಕನಾದ ಒಬ್ಬ ರೈತ ಕರೆ ಕಳಿಸಿದ ಮೇರೆಗೆ ಅದರ ಚರ್ಮವನ್ನು ಸುಲಿಯಲು ಹೋಗಿದ್ದರು. ಈ ನಾಲ್ವರೂ ಚರ್ಮ ವ್ಯಾಪಾರದಲ್ಲಿ ತೊಡಗಿಸಿಕೊಂಡ ಕುಟುಂಬವೊಂದಕ್ಕೆ ಸೇರಿದವರಾಗಿದ್ದಾರೆ. ಇವರ ಮೇಲೆ ಆಕ್ರಮಣ ಮಾಡಿದವರು 'ಗೋ ರಕ್ಷಾ ಸಮಿತಿ'ಗೆ ಸೇರಿದವರು ಎಂದು ಹೇಳಲಾಗಿದೆ.

ಈ ಪ್ರಕರಣವು 2012ರಲ್ಲಿ ಹರ್ಯಾಣದ ಝುಜ್ಜರ್‌ನಲ್ಲಿ ಐವರು ದಲಿತರನ್ನು ಬರ್ಬರವಾಗಿ ಹತ್ಯೆ ಮಾಡಿದ ಪ್ರಕರಣವನ್ನು ನೆನಪಿಸುತ್ತದೆ. ಆ ದಾಳಿಯನ್ನು ವಿಶ್ವ ಹಿಂದೂ ಪರಿಷತ್‌ನ ಕೆಲವರು ಪ್ರಚೋದಿಸಿದ್ದರು. ಗೋವಿನ ಮಾರಾಟ ಮತ್ತು ಚರ್ಮೋದ್ಯಮದಲ್ಲಿ ನಿರತರಾದ ಮುಸ್ಲಿಮರು ಹಾಗೂ ದಲಿತರ ಮೇಲೆ ಹಲ್ಲೆಗಳು ನಡೆಯುವುದು ದೇಶದ ವಿವಿಧ ಭಾಗಗಳಿಂದ ಇತ್ತೀಚಿನ ದಿನಗಳಲ್ಲಿ ವರದಿಯಾಗುತ್ತಿದೆ. ಗೋರಕ್ಷಣಾ ಸಮಿತಿಗಳು ಹುಟ್ಟಿಕೊಂಡಿದ್ದು ಅವುಗಳು ಮುಸ್ಲಿಮರು ಹಾಗೂ ದಲಿತರ ಮೇಲೆ ಕಣ್ಣಿಡುವ ಕೆಲಸ ಮಾಡುತ್ತಿವೆ. ಉತ್ತರ ಪ್ರದೇಶದ ದಾದ್ರಿಯಲ್ಲಿ ಮಹಮ್ಮದ್ ಇಖ್ಲಾಕ್ ಎಂಬಾತನ ಕೊಲೆ ಮತ್ತು ಜಾರ್ಖಂಡ್‌ನಲ್ಲಿ ಇಬ್ಬರು ದನದ ವ್ಯಾಪಾರಿಗಳನ್ನು ನೇಣು ಹಾಕಿ ಕೊಂದಿದ್ದು ಇತ್ತೀಚಿನ ಆಘಾತಕಾರಿ ಉದಾಹರಣೆಗಳಾಗಿವೆ.

ಬಿಜೆಪಿ-ಆರ್‌ಎಸ್‌ಎಸ್ ಕೂಟ ತುಂಬಾ ಜಾಗೃತೆಯಿಂದ ಕಟ್ಟಿರುವ 'ದಲಿತ ಪ್ರೇಮ'ವನ್ನು ಉನಾ ಪ್ರಕರಣ ಬಟಾಬಯಲುಗೊಳಿಸಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಡಾ. ಬಿ.ಆರ್. ಅಂಬೇಡ್ಕರ್ ಅವರ 125ನೇ ಜಯಂತಿಯನ್ನು ಆಚರಿಸುವ ದೊಡ್ಡ ಪ್ರದರ್ಶನವನ್ನೇ ಮಾಡಿತು. ಅದೇ ಹೊತ್ತಿಗೆ, ಮಹಾರಾಷ್ಟ್ರದ ಬಿಜೆಪಿ ಸರಕಾರ ಮುಂಬಯಿಯ ದಾದರ್‌ನಲ್ಲಿದ್ದ ಅಂಬೇಡ್ಕರ್ ಅವರ ಕಚೇರಿ ಹೊಂದಿದ್ದ ಐತಿಹಾಸಿಕ ಕಟ್ಟಡವನ್ನು ಧ್ವಂಸ ಮಾಡಿತು.

ಗುಜರಾತ್‌ನಾದ್ಯಂತ ದಲಿತರು ನಡೆಸುತ್ತಿರುವ ಆಕ್ರೋಶಭರಿತ ಪ್ರತಿಭಟನೆಗಳು ಆ ರಾಜ್ಯದಲ್ಲಿ ಬಿಜೆಪಿ ಆಡಳಿತದಡಿಯಲ್ಲಿ ದಲಿತರು ಅನುಭವಿಸುತ್ತಿರುವ ದಬ್ಬಾಳಿಕೆಯ ವಿರುದ್ಧದ ಅಭಿವ್ಯಕ್ತಿಯಾಗಿದೆ. ಪ್ರತಿಭಟನೆಗಳ ವೇಳೆ 20ಕ್ಕೂ ಹೆಚ್ಚು ದಲಿತರು ಆತ್ಮಾಹುತಿಗೆ ಯತ್ನಿಸಿದ್ದು ದಲಿತ ಸಮುದಾಯದಲ್ಲಿ ಮಡುಗಟ್ಟಿರುವ ಹತಾಶೆಯ ಪ್ರತೀಕವಾಗಿದೆ. ಏನೇ ಇರಲಿ, ದಲಿತರು ದೃಢವಾಗಿ ಪ್ರತಿಭಟನೆಯಲ್ಲಿ ತೊಡಗಿರುವುದು ಹಾಗೂ ಇಂಥ ದಬ್ಬಾಳಿಕೆ, ದೌರ್ಜನ್ಯಗಳನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಸಂದೇಶವನ್ನು ರವಾನಿಸುತ್ತಿರುವುದು ಒಂದು ಉತ್ತಮ ಬೆಳವಣಿಗೆಯಾಗಿದ. ಅವರ ಈ ವೀರೋಚಿತ ಹೋರಾಟಕ್ಕೆ ದೇಶದ ಪ್ರಜಾಸತ್ತಾತ್ಮಕ ಶಕ್ತಿಗಳು ಸಾಥ್ ನೀಡಬೇಕು.

ಉನಾ ದೌರ್ಜನ್ಯದಲ್ಲಿ ಭಾಗಿಯಾದ ಆರೋಪಿಗಳನ್ನು ರಾಜ್ಯ ಸರಕಾರ ಬಂಧಿಸಿದರಷ್ಟೇ ಸಾಲದು. ಗೋ ರಕ್ಷಣಾ ಸಮಿತಿಗಳನ್ನು ನಿಷೇಧಿಸಲು ಕ್ರಮ ಕೈಗೊಳ್ಳಬೇಕು ಮತ್ತು ದಲಿತ-ವಿರೋಧಿ ಹಾಗೂ ಅಲ್ಪಸಂಖ್ಯಾತ-ವಿರೋಧಿ ಭಾವನೆಗಳನ್ನು ಹರಡುತ್ತಿರುವ ವಿಷಮಯ ಕೋಮುವಾದಿ ಸಂಘಟನೆಗಳ ಮೇಲೆ ತೀವ್ರ ಕ್ರಮಗಳನ್ನು ಕೈಗೊಳ್ಳಬೇಕು.

ಅನು:ವಿಶ್ವ



ಗುಜರಾತ್‌ನಾದ್ಯಂತ ದಲಿತರು ನಡೆಸುತ್ತಿರುವ ಆಕ್ರೋಶಭರಿತ ಪ್ರತಿಭಟನೆಗಳು ಆ ರಾಜ್ಯದಲ್ಲಿ ಬಿಜೆಪಿ ಆಡಳಿತದಡಿಯಲ್ಲಿ ದಲಿತರು ಅನುಭವಿಸುತ್ತಿರುವ ದಬ್ಬಾಳಿಕೆಯ ವಿರುದ್ಧದ ಅಭಿವ್ಯಕ್ತಿಯಾಗಿವೆ

ಜುಲೈ 25ರಂದು ದೇಶವ್ಯಾಪಿ ಪ್ರತಿಭಟನೆಗೆ ಡಿಎಸ್‌ಎಂಎಂ ಕರೆ

ಗುಜರಾತಿನ ಗಿರ್ ಸೋಮನಾಥ ಜಿಲ್ಲೆಯ ಊನಾದಲ್ಲಿ ಗೋರಕ್ಷಕರೆನಿಸಿಕೊಂಡವರು ಒಂದು ದಲಿತ ಕುಟುಂಬದ ಏಳು ಮಂದಿಯ ಮೇಲೆ ನಡೆಸಿರುವ ಭೀಕರ ದಾಳಿಯನ್ನು ಖಂಡಿಸಿ ದೇಶದೆಲ್ಲೆಡೆಗಳಲ್ಲಿ ಪ್ರತಿಭಟನೆ ನಡೆಸುವಂತೆ ದಲಿತ ಶೋಷಣಾ ಮುಕ್ತಿ ಮಂಚ್(ಡಿಎಸ್‌ಎಂಎಂ) ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ.

ಜುಲೈ11ರಂದು ದಾಳಿಗೊಳಗಾದ ಇವರು ಚರ್ಮ ಹದ ಮಾಡುವ ವಲಯದಲ್ಲಿ ಕೆಲಸ ಮಾಡುವ ಕಾರ್ಮಿಕರು. ಅವರನ್ನು ಬಟ್ಟೆಗಳನ್ನು ಬಿಚ್ಚಿಸಿ ಒಂದು ಎಸ್‌ಯುವಿ ವಾಹನಕ್ಕೆ ಕಟ್ಟಿ ಹಾಕಿ ಕಬ್ಬಿಣದ ಸಲಾಕೆಗಳಿಂದ ಥಳಿಸಿದ್ದು ಮಾತ್ರವೇ ಅಲ್ಲದೆ ಇತರರಿಗೆ 'ಎಚ್ಚರಿಕೆ' ಎಂದು ಅದರ ವಿಡಿಯೋ ತೆ-ಗೆದು ಪ್ರಸಾರ ಮಾಡಿದ್ದಾರೆ. ಇದರಿಂದ ಪ್ರತಿಭಟನೆಯ ಅಲೆಯೇ ಗುಜರಾತನ್ನು ವ್ಯಾಪಿಸಿದೆ, ಹದಿನಾಲ್ಕು ದಲಿತರು ಹತಾಶೆಯಿಂದ ಆತ್ಮಹತ್ಯೆಗೆ ಪ್ರಯತ್ನಿಸಿದ್ದಾರೆ, ಅವರಲ್ಲಿ ಒಬ್ಬರು ಪ್ರಾಣ ಕಳಕೊಂಡಿದ್ದಾರೆ ಎಂದು ವರದಿಯಾಗಿದೆ. ಪೋಲೀಸರು ಪ್ರತಿಭಟನೆಗಳನ್ನು ದಮನ ಮಾಡಲು ಅಮಾನುಷವಾಗಿ ಲಾಠೀ ಪ್ರಹಾರ ಮಾಡುತ್ತಿದ್ದಾರೆ. ಅತ್ತ ಅಪರಾಧಿಗಳ ವಿರುದ್ಧ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಇದರ ವಿರುದ್ಧ ಗುಜರಾತಿನಲ್ಲಿ ಜುಲೈ20ರಂದು ಬಂದ್ ಆಚರಿಸಲಾಗಿದೆ.

ದೇಶದ ಇತರೆಡೆಗಳಲ್ಲೂ ಮುಖ್ಯವಾಗಿ ಹರಿಯಾಣ, ಬಿಹಾರ,ಉತ್ತರಪ್ರದೇಶ ಮುಂತಾದೆಡೆಗಳಲ್ಲಿ ದಲಿತರ ಮೇಲೆ, ವಿಶೇಷವಾಗಿ ದಲಿತ ಮಹಿಳೆಯರ ಮೇಲೆ ಗುರಿಯಿಡಲಾಗುತ್ತಿದೆ. ಇಂತಹ ಹಲವು ಘಟನೆಗಳು ನಡೆಯುತ್ತಿವೆ. ಹರಿಯಾಣದಲ್ಲಿ ಈ ಒಂದು ತಿಂಗಳಲ್ಲೇ ಇಂತಹ ಅತ್ಯಾಚಾರಗಳ ಮೂರು ಘಟನೆಗಳು ವರದಿಯಾಗಿವೆ. ಮುಂಬೈಯಲ್ಲಿ ಅಂಬೇಡ್ಕರ್ ಕಟ್ಟಿದ ಕಟ್ಟಡವನ್ನು ನೆಲಸಮ ಮಾಡಲಾಗಿದೆ. ಇದೀಗ ದೇಶದಲ್ಲಿರುವ ಪರಿಸ್ಥಿತಿ ಎಂದು ಡಿಎಸ್‌ಎಂಎಂ ಆಕ್ರೋಶ ವ್ಯಕ್ತಪಡಿಸಿದೆ.

ಎಲ್ಲ ಅಪರಾಧಿಗಳನ್ನು ಎಸ್‌ಸಿ/ಎಸ್‌ಟಿ ಅತ್ಯಾಚಾರ ತಡೆ ಕಾನೂನಿನ ಅಡಿಯಲ್ಲಿ ತಕ್ಷಣವೇ ಬಂಧಿಸಿ ವಿಚಾರಣೆ ನಡೆಸಬೇಕು, ಈ ಅತ್ಯಾಚಾರಕ್ಕೆ ಒಳಗಾಗಿರುವವರಿಗೆ ಪರಿಹಾರ ಕೊಡಬೇಕು ಮತ್ತು ಅವರ ವೈದ್ಯಕೀಯ ಖರ್ಚುಗಳನ್ನು ಸರಕಾರವೇ ಭರಿಸಬೇಕು ಎಂದು ಡಿಎಸ್‌ಎಂಎಂ ಆಗ್ರಹಿಸಿದೆ.

ಗೋರಕ್ಷಕರೆನ್ನುವ ಗುಂಪುಗಳ ಇಂತಹ ದಾಳಿಗಳು ದೇಶದ ವಿವಿಧ ಭಾಗಗಳಲ್ಲಿ ಹೆಚ್ಚುತ್ತಿವೆ. ಸರಕಾರ ಇದರ ಬಗ್ಗೆ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಡಿಎಸ್‌ಎಂಎಂ ಆಗ್ರಹಿಸಿದೆ.

ದೇಶವ್ಯಾಪಿ ಕಾರ್ಯಾಚರಣೆಯ ಭಾಗವಾಗಿ ಜುಲೈ 25ರಂದು ನವದೆಹಲಿಯ ಜಂತರ್ ಮಂತರ್‌ನಲ್ಲಿ ಧರಣಿ ನಡೆಸಲು ನಿರ್ಧರಿಸಿರುವ ಡಿಎಸ್‌ಎಂಎಂ ಇದರಲ್ಲಿ ಭಾಗವಹಿಸುವಂತೆ ಎಲ್ಲ ಜನವಿಭಾಗಗಳಿಗೆ ಕರೆ ನೀಡಿದೆ.

ದುರ್ಬಲ ವಿಭಾಗಗಳ ಸಾಂಸ್ಥೀಕೃತ ಬಲಿಯ ವಿರುದ್ಧ ದಲಿತರ ಆಕ್ರೋಶದ ಅಭಿವ್ಯಕ್ತಿ



*** ಸೀತಾರಾಮ್ ಯೆಚೂರಿ**

ಗುಜರಾತಿನಾದ್ಯಂತ ಕಾಣುತ್ತಿರುವ ದಲಿತ ಪ್ರತಿಭಟನೆಗಳು 26 ತಿಂಗಳಿಂದ ದುರ್ಬಲ ವರ್ಗಗಳವರ ರಾಜಕೀಯವಾಗಿ ಸಾಂಸ್ಥೀಕರಿಸಿದ ಬಲಿಯ ವಿರುದ್ಧ ಆಕ್ರೋಶದ ಇತ್ತೀಚಿನ ಅಭಿವ್ಯಕ್ತಿ.

ನಾವಿದನ್ನು ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ರೋಹಿತ್ ವೆಮುಲನ ಸಾಂಸ್ಥೀಕೃತ ಹತ್ಯೆ, ಮೀಸಲಾತಿಗೆ ಆರೆಸ್ಸೆಸ್ ಮುಖ್ಯಸ್ಥರ ವೈಷಮ್ಯ ಮತ್ತು ಮುಂಬೈಯಲ್ಲಿ ಬಿಜೆಪಿ ಸರಕಾರದ ಅಡಿಯಲ್ಲಿ ಅಂಬೇಡ್ಕರ್ ಭವನ ಮತ್ತು ಮುದ್ರಣಾಲಯವನ್ನು ನೆಲಸಮಗೊಳಿಸಿರುವುದರಲ್ಲಿ ನೋಡಿದ್ದೇವೆ. ಈ ಸರಕಾರ ಅಧಿಕಾರಕ್ಕೆ ಬಂದ ನಂತರ ರಾಷ್ಟ್ರೀಯ ಅಪರಾಧ ದಾಖಲೆಗಳ ಮಂಡಳಿ(ಎನ್‌ಸಿಆರ್‌ಬಿ) ಮಾಹಿತಿ ಇದನ್ನು ಸಾಬೀತು ಮಾಡುತ್ತದೆ. ದಲಿತರ ವಿರುದ್ಧ ಅಪರಾಧಗಳ ಸಂ-ಖ್ಯೆ 2013ರಲ್ಲಿ 29408; 2014ರಲ್ಲಿ 47064 ಕ್ಕೆ ನೆಗೆಯಿತು.

ದಲಿತರ ವಿರುದ್ಧ ಅಪರಾಧಗಳಲ್ಲಿ ಶಿಕ್ಷೆಗೊಳಗಾದವರ ಪ್ರಮಾಣ ಕೇವಲ 28%

ಬಿಜೆಪಿ ಆಳ್ವಿಕೆಯಲ್ಲಿ ದಲಿತ ಕಾರ್ಯಕ್ರಮಗಳಿಗೆ ಬಜೆಟ್ ಬೆಂಬಲ ಕಡಿತಗೊಂಡಿದೆ. ಹಣಕಾಸು ವರ್ಷ 2015-16ರಲ್ಲಿ ಪರಿಶಿಷ್ಟ ಜಾತಿಗಳ ಉಪಯೋಜನೆಯಲ್ಲಿ 38% ಕಡಿತವಾಗಿದೆ.

2015-16ರ ವೆಂಚರ್(ಸಾಹಸ) ಬಂಡವಾಳ ನಿಧಿಯ 102 ಕೋಟಿ ರೂ.ಗಳಲ್ಲಿ ಕೇಂದ್ರ ಸರಕಾರ ಪರಿಶಿಷ್ಟ ಜಾತಿಗಳ ಉದ್ಯಮಿಗಳಿಗೆ ಹಂಚಿದ್ದು 0.01 ಕೋಟಿ ರೂ.

ಸರಕಾರ ಕಳೆದ ಹಣಕಾಸು ವರ್ಷದಲ್ಲಿ ಖರ್ಚು ಮಾಡಿದ ಸಾಲ ಗ್ಯಾರಂಟಿ ನಿಧಿಯ 98.4 ಕೋಟಿ ರೂ.ಗಳಲ್ಲಿ ಪರಿಶಿಷ್ಟ ಜಾತಿಗಳವರಿಗೆ ಕೊಟ್ಟದ್ದು ಕೂಡ 0.01 ಕೋಟಿ ರೂ.

ಘೋಷಣೆಗಳು, ಭಾಷಣಗಳು, ನಾಮಧೇಯಗಳು ದಲಿತರು, ಅಲ್ಪಸಂಖ್ಯಾತರು ಮತ್ತು ಸಮಾಜದ ಇತರ ದುರ್ಬಲ ವಿಭಾಗಗಳ ಜನರ ಬಗ್ಗೆ ಬಿಜೆಪಿ-ಆರೆಸ್ಸೆಸ್‌ನ ನಿಲುವು ಮತ್ತು ಜಾತಿವ್ಯವಸ್ಥೆಯನ್ನು ಸಮರ್ಥಿಸುವ ಮಾನಸಿಕತೆಯನ್ನು ಮರೆಮಾಚಲಾರವು

***

ಕಳೆದೆರಡು ವರ್ಷಗಳಲ್ಲಿ ದಲಿತರ ಮೇಲೆ ದಾಳಿಗಳ ಎರಡು ಹೊಸ ದಾರಿಗಳನ್ನು ತೆರೆಯಲಾಗಿದೆ-ಒಂದು, ಗೋರಕ್ಷೆಯ ಹೆಸರಲ್ಲಿ ಪುಕಾರುಗಳನ್ನು ಹರಡಿ ದಾಳಿ ಮಾಡುವುದು, ಎರಡು, ವಿಶ್ವವಿದ್ಯಾಲಯಗಳಲ್ಲಿ ದಾಳಿ-ರೋಹಿತ್ ವೆಮುಲನ ಆತ್ಮಹತ್ಯಾ ಪತ್ರವನ್ನು ನೋಡಿದ್ದೇವೆ, ಕಳೆದ ವರ್ಷ ವಿಶ್ವವಿದ್ಯಾಲಯಗಳಲ್ಲಿ ವಿದಾರ್ಥಿಗಳ 25 ಆತ್ಮಹತ್ಯೆಗಳಲ್ಲಿ 23 ದಲಿತ ವಿದ್ಯಾರ್ಥಿಗಳದ್ದು.... ಇವು ಶಿಕ್ಷಣ ಪಡೆದು ಮೇಲ್ದರ್ಜೆಗೆ ಏರುವುದನ್ನು ತಡೆಯುವ ದಾಳಿಗಳು

***

ದಲಿತರ ಉದ್ಧಾರದಲ್ಲಿ ಸರಕಾರದ ಪಾತ್ರ
ಕ್ರಿಯೆಗಳು, ಕೇವಲ ಮಾತುಗಳಲ್ಲ,
ಮಾತುಗಳ ಭೇದಿ
ಕೃತಿಗಳ ಮಲಬದ್ಧತೆ ನಿಲ್ಲಲಿ

ಸೆಪ್ಟೆಂಬರ್ 2, 2016



ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಯಾಕೆ?

ಕೇಂದ್ರದಲ್ಲಿ ಆಳ್ವಿಕೆ ನಡೆಸುತ್ತಿರುವ ನರೇಂದ್ರ ಮೋದಿ ನೇತೃತ್ವದ ಸರಕಾರ ಎರಡು ವರ್ಷಗಳ ಆಳ್ವಿಕೆಯ ಸಾಧನೆಗಳನ್ನು ಅದ್ದೂರಿಯ ಕಾರ್ಯಕ್ರಮಗಳು, ಟಿವಿ, ಪತ್ರಿಕಾ ಜಾಹೀರಾತುಗಳ ಮೂಲಕ ಜನಗಳಿಗೆ 'ತಲುಪಿಸಲು' ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡುತ್ತಿರುವಾಗ, ಆ ಜನಸಾಮಾನ್ಯರ ಒಂದು ಪ್ರಮುಖ ವಿಭಾಗ, ದೇಶದ ಕೋಟ್ಯಂತರ ಕಾರ್ಮಿಕರು ಮತ್ತು ನೌಕರರು ಈ ಸಪ್ಟಂಬರ್ 2ರಂದು ಮತ್ತೆ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧತೆ ನಡೆಸುತ್ತಿದ್ದಾರೆ. ಇಷ್ಟು ದೊಡ್ಡ ಜನವಿಭಾಗವೊಂದು ಏಕೆ ಮತ್ತೆ ಹೋರಾಟದ ಕಣಕ್ಕಿಳಿದಿದೆ? ಈ ಸರಕಾರದಿಂದ ಅವರು ಏನನ್ನು ಕೇಳುತ್ತಿದ್ದಾರೆ? ಕಳೆದ ಸಂಚಿಕೆಗಳಲ್ಲಿ ರೂ.18,000 ಕನಿಷ್ಟ ಕೂಲಿ, ಉದ್ಯೋಗಾವಕಾಶ ನಿರ್ಮಾಣ ಕಾರ್ಮಿಕ ಕಾನೂನುಗಳಿಗೆ ತರಬೇಕೆಂದಿರುವ ಎಲ್ಲ ಬದಲಾವಣೆಗಳನ್ನು ರದ್ದು ಮಾಡಬೇಕು ಮತ್ತು ಗುತ್ತಿಗೆ ಕಾರ್ಮಿಕರ ಶೋಷಣೆಯನ್ನು ನಿಲ್ಲಿಸುವ ಕುರಿತಾದ ಬೇಡಿಕೆಗಳನ್ನು ಸಿಐಟಿಯು ರಾಜ್ಯ ಕಾರ್ಯದರ್ಶಿ ಎಸ್. ವರಲಕ್ಷ್ಮಿ ಪರಿಶೀಲಿದ್ದರು. ಈ ಸಂಚಿಕೆಯಲ್ಲಿ ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಸಂಬಂಧಪಟ್ಟ ಬೇಡಿಕೆಯ ಬಗ್ಗೆ ಪರಿಶೀಲಿಸಿರುವ ಭಾಗವನ್ನು ಪ್ರಕಟಿಸುತ್ತಿದ್ದೇವೆ.

ಸಾರ್ವಜನಿಕ ವಲಯದಲ್ಲಿ ಶೇರು ಹಿಂಪಡಿಕೆ, ಆಯಕಟ್ಟಿನ ಮಾರಾಟ ಮತ್ತು ಎಫ್‌ಡಿಐ ಮೋಹ ದೇಶಕ್ಕೆ ಮಾರಕ

ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳ ಬಂಡವಾಳ ಹಿಂತೆಗೆತ, ರಕ್ಷಣೆ, ರೈಲ್ವೆ, ವಿಮೆ, ಬ್ಯಾಂಕುಗಳು ಮುಂತಾದ ಆಯಕಟ್ಟಿನ ಕ್ಷೇತ್ರಗಳಲ್ಲಿ ಮಿತಿಇಲ್ಲದ ವಿದೇಶಿ ನೇರ ಬಂಡವಾಳ ಹೂಡಿಕೆ ಮುಂತಾದ ಎಲ್ಲಾ ಕ್ರಮಗಳನ್ನು ಸರ್ಕಾರದ ನೀತಿಗನುಗುಣವಾಗಿಯೇ ತೆಗೆದುಕೊಳ್ಳಲಾಗುತ್ತಿದೆ ಎಂದು ಹೇಳುವ ಸರ್ಕಾರವು ಕಾರ್ಮಿಕ ಸಂಘದ ಬೇಡಿಕೆಗಳನ್ನು ನಿರ್ಲಕ್ಷಿಸಿದೆ.

ಆದರೆ ದೇಶದ ಅರ್ಥವ್ಯವಸ್ಥೆಯಲ್ಲಿ ಕಾರ್ಮಿಕರೂ ಪಾತ್ರಧಾರಿಗಳೇ ಅಲ್ಲವೆ? ಮತ್ತು ಅವರ ದನಿ ಕೇಳಿಸಬೇಕಾಗಿಲ್ಲವೆ?

ಬಂಡವಾಳ ಹಿಂತೆಗೆತದ ಹೆಸರಿನಲ್ಲಿ ಲಾಭಗಳಿಸುತ್ತಿರುವ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳ ಷೇರುಗಳನ್ನು ತೀರಾ ಕಡಿಮೆ ಬೆಲೆಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಬಂಡವಾಳ ಹಿಂತೆಗೆತದ ಪ್ರತಿಯೊಂದು ಪ್ರಕರಣದಲ್ಲೂ ಸಂಬಂಧಪಟ್ಟ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳ ಷೇರಿನ ಬೆಲೆಯನ್ನು ಆ ಉದ್ದಿಮೆಯ ಒಟ್ಟು ಮೂಲ ಆಸ್ತಿಗಿಂತಲೂ ತೀರಾ ಕಡಿಮೆ ಮಟ್ಟದಲ್ಲಿ ನಿಗದಿಗೊಳಿಸಲಾಗಿದೆ. ಉದಾಹರಣೆಯಾಗಿ ಭಾರತೀಯ ಉಕ್ಕು ಪ್ರಾಧಿಕಾರ (ಎಸ್.ಎ.ಐ.ಎಲ್)ದ ಷೇರು ಗಳನ್ನು ಅಂತಿಮವಾಗಿ ಸುಮಾರು ರೂಪಾಯಿ 200ಕ್ಕೆ ಒಂದರಂತೆ ಮಾರಲಾಯಿತು. ಭಾರತೀಯ ಉಕ್ಕು ಪ್ರಾಧಿಕಾರವು 10 ರೂಪಾಯಿ ಮುಖ ಬೆಲೆಯ 413 ಕೋಟಿ ಷೇರುಗಳನ್ನು ಹೊಂದಿದೆ. ರೂಪಾಯಿ 200ಕ್ಕೆ ಒಂದರಂತೆ ಎಲ್ಲಾ ಷೇರುಗಳನ್ನು ಒಂದು ವೇಳೆ ಮಾರಾಟ ಮಾಡಿದಲ್ಲಿ ಇಡೀ ಉದ್ದಿಮೆಯನ್ನೇ 82600 ಕೋಟಿ ರೂಪಾಯಿಗಳ ಬೆಲೆಗೆ ಮಾರಿ ಬಿಡಬಹುದು. ಶೇ.51 ರಷ್ಟು ಷೇರುಗಳ್ನು ಮಾರಿದ ಪಕ್ಷದಲ್ಲಿ, 5 ಲಕ್ಷ ಕೋಟಿಗಳಿಗಿಂತಲೂ ಹೆಚ್ಚು ಆಸ್ತಿಯನ್ನು (8 ಕಾರ್ಯನಿರತ ಉಕ್ಕು ಸ್ಥಾವರಗಳು, 37 ಶಾಖಾ ಕಛೇರಿಗಳು, 55 ದಾಸ್ತಾನುಯಾರ್ಡ್‌ಗಳು ಕಬ್ಬಿಣದ ಅದಿರಿನ ಗಣಿಗಳು ಇತ್ಯಾದಿಗಳೆಲ್ಲವನ್ನೂ ಇದು ಒಳಗೊಂಡಿದ್ದು, ಇವು ಉತ್ಪಾದನೆಯಲ್ಲಿ ತೊಡಗಿರುವ ಹಾಗೂ ಮೌಲ್ಯ ಸೃಷ್ಟಿಸುವ ಆಸ್ತಿಗಳನ್ನು) ಹೊಂದಿರುವ ಭಾರತೀಯ ಉಕ್ಕು ಪ್ರಾಧಿಕಾರದ ಸಂಪೂರ್ಣ ನಿಯಂತ್ರಣವನ್ನು ಕೇವಲ 42123 ಕೋಟಿ ರೂಪಾಯಿಗಳಿಗೆ ವರ್ಗಾಯಿಸಿದಂತಾಗುತ್ತದೆ.

ಲಾಭದಾಯಕ ಸಾರ್ವಜನಿಕ ಕ್ಷೇತ್ರದ ಉದ್ದಿಮೆಯ ಷೇರನ್ನು ಬಂಡವಾಳ ಹಿಂತೆಗೆತದ ಅಡಿಯಲ್ಲಿ ಖಾಸಗಿಯವರ ಕೈಗೆ ವರ್ಗಾಯಿಸುವಾಗ ಷೇರಿನ ಬೆಲೆಯು ಅವುಗಳ ನಿಜವಾದ ಮೌಲ್ಯ ಮತ್ತು ಇಡೀ ಆಸ್ತಿ ಹಾಗೂ ಮೌಲ್ಯ ಉತ್ಪಾದಕ ಸಾಮರ್ಥ್ಯಕ್ಕೆ ಸಂಬಂಧಪಡದೇ ಇರುವುದು ಬಂಡವಾಳ ಹಿಂತೆ-ಗೆತದ ಎಲ್ಲಾ ಪ್ರಕರಣಗಳಲ್ಲೂ ಸತ್ಯವಾದದ್ದಾಗಿದೆ ಈ ಬಂಡವಾಳ ಹಿಂತೆಗೆತದ ಪ್ರಕ್ರಿಯೆ ಇಡೀ ಮಾರುಕಟ್ಟೆ ಅವಲಬಿತ ಷೇರುಬೆಲೆ ನಿರ್ಣಯದ ಆಧಾರದಲ್ಲಿ ಅಪಾರ ಮೌಲ್ಯವನ್ನು ಉತ್ಪಾದಿಸುತ್ತಿರುವ ರಾಷ್ಟ್ರೀಯ ಸಂಪತ್ತನ್ನು ಹಂತ ಹಂತವಾಗಿ ಖಾಸಗಿ ನಿಯಂತ್ರಣಕ್ಕೆ ವರ್ಗಾಯಿಸುವ ತಂತ್ರವಾಗಿದೆ.

ಇದು ರಾಷ್ಟ್ರೀಯ ಸಂಪತ್ತನ್ನು ಲೂಟಿ ಮಾಡುವ ಸುಲಿಗೆ ಮಾಡುವ ಅಪರಾಧವನ್ನು ಒಳಗೊಂಡ ಭ್ರಷ್ಟಾಚಾರವಲ್ಲದಿದ್ದರೆ, ಮತ್ತೆ ಬೇರೆ ಏನು? ಬಂಡವಾಳ ಹಿಂತೆಗೆತದ ಈ ಭ್ರಷ್ಟ ಪ್ರಕ್ರಿಯೆಯನ್ನು ಸರ್ಕಾರವು 'ಇದು ಸರ್ಕಾರದ ನೀತಿ' ಎಂದು ಸಮರ್ಥಿಸಿಕೊಂಡರೂ, ಈ ನೀತಿಯನ್ನು ದೇಶದ ಹಾಗೂ ಜನತೆಯ ಹಿತಾಸಕ್ತಿಯಿಂದ ಮಾಡಲಾಗಿದೆ, ಎಂದು ಅರ್ಥೈಸಿಕೊಳ್ಳಲು ಸಾಧ್ಯವೇ? ದೇಶದ ಅರ್ಥವ್ಯವಸ್ಥೆ ಮತ್ತು ಜನರ ಹಿತಾಸಕ್ತಿಯ ವಿರುದ್ಧ ಮುಂದುವರಿಸುತ್ತಿರುವ ಇಂತಹ ಪ್ರತಿಗಾಮಿ ನೀತಿಯನ್ನು ಈ ದೇಶದ ಕಾರ್ಮಿಕ ಆಂದೋಲನ ಸುಮ್ಮನೇ ಕಣ್ಣು ಮುಚ್ಚಿ ಒಪ್ಪಿಕೊಳ್ಳಲು ಸಾಧ್ಯವೇ?

ಷೇರು ಬಂಡವಾಳ ಹಿಂತೆಗೆತದ ವಿಷಯವು ಕೇವಲ ಅಷ್ಟಕ್ಕೇ ಸೀಮಿತವಾಗಿಲ್ಲ. ಇದು ನವ-ಉದಾರವಾದೀ ಹಾದಿಯನ್ನು ಅನುಸರಿಸುತ್ತಿರುವ ಸರ್ಕಾರವು ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳ ವಿರುದ್ಧವಾಗಿ ರೂಪಿಸಿರುವ ನೀತಿಯ ಒಟ್ಟು ಚೌಕಟ್ಟಿನಲ್ಲಿರುವ ಉಪಕರಣಗಳ ಪೈಕಿ ಒಂದಾಗಿದೆ.

ವ್ಯಾಪಾರ ವ್ಯವಸ್ಥೆಯಲ್ಲಿನ ನಿಯಂತ್ರಣಗಳನ್ನು ತೆಗೆದು ಸಾರ್ವಜನಿಕ ವಲಯದ ಘಟಕಗಳಿಗೆ, ಮತ್ತು ಒಟ್ಟಾರೆಯಾಗಿ ದೇಶೀ ಉದ್ದಿಮೆಗಳಿಗೆ ಅನಾನುಕೂಲ ತಂದಿರುವುದು, ಯಾವುದೇ ಸಮಂಜಸವಾದ ಕಾರಣವಿಲ್ಲದೆಯೇ, ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ, ಕೇವಲ ಖಾಸಗಿ ಪಾಲುದಾರರಿಗೆ ಮಾತ್ರವೇ ಅನುಕೂಲವನ್ನುಂಟು ಮಾಡಲು ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳನ್ನು, ಒಳಗೊಳ್ಳುವಂತೆ ಮಾಡುವುದು ಇತ್ಯಾದಿ ಸಾರ್ವಜನಿಕ ಕ್ಷೇತ್ರ-ವಿರೋಧಿಯಾಗಿರುವ ಧೋರಣೆಯ ಚೌಕಟ್ಟಿನಲ್ಲಿ ಬರುತ್ತವೆ. ಬಂಡವಾಳ ಹಿಂತೆಗೆತ ಇದರ ಅಭಿನ್ನ ಭಾಗವೇ ಆಗಿದೆ.

ಪ್ರಮುಖ ಬಂದರುಗಳನ್ನು ಕಂಪನಿಗಳಾಗಿ ಪರಿವರ್ತಿಸುವುದು ಕೂಡ ಅದೇ ಚೌಕಟ್ಟಿಗೆ ಸೇರಿದ್ದು ಖಾಸಗೀಕರಣದ ಕಡೆಗಿನ ಹಾದಿಯನ್ನು ಇದು ಸುಗಮಗೊಳಿಸುತ್ತದೆ.

ಕಲ್ಲಿದ್ದಲು ಗಣಿ ರಾಷ್ಟ್ರೀಕರಣ ಕಾಯ್ದೆಯ ತಿದ್ದುಪಡಿ ಕೂಡ ಈ ಪ್ರಕ್ರಿಯೆಯ ಅಭಿನ್ನ ಭಾಗ. ಕಲ್ಲಿದ್ದಲು ಗಣಿಗಳನ್ನು ಖಾಸಗಿಯವರ ಕೈಗೆ ವಾಣಿಜ್ಯ ಉದ್ದೇಶಗಳಿಗಾಗಿ ನೀಡುವ ಮತ್ತು ಅದೇ ಸಂದರ್ಭದಲ್ಲಿ 'ಕೋಲ್ ಇಂಡಿಯಾ'ವನ್ನೂ ಪುನರ್ರಚನೆಯ ಹೆಸರಿನಲ್ಲಿ ಪೂರ್ಣವಾಗಿ ನಿರ್ನಾಮ ಮಾಡುವ ತೀವ್ರವಾದ ಒಳಸಂಚು ಇದರಲ್ಲಿ ಅಡಗಿದೆ.

ಇದೇ ಚೌಕಟ್ಟಿನ ಒಳಗೇ ಇರುವ ವಿದ್ಯುತ್ ತಿದ್ದುಪಡಿ ವಿಧೇಯಕ – 2015 ಕೂಡಾ ಈ ನಿರ್ಣಾಯಕ ಸಾರ್ವಜನಿಕ ಬಳಕೆಯ ಕ್ಷೇತ್ರವನ್ನು ಸಂಪೂರ್ಣವಾಗಿ ಮಾರುಕಟ್ಟೆ ಶಕ್ತಿಗಳ ಹತೋಟಿಗೆ ಕೊಡುವ ಒಂದು ಪ್ರತಿಗಾಮಿ ಹೆಜ್ಜೆ. ಅದನ್ನು ಲಾಭಕ್ಕಾಗಿ ಬಾಯ್ಬಿಡುವ ದೇಶೀಯ ಹಾಗೂ ವಿದೇಶಿಯ ಕಾರ್ಪೋರೇಟ್‌ಗಳ ಕೈಗೆ ನೀಡುವ ಕ್ರಮ.

ಇಡೀ ವಿಶ್ವದಾದ್ಯಂತ ವಾಸ್ತವವಾಗಿ ಬಂಡವಾಳಶಾಹಿಯು ತೀವ್ರತರ ಬಿಕ್ಕಟ್ಟಿಗೆ ಒಳಗಾಗಿರುವ ಪ್ರಸ್ತುತ ಹಂತದಲ್ಲಿ ರಾಷ್ಟ್ರೀಯ ಸಂಪತ್ತು ಮತ್ತು ನೈಸರ್ಗಿಕ ಸಂಪನ್ಮೂಲಗಳ ಖಾಸಗೀಕರಣ ಮತ್ತು ಕಂಪನೀಕರಣ ಮತ್ತು ಅಂತಹ ಅನಾಹುತಕ್ಕೆ ಅನುಕೂಲ ಕಲ್ಪಿಸಿ ಕೊಡಲು ಇಡೀ ಆಳ್ವಿಕೆಯ ಖಾಸಗೀಕರಣ- ಇದು ನವ-ಉದಾರವಾದೀ ಪ್ರಾಜೆಕ್ಟ್‌ನ ಸಮಗ್ರ ಗುರಿ. ಈ ಯೋಜನೆಯ ಕಡೆಗೆ ಯಾವುದೇ ತೊಂದರೆ ಇಲ್ಲದೇ ವೇಗವಾಗಿ ಮುನ್ನಡೆಯಲಿಕ್ಕೆ ಕೊಟ್ಟಿರುವ ಮುಂಚೂಣಿ ಘೋಷಣೆಯೇ 'ವ್ಯವಹಾರ ನಡೆಸಲು ಸುಗಮತೆ'.

ಈ ಪ್ರಕ್ರಿಯೆಯನ್ನು ಕಾರ್ಮಿಕ ಆಂದೋಲನ ಹೆಜ್ಜೆ-ಹೆಜ್ಜೆಗೂ ವಿರೋಧಿಸಬೇಕು, ಅದರ ವಿರುದ್ಧ ಹೋರಾಡಬೇಕು. ಜನತೆಯ ಮತ್ತು ದೇಶದ ಉಳಿವಿಗಾಗಿ, ಹಾಗೆಯೇ ಪ್ರಜಾಪ್ರಭುತ್ವೀಯ ರಚನೆ ಮತ್ತು ಆಳ್ವಿಕೆ ಕಾರ್ಪೋರೇಟ್‌ಗಳ/ಬಹುರಾಷ್ಟ್ರೀಯ ಕಂಪನಿಗಳ ಕೈವಶವಾಗದಂತೆ ನೋಡಿಕೊಳ್ಳಲು ಇದು ಅಗತ್ಯ.

ಸರ್ಕಾರದ ತೀರಾ ಇತ್ತೀಚಿನ ನಡೆಯೆಂದ-ರೆ 'ಬ್ಲೂ ಚಿಪ್'(ಅಂದರೆ ಉನ್ನತ ಮೌಲ್ಯ ಹೊಂದಿರುವ) ಲಾಭಮಾಡುತ್ತಿರುವ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳ ಆಯಕಟ್ಟಿನ ಮಾರಾಟದ ಪ್ರಕಟಣೆ, ಜತೆಗೆ ಇನ್ನು ಕೆಲವು ಘಟಕಗಳ ಶೇರುಗಳ ಹಿಂಪಡೆತ. ಆಯಕಟ್ಟಿನ ಮಾರಾಟ ಎಂದರೆ ಸಂಬಂಧಪಟ್ಟ ಸಾರ್ವಜನಿಕ ವಲಯದ ಘಟಕಗಳ ಬಹುಪಾಲು ಶೇರುಗಳನ್ನು ಖಾಸಗಿಯವರಿಗೆ ವರ್ಗಾವಣೆ ಮಾಡಿ, ಆಡಳಿವನ್ನೂ ಅವರಿಗೆ ವರ್ಗಾಯಿಸುವ ಕಾರ್ಯತಂತ್ರ. ಇದು ಸಂಪೂರ್ಣ ಖಾಸಗೀಕರಣವೇ ಹೊರೆತು ಬೇರೇನೂ ಅಲ್ಲ.

ಈಗಾಗಲೇ ಬಿಹೆಚ್‌ಇಎಲ್, ಐಒಸಿ, ಒಎನ್‌ಜಿಸಿ, ಹೆಚ್‌ಪಿಸಿಎಲ್, ಬಿಪಿಸಿಎಲ್, ಮತ್ತಿತರ ಕೆಲವು ಕಂಪನಿಗಳು ಇದಕ್ಕೆ ಆಯ್ಕೆ ಮಾಡಿರುವ ಪಟ್ಟಿಯಲ್ಲಿವೆ. ಪ್ರಸಕ್ತ ಬಜೆಟ್‌ನಲ್ಲಿ 56600 ಕೋಟಿ ರೂಪಾಯಿಗಳನ್ನು ಬಂಡವಾಳ ಹಿಂತೆಗೆತದ ಮೂಲಕ ಹಾಗೂ ಅದರಲ್ಲಿ 20500 ಕೋಟಿ ರೂಪಾಯಿಗಳನ್ನು ಆಯಕಟ್ಟಿನ ಮಾರಾಟದ ಮೂಲಕ ಸಂಗ್ರಹಿಸುವ ಗುರಿಯನ್ನೂ ಸರ್ಕಾರವು ಹೊಂದಿದೆ. ಈ ಆಯಕಟ್ಟಿನ ಮಾರಾಟ, ಅಂದರೆ 9 ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳನ್ನು ಸಾರಾಸಗಟವಾಗಿ ಖಾಸಗೀಕರಣವನ್ನು ಹಿಂದಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವೂ ಕೈಗೊಂಡಿತ್ತು. ತನ್ನ ದುಷ್ಕೃತ್ಯವನ್ನು ಮರೆಮಾಚುವ ವಂಚಕ ಆಶಯದಿಂದ ಶೇರು ಹಿಂಪಡಿಕೆ ಇಲಾಖೆಗೆ 'ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆ' ಎಂದು ಮರುನಾಮಕರಣ ಮಾಡಿತು. ಯುಪಿಎ ಆಳ್ವಿಕೆಗೆ ಖಾಸಗೀಕರಣದ ದಾರಿಯಲ್ಲಿ ಮುಂದುವರೆಯಲು, ಶೇರು ಹಿಂಪಡಿಕೆ ನಡೆಸಲು ಕೂಡ ಕಾರ್ಮಿಕ ಸಂಘಗಳ ಪ್ರತಿರೋಧ ಮತ್ತು ಆಗ ಎಡಪಕ್ಷಗಳ ಮೇಲೆ ಸರ್ಕಾರವು ಅವಲಂಬಿತವಾಗಿದ್ದರಿಂದ ಸಾಧ್ಯವಾಗಲಿಲ್ಲ. ಬಿಹೆಚ್‌ಇಎಲ್, ಒಎನ್‌ಜಿಸಿ ಮತ್ತು ಇತರ ತೈಲ ಕಂಪನಿಗಳಂತಹ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳ ಸಾರಾಸಗಟು ಖಾಸಗೀಕರಣದ ವಿಚಾರವೇ ರಾಷ್ಟ್ರೀಯ ಹಿತಾಸಕಿಗಳಿಗೆ 'ಬಗೆವ ವಿಶ್ವಾಘಾತವೇ ಹೊರತು ಬೇರೇನೂ ನಿಜವಾಗಿಯೂ ಖಾಸಗೀಕರಣದ ವಿರುದ್ಧದ ನಮ್ಮ ಹೋರಾಟವು ವಾಸ್ತವವಾಗಿ ನಮ್ಮ ದೇಶದ ಆರ್ಥಿಕತೆ ಮತ್ತು ಸಾರ್ವಭೌಮತ್ವವನ್ನು ರಕ್ಷಿಸಲು ನಡೆಸುವ ಹೋರಾಟವೇ ಆಗಿದೆ. ಈ ಹೋರಾಟದಲ್ಲಿ ಯಾವುದೇ ಚಂಚಲತೆ ರಾಷ್ಟ್ರೀಯ ಹಿತಾಸಕ್ತಿಯ ವಿಷಯದಲ್ಲಿ ರಾಜಿ ಮಾಡಿಕೊಂಡಂತೆಯೇ ಸರಿ.

ರಕ್ಷಣಾ ಕ್ಷೇತ್ರ, ರೈಲ್ವೆ, ವಿಮೆ, ಬ್ಯಾಂಕುಗಳು ಇತ್ಯಾದಿ ಆಯಕಟ್ಟಿನ ಕ್ಷೇತ್ರಗಳಲ್ಲಿ ಉದಾರವಾಗಿ ಮತ್ತು ಅನಿಯಂತ್ರಿತವಾಗಿ ವಿದೇಶಿ ನೇರ ಹೂಡಿಕೆ(ಎಫ್‌ಡಿಐ)ಗೆ ಅವಕಾಶ ಕೊಡುವ ಸರ್ಕಾರದ ಕಾರ್ಯತಂತ್ರವು, ರಾಷ್ಟ್ರದ ಸಂಪತ್ತಿನ, ನೈಸರ್ಗಿಕ ಸಂಪನ್ಮೂಲಗಳ ಸಾರಾಸಗಟು

ಪುಟ 10 ಕ್ಕೆ





ಮೋದಿ 'ಮೇಕ್ ಇನ್ ಇಂಡಿಯಾ' ಅನ್ನುತ್ತಿದ್ದರೆ ಸಿದ್ದರಾಮಯ್ಯ 'ಇನ್‌ವೆಸ್ಟ್ ಇನ್ ಕರ್ನಾಟಕ' ಅನ್ನುತ್ತಿದ್ದಾರೆ

ಇವರ ನಡುವೆ ವ್ಯತ್ಯಾಸವಿಲ್ಲ. ಪರ್ಯಾಯ, ಎಡಪಕ್ಷಗಳ ಬಳಿಯಲ್ಲಿದೆ. ಜನ ಅದನ್ನು ಗುರುತಿಸಬೇಕಾಗಿದೆ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯಸಮಿತಿ ಅಭಿಪ್ರಾಯ ಪಟ್ಟಿದೆ. ಜುಲೈ 7ರಂದು ಸಭೆ ಸೇರಿದ ರಾಜ್ಯಸಮಿತಿ ರಾಜ್ಯದಲ್ಲಿನ ಬೆಳವಣಿಗೆಗಳನ್ನು ವಿಶ್ಲೇಷಿಸುವ ಒಂದು ವರದಿಯನ್ನು ಚರ್ಚಿಸಿ ಅಂಗೀಕರಿಸಿದ್ದು ಆ ವರದಿಯಲ್ಲಿನ ಕೆಲವು ಆಯ್ದ ಅಂಶಗಳು ಇಲ್ಲಿವೆ:

ಮುಖ್ಯ ಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷಗಳಾಗಿವೆ. ಹಿಂದಿನ ಬಿಜೆಪಿ ಅವಧಿಯಲ್ಲಿ ಭ್ರಷ್ಟಾಚಾರ ಮತ್ತು ಹಗರಣಗಳಿಂದ ರೋಸಿಹೋಗಿದ್ದ ಜನತೆ ಸಹಜವಾಗಿ ಸಿದ್ದರಾಮಯ್ಯ ನೇತೃತ್ವದ ಸರಕಾರದಿಂದ ಒಂದು ಜನಪರ ಆಡಳಿತವನ್ನು ಬಯಸಿದ್ದರು. ಅನ್ನಭಾಗ್ಯದಂತಹ ಆರಂಭದ ಕೆಲವು ಕಾರ್ಯಕ್ರಮಗಳು ಜನಮೆಚ್ಚುಗೆಗೆ ಪಾತ್ರವಾದವು. ಅದರೆ ನಂತರ ವ್ಯಕ್ತವಾದ ಸರ್ಕಾರದ ಧೋರಣೆಗಳು ಜನರ ನಿರೀಕ್ಷೆಗಳನ್ನು ಹುಸಿಗೊಳಿಸಿದವು.

ಮುಂಗಾರು–ಹಿಂಗಾರು ಮಳೆ ಕೈಕೊಟ್ಟ ಹಿನ್ನಲೆಯಲ್ಲಿ ರಾಜ್ಯ ಭೀಕರ ಬರಗಾಲಕ್ಕೆ ತುತ್ತಾಯಿತು. ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಹಾಹಾಕಾರ ಉಂಟಾಯಿತು. 137 ತಾಲೂಕುಗಳನ್ನು ಬರಪೀಡಿತವೆಂದು ಸರ್ಕಾರ ಘೋಷಿಸಿತಾದರೂ ಬರಪೀಡಿತ ಪ್ರದೇಶಗಳ ಜನರ ಸಂಕಷ್ಟಗಳಿಗೆ ಸರ್ಕಾರ ಸ್ಪಂಧಿಸಲಿಲ್ಲ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು, ಕೂಲಿಕಾರರಿಗೆ ವಾರಕ್ಕೊಮ್ಮೆ ಕೂಲಿ ಹಣ ಸಂದಾಯ ಮಾಡಲು ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಮುಂದಾಗಲಿಲ್ಲ. ಇದರ ಪರಿಣಾಮವಾಗಿ ಸಾವಿರಾರು ಕುಟುಂಬಗಳು ಉದ್ಯೋಗ ಹುಡುಕಿಕೊಂಡು ವಲಸೆ ಹೋಗುವಂತಾಯಿತು.

ಆಳವಾಗುತ್ತಿರುವ ಕೃಷಿ ಬಿಕ್ಕಟ್ಟಿನತ್ತ, ದಿವಾಳಿಯಾಗುತ್ತಿರುವ ರೈತರತ್ತ ಗಮನಹರಿಸುವ ಗೋಜಿಗೆ ಹೋಗಲಿಲ್ಲ ಸಿದ್ದರಾಮಯ್ಯ ಸರ್ಕಾರ. ಬೆಲೆ ಕುಸಿತದಿಂದ ಕಂಗಾಲದ ಭತ್ತ. ತೆಂಗು, ಅಡಿಕೆ, ರಬ್ಬರ್ ಮೊದಲಾದ ಬೆಳೆಗಾರರ ನೆರವಿಗೆ ಧಾವಿಸಲಿಲ್ಲ. ಕಳೆದ ಒಂದು ವರ್ಷದಲ್ಲಿ ರಾಜ್ಯದಲ್ಲಿ 1,376 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರೂ ಸರ್ಕಾರ ಎಚ್ಚೆತ್ತುಕೊಳ್ಳಲಿಲ್ಲ. ರೈತರ ಸಾಲಮನ್ನಾ ಮಾಡಲು ಸಾಧ್ಯವೇ ಇಲ್ಲ ಎಂದು ನಿರ್ದಯವಾಗಿ ಹೇಳಲು ಸಿದ್ದರಾಮಯ್ಯ ಹಿಂಜರಿಯಲಿಲ್ಲ. ಬೆಳೆ ಹಾನಿ ಅನುಭವಿಸಿದ ರೈತರಿಗೆ ಇದುವರೆಗೂ ಸಮರ್ಪಕ ಪರಿಹಾರ ದೊರತಿಲ್ಲ. ಆತ್ಮಹತ್ಯೆ ಮಾಡಿಕೊಂಡಿರುವ ಬಹುತೇಕ ರೈತರ ಕುಟುಂಬಗಳಿಗೆ ಘೋಷಿತ ಪರಿಹಾರ ಸಂದಾಯವಾಗಿಲ್ಲ. ರೈತರ ಆತ್ಮಹತ್ಯೆಗಳು ಮುಂದುವರೆಯುತ್ತಲೇ ಇವೆ.

ಈ ಅವಧಿಯಲ್ಲಿ ಅಗತ್ಯ ವಸ್ತುಗಳ, ಆಹಾರ ಧಾನ್ಯ, ಹಣ್ಣು ತರಕಾರಿಗಳ ಬೆಲೆಗಳು ಗಗನಕ್ಕೇರಿದವು. ಬೆಲೆ ಏರಿಕೆ ಯಿಂದ ಕಂಗೆಟ್ಟ ಬಡ ಹಾಗೂ ಮಧ್ಯಮ ವರ್ಗಗಳ ಜನತೆಗೆ ಸರ್ಕಾರ ಸಹಾಯಹಸ್ತ ಚಾಚಲಿಲ್ಲ. ಕೆ.ಜಿ.ಗೆ 2 ರೂ. ದರದಲ್ಲಿ ಬಿ.ಪಿ.ಎಲ್. ಕುಟುಂಬವೊಂದಕ್ಕೆ ತಿಂಗಳಿಗೆ 30 ಕೆ.ಜಿ. ಅಕ್ಕಿಯನ್ನು ವಿತರಿಸುವ ಅನ್ನ ಭಾಗ್ಯ ಯೋಜನೆಯನ್ನು ಹಿಂಪಡೆಯಲಾಯಿತು. ಅದರ ಬದಲಿಗೆ ಈಗ ವ್ಯಕ್ತಿಗೆ ಒಂದು ತಿಂಗಳಿಗೆ 5 ಕೆ.ಜಿ ಅಕ್ಕಿಯನ್ನು ಉಚಿತವಾಗಿ ನೀಡುವ ಯೂನಿಟ್ ಪದ್ಧತಿಯನ್ನು ಜಾರಿಮಾಡಲಾಗಿದೆ. ತಿಂಗಳಿಗೆ ನೀಡುವ 5 ಕೆ.ಜಿ ಅಕ್ಕಿ ಸಾಲದೆಂದು, ಮೊದಲಿನಂತೆ ತಿಂಗಳಿಗೆ 30 ಕೆ.ಜಿ. ಅಕ್ಕಿ ಕೊಡಬೇಕೆಂದು, ಅಕ್ಕಿ ಜತೆಯಲ್ಲಿ ಬೇಳೆ, ಎಣ್ಣೆ, ಸಕ್ಕರೆ ಮೊದಲಾದ ಅಗತ್ಯ ವಸ್ತುಗಳನ್ನು ರಿಯಾಯ್ತಿ ದರದಲ್ಲಿ ಒದಗಿಸಬೇಕೆಂದು ಎದ್ದಿರುವ ಬಡವರ ಕೂಗು ಸರ್ಕಾರಕ್ಕೆ ಕೇಳುತ್ತಿಲ್ಲ. ಇದರ ಜತೆಯಲ್ಲಿ ಪಡಿತರ ಪಡೆಯಲು ಆಧಾರ್ ಕಾರ್ಡ್ ನಂಬರ್ ನೀಡಬೇಕೆಂಬ ಷರತ್ತಿನಿಂದಾಗಿ ಸಾವಿರರು ಬಿಪಿಎಲ್ ಕುಟುಂಬಗಳು ಪಡಿತರದಿಂದ ವಂಚಿತವಾಗಿವೆ. ಕೇರಳದಲ್ಲಿ ಅಧಿಕಾರಕ್ಕೆ ಬಂದಿರುವ ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಸರ್ಕಾರ ಈ ಹಿಂದಿನಂತೆ ಅಗತ್ಯ ವಸ್ತುಗಳನ್ನು ಮಾರುಕಟ್ಟೆ ದರಗಳ ಮೂರರಲ್ಲಿ ಒಂದರಷ್ಟಕ್ಕೆ ಮಾವೇಲಿ ಸ್ಟೋರ್‌ಗಳ ಮೂಲಕ ನೀಡುತ್ತಿದೆ.

ಹುಸಿಯಾದ ಭ್ರಷ್ಟಾಚಾರಮುಕ್ತ ಆಡಳಿತದ ಭರವಸೆ :

ಬಿಜೆಪಿ ಸರ್ಕಾರದ ಬ್ರಹ್ಮಾಂಡ ಭ್ರಷ್ಟಾಚಾರದ ವಿಚಾರವನ್ನು ಜನರ ಮುಂದಿಟ್ಟು ಅಧಿಕಾರ ಪಡೆದಿದ್ದ ಕಾಂಗ್ರೆಸ್ ಭ್ರಷ್ಟಾಚಾರರಹಿತ ಆಡಳಿತದ ಭರವಸೆ ನೀಡಿತ್ತು. ಆದರೆ ಭ್ರಷ್ಟಾಚಾರ ನಿಗ್ರಹದ ಬಲಿಷ್ಠ ಅಸ್ತ್ರವಾದ ಲೋಕಾಯುಕ್ತ ಸಂಸ್ಥೆಯನ್ನೇ ಬಲಹೀನಗೊಳಿಸಲು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ವನ್ನು ರಚಿಸಿದ್ದಾರೆ. ಮುಖ್ಯಮಂತ್ರಿಗಳ ಅಡಿಯಲ್ಲಿ ಇರುವ ಎಸಿಬಿಯಿಂದ ಭ್ರಷ್ಟ ರಾಜಕಾರಣಿಗಳ ಮತ್ತು ಭ್ರಷ್ಟ ಹಿರಿಯ ಅಧಿಕಾರಿಗಳ ರಕ್ಷಣೆಯಾಗಲಿದೆಯೇ ಹೊರತು ಭ್ರಷ್ಟಾಚಾರ ನಿಗ್ರಹ ಸಾಧ್ಯವಿಲ್ಲ. ಸ್ವತ: ಮುಖ್ಯ ಮಂತ್ರಿ ಅರ್ಕಾವತಿ ಡಿನೋಟಿಫಿಕೇಷನ್ ಹಗರಣದ ಆರೋಪಕ್ಕೆ ಒಳಗಾಗಿದ್ದಾರೆ. ಸಿದ್ದರಾಮಯ್ಯನವರ ಪುತ್ರ ಅಕ್ರಮ ಲ್ಯಾಬ್ ಗುತ್ತಿಗೆಯ ಆರೋಪಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. ರಾಜ್ಯಾದ್ಯಂತ ಮರುಳು ಮಾಫಿಯಾ ತಲೆಯೆತ್ತಿ ನಿಂತಿದೆ. ಜನಸಾಮಾನ್ಯರಿಗೆ ಮನೆ ಕಟ್ಟಿಕೊಳ್ಳಲು ಮರಳು ಸಿಗದಂತಾಗಿದೆ. ಅಕ್ರಮ ಮರಳು ದಂಧೆಯಲ್ಲಿ ಪ್ರಭಾವಿ ಸಚಿವರ ಕೈವಾಡವಿದೆ ಎನ್ನಲಾಗುತ್ತಿದೆ. ಅನೇಕ ಮಂದಿ ಮಂತ್ರಿಗಳು ಇಂತಹ ಭ್ರಷ್ಟಾಚಾರದ ಆರೋಪಗಳನ್ನು ಎದುರಿಸುತ್ತಿದ್ದಾರೆ. ಪ್ರತಿಪಕ್ಷಗಳು ಎಸಿಬಿ ಸ್ಥಾಪನೆ ವಿರುದ್ಧ ನೆಪಕ್ಕಾಗಿ ಪ್ರತಿಭಟಿಸಿ ಸುಮ್ಮನಾಗಿವೆ. ಮುಂದೊಂದು ದಿನ ತಮಗೂ ಅಪಾಯ ಬರಬಹುದು ಎಂದುಕೊಂಡ ಪ್ರತಿಪಕ್ಷಗಳಿಗೆ ಲೋಕಾಯುಕ್ತ ನಿಷ್ಕ್ರಿಯವಾಗುವುದು ಬೇಕಾಗಿತ್ತು.

ನೀರಾವರಿಗೆ ದೊರೆಯದ ಆದ್ಯತೆ :

ಬರ ಪೀಡಿತ ಪ್ರದೇಶಗಳ ಜನಗಳು ಕುಡಿಯುವ ನೀರಿಗಾಗಿ ಪರದಾಡುವುದನ್ನು ಸರ್ಕಾರ ಮಾನವೀಯತೆಯ ದೃಷ್ಟಿಯಿಂದ ಗಮನಿಸಿದ್ದರೆ, ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು, ಹೊಸ ಯೋಜನೆಗಳನ್ನು ರೂಪಿಸಿ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಮೊದಲ ಆದ್ಯತೆ ನೀಡುತ್ತಿತ್ತು. ಆದರೆ ಅಂತಹ ಒಂದು ಸರ್ಕಾರ ಇದುವರೆಗೂ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದಿಲ್ಲ. ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಚಿತ್ರದುರ್ಗ ಮೊದಲಾದ ಬಯಲು ಸೀಮೆಯ ಜಿಲ್ಲೆಗಳು ಸದಾ ಬರಗಾಲಕ್ಕೆ ತುತ್ತಾಗುವ ಜಿಲ್ಲೆಗಳು. ಇಲ್ಲಿ ಯಾವ ಜೀವನದಿಗಳೂ ಇಲ್ಲ. ಹೀಗಾಗಿ ಈ ಜಿಲ್ಲೆಗಳಿಗೆ ಕುಡಿಯುವ ನೀರು ಮಾತ್ರವಲ್ಲ, ಕೃಷಿ ಚಟುವಟಿಕೆಗಳಿಗೂ ನೀರಿನ ಕೊರತೆ ಕಾಡುತ್ತದೆ. ಈ ಪ್ರದೇಶಕ್ಕೆ ಶಾಶ್ವತ ನೀರಾವರಿ ಯೋಜನೆ ರೂಪಿಸಬೇಕೆಂಬುದು ದಶಕಗಳ ಬೇಡಿಕೆಯಾಗಿದೆ. ಪಶ್ಚಿಮ ಘಟ್ಟಗಳಿಂದ ಸಮುದ್ರಕ್ಕೆ ಹರಿದು ಹೋಗುವ ನೀರನ್ನು ಈ ಪ್ರದೇಶಕ್ಕೆ ಹರಿಸುವ ನೀರಾವರಿ ತಜ್ಞ ಡಾ.ಜಿ.ಎಸ್ ಪರಮಶಿವಯ್ಯ ನೀಡಿರುವ ವರದಿ ಕರಾವಳಿ ಮತ್ತು ಬಯಲುಸೀಮೆಯ ಜಿಲ್ಲೆಗಳ ಜನರ ನಡುವೆ ಸಂಘರ್ಷಕ್ಕೆ ಕಾರಣವಾಗಿದೆ. ಈ ಕುರಿತು ಕಾಂಗ್ರೆಸ್ ಪಕ್ಷದ ನಾಯಕರೊಳಗೇ ಒಮ್ಮತವಿಲ್ಲ. ರಾಜ್ಯ ಸರ್ಕಾರ ರೂಪಿಸಲು ಹೊರಟಿರುವ ಎತ್ತಿನಹೊಳೆ ಯೋಜನೆಯೂ ಸಹ ವಿವಾದಗ್ರಸ್ತವಾಗಿದೆ. ಬಯಲು ಸೀಮೆಯ ಜಿಲ್ಲೆಗಳ ಕುಡಿಯುವ ನೀರಿನ ಕೊರತೆಯನ್ನಾಗಲಿ, ನೀರಾವರಿಗೆ ಬೇಕಾಗುವ ನೀರನ್ನಾಗಲಿ ಒದಗಿಸುವ ಸಾಮರ್ಥ್ಯ ಎತ್ತಿನ ಹೊಳೆ ಯೋಜನೆಗಿಲ್ಲ. ಮೇಕೆದಾಟು, ಶರಾವತಿ, ಕೃಷ್ಣಾ ನೀರಿನಲ್ಲಿ ಪಾಲು ಮುಂತಾದ ಇತರ ಮೂಲಗಳಿಂದಲೂ ನೀರನ್ನು ಪಡೆಯಲು ಸಾಧ್ಯವಾದರೆ ಮಾತ್ರ ಬಯಲು ಸೀಮೆಯ ಜಿಲ್ಲೆಗಳ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಬಹುದು. ಈ ವಿಷಯದಲ್ಲಿ ಸಿದ್ದರಾಮಯ್ಯ ಸರ್ಕಾರದ ರಾಜಕೀಯ ಇಚ್ಛಾ ಶಕ್ತಿ ಮುಖ್ಯವಾಗಲಿದೆ.

ಆದರಂತೆಯೇ, ಧಾರವಾಡ, ಗದಗ, ಬೆಳಗಾವಿ ಜಿಲ್ಲೆಗಳ ಜನ ಕಳೆದ ಒಂದು ವರ್ಷದಿಂದ ಮಹಾದಾಯಿ ಕಣಿವೆಯಲ್ಲಿ ಹರಿಯುವ ಕಳಸಾ, ಬಂಡೂರಿ ಮೊದಲಾದ ಹಳ್ಳಗಳ ನೀರನ್ನು ಮಲಪ್ರಭಾ ನದಿಗೆ ಹರಿಸಿ ಸವದತ್ತಿಯ ರೇಣುಕಾ ಸಾಗರವನ್ನು ಭರ್ತಿಮಾಡಲು ಒತ್ತಾಯಿಸಿ ಹೊರಾಟ ಮಾಡುತ್ತಿದ್ದಾರೆ. ಈ ಯೋಜನೆಯ ಅನುಷ್ಠಾನದಿಂದ ಹುಬ್ಬಳ್ಳಿ–ಧಾರವಾಡ ಮಹಾನಗರವೂ ಸೇರಿದಂತೆ ಇನ್ನೂ ಕೆಲವು ನಗರಗಳಿಗೆ ಕುಡಿಯುವ ನೀರಿನ ಪೂರೈಕೆಯಾಗಲಿದೆ ಮಾತ್ರವಲ್ಲ ಮಲಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿ ಇದುವರೆಗೂ ನೀರು ತಲುಪದೆ ಇರುವ ಕೃಷಿ ಭೂಮಿ ನೀರಾವರಿಗೆ ಒಳಪಟ್ಟು ಬರದ ಬವಣೆಯನ್ನು ತಪ್ಪಿಸಲು ಸಾಧ್ಯವಿದೆ. ಆದರೆ ಇದೊಂದು ಅಂತರ ರಾಜ್ಯ ವಿವಾದವಾಗಿ ಬೆಳೆದು ಬಂದಿರುವುದರಿಂದ ನ್ಯಾಯಾಧಿಕರಣದ ತೀರ್ಪಿಗೆ ಕಾಯಬೇಕಾಗಿದೆ. ಕೇಂದ್ರ ಸರ್ಕಾರ ಮನಸ್ಸು ಮಾಡಿದರೆ ಸಂಬಂಧಪಟ್ಟ ಮಹಾರಾಷ್ಟ್ರ, ಗೋವಾ ಮತ್ತು ಕರ್ನಾಟಕ ಸರ್ಕಾರಗಳ ನಡುವೆ ಸಂಧಾನವನ್ನು ಏರ್ಪಡಿಸಿ ನ್ಯಾಯಾಧೀಕರಣದ ಹೊರಗೆ ಸಮಸ್ಯೆಯನ್ನು ಇತ್ಯರ್ಥಪಡಿಸಬಹುದು. ಕೇಂದ್ರ ಸರ್ಕಾರವಾಗಲಿ ರಾಜ್ಯ ಸರ್ಕಾರಗಳೇ ಆಗಲಿ, ತಮ್ಮ ಪ್ರತಿಷ್ಠೆಯನ್ನು ಬದಿಗಿಟ್ಟು, ರಾಜಕೀಯ ಲಾಭ ನಷ್ಟವನ್ನು ಪರಿಗಣಿಸದೆ ಜನಹಿತಕ್ಕಾಗಿ ಮೊದಲ ಹೆಜ್ಜೆ ಇಡಲು ಹಿಂಜರಿಯಬಾರದು. ಪರಿಸ್ಥಿತಿ ವಿಕೋಪಕ್ಕೆ ಹೋಗವ ಮುನ್ನ ಸರ್ಕಾರ ಎಚ್ಚೆತ್ತುಕೊಳ್ಳಬೇಕಾಗಿದೆ.

ಕೈಗಾರಿಕಾ ಕ್ಷೇತ್ರದಲ್ಲೂ ಹಿನ್ನೆಡೆ :

ರಾಜ್ಯ ಸರ್ಕಾರ ಅದ್ಧೂರಿಯಾಗಿಯೇ ನಡೆಸಿದ 'ಹೂಡಿಕೆದಾರರ' ಸಮಾವೇಶಗಳ ಹೊರತಾಗಿಯೂ ರಾಜ್ಯದ ಕೈಗಾರಿಕಾ ಬೆಳವಣಿಗೆಯ ದರ ಕುಂಠಿತವಾಗಿಯೇ ಇದೆ. ಇದರಿಂದಾಗಿ ಹೊಸ ಉದ್ಯೋಗಗಳ ಸೃಷ್ಠಿಯಾಗುತ್ತಿಲ್ಲ. ಪರಿಣಾಮವಾಗಿ ನಿರುದ್ಯೋಗದ ಸಮಸ್ಯೆ ತೀವ್ರವಾಗುತ್ತಿದೆ.

ಮುಂದುವರೆಯುತ್ತಿರುವ ಕಾರ್ಮಿಕ ವಿರೋಧಿ ನೀತಿ :

ಸಿದ್ದರಾಮಯ್ಯ ಸರ್ಕಾರದ ಕಾರ್ಮಿಕ ವಿರೋಧಿ ನೀತಿ ಹಾಗೆಯೇ ಮುಂದುವರೆದಿದೆ. ಕಾರ್ಮಿಕ ಮುಷ್ಕರಗಳ ಬಗ್ಗೆ ಅದಕ್ಕೆ ಸಹನೆ ಇಲ್ಲ. ಕೆಲವು ಅನುಸೂಚಿತ ಕೈಗಾರಿಕೆಗಳಿಗೆ ಅನ್ವಯಿಸುವ ಕನಿಷ್ಠ ವೇತನವನ್ನು ಇತ್ತೀಚೆಗೆ ಪರಿಷ್ಕರಿಸಲಾಗಿತ್ತು. ಅದರ ವಿರುದ್ಧ ಮಾಲೀಕರು ರಾಜ್ಯ ಹೈಕೋರ್ಟ್‌ನಿಂದ ತಡೆಯಾಜ್ಞೆ ಪಡೆದಿದ್ದು ತಡೆಯಾಜ್ಞೆ ತೆರವುಗೊಳಿಸಲು ಸರ್ಕಾರ ಮುಂದಾಗಿಲ್ಲ. ಶಾಪ್ ಆ್ಯಂಡ್ ಕಮರ್ಶಿಯಲ್ ಎಸ್ಟಾಬ್ಲಿಷ್‌ಮೆಂಟ್ ಕಾಯ್ದೆಗೆ ತಿದ್ದುಪಡಿ ಮಾಡುವ ಮೂಲಕ ಕಾರ್ಮಿಕರ ಶೋಷಣೆಯನ್ನು ಹೆಚ್ಚಿಸಲು ಅವಕಾಶ ಕಲ್ಪಿಸಲಾಗಿದೆ. ಉದ್ಯೋಗ ಕಳೆದುಕೊಳ್ಳುವ ಭೀತಿಯನ್ನು ಎದುರಿಸುತ್ತಿರುವ ಬೀಡಿ ಕಾರ್ಮಿಕರಿಗೆ ಪರ್ಯಾಯ ಉದ್ಯೋಗ ಒದಗಿಸುವ ಬಗ್ಗೆ ಸರ್ಕಾರ ಆಸಕ್ತಿ ತೋರುತ್ತಿಲ್ಲ. ಪೌರ ಕಾರ್ಮಿಕರೂ ಸೇರಿದಂತೆ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ದುಡಿಯುತ್ತಿರುವ ಗುತ್ತಿಗೆ, ಹೊರ ಗುತ್ತಿಗೆ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡದೆ ಸತಾಯಿಸುತ್ತಿದೆ. ಐಸಿಡಿಎಸ್ ಅನ್ನು ಮಿಶನ್ ಮೋಡ್ ಅಡಿಯಲ್ಲಿ ಹಂತ ಹಂತವಾಗಿ ಖಾಸಗೀಕರಣ ಮಾಡಲು ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಸಾರಿಗೆ ನೌಕರರ ಸಂಘಗಳೊಂದಿಗೆ ಚರ್ಚಿಸದೆ, ನೌಕರರ ವೇತನವನ್ನು ಸರ್ಕಾರವೇ ಏಕಪಕ್ಷೀಯವಾಗಿ ಪರಿಷ್ಕರಿಸುವ ಮೂಲಕ ಮತ್ತೆ ತನ್ನ ಕಾರ್ಮಿಕ ವಿರೋಧಿ ನೀತಿಗೆ ಬದ್ಧವಾಗಿ ನಡೆದುಕೊಂಡಿದೆ. ಇತ್ತೀಚಿನ ಸಚಿವ ಸಂಪುಟ ಪುನರ್‌ರಚನೆಯಲ್ಲಿ ಮಾಲೀಕರೊಬ್ಬರನ್ನು ಕಾರ್ಮಿಕ ಮಂತ್ರಿ ಸ್ಥಾನಕ್ಕೆ ನೇಮಿಸಲಾಗಿದೆ. ಇದು ಕಾರ್ಮಿಕರ ಕುರಿತಾದ ಮಾಲೀಕರ ಪರ ನೀತಿಗೆ ಸಾಕ್ಷಿಯಾಗಿದೆ.

ಪುಟ 10 ಕ್ಕೆ

‘ಮೇಕ್ ಇನ್ ಇಂಡಿಯಾ’..... ‘ಇನ್‌ವೆಸ್ಟ್ ಇನ್ ಕರ್ನಾಟಕ’..... ಪುಟ 9 ರಿಂದ

ದಲಿತರಿಗೆ ದೊರೆಯದ ರಕ್ಷಣೆ :

ಅಹಿಂದ ಪರ ಸರ್ಕಾರದ ಆಡಳಿತದಲ್ಲಿ ದಲಿತರಿಗೆ ರಕ್ಷಣೆ ಎಂಬುದು ಇನ್ನೂ ಮರೀಚಿಕೆಯಾಗಿಯೇ ಉಳಿದಿದೆ. ದಲಿತರ ಅಭ್ಯುದಯಕ್ಕಾಗಿ ‘ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ನ್ನು ಜಾರಿಗೆ ತರಲಾಗಿದೆ ಎಂದು ಹೆಮ್ಮೆಪಟ್ಟುಕೊಳ್ಳಲಾಗಿದೆ. ಆಂಧ್ರ ಪ್ರದೇಶ ಬಿಟ್ಟರೆ ಇಂಥದೊಂದು ಕಾಯ್ದೆ ತಂದಿರುವುದು ಕರ್ನಾಟಕದಲ್ಲಿ ಮಾತ್ರ. ಆದ-ರೆ ಕಾಯ್ದೆಯನ್ನು ಜಾರಿಗೊಳಿಸಲು ಬೇಕಾಗುವ ನಿಯಮಗಳನ್ನು ಇದುವರೆಗೂ ರೂಪಿಸಲಾಗಿಲ್ಲ, ಯೋಜನೆ ಜಾರಿಮಾಡುವಲ್ಲಿ ವಿಳಂಬ, ಭ್ರಷ್ಟಾಚಾರ ಮುಂದುವರೆದಿದೆ.

ರಾಜ್ಯದಲ್ಲಿ ದಲಿತರ ಮೇಲೆ ದೌರ್ಜನ್ಯಗಳು, ಮರ್ಯಾದಾ ಹತ್ಯೆಗಳು ಮುಂದುವರೆಯುತ್ತಲೇ ಇವೆ. ದೇವಸ್ಥಾನ, ಕೆರೆಭಾವಿ, ಕ್ಷೌರದ ಅಂಗಡಿ ಪ್ರವೇಶ ನಿರಾಕರಣೆಯ ಘಟನೆಗಳು ಜರುಗುತ್ತಲೇ ಇವೆ. ದಲಿತರ ಮೇಲೆ ಹಲ್ಲೆ, ಅತ್ಯಾಚಾರ, ಅವಾಚ್ಯ ಶಬ್ದಗಳಿಂದ ಬೈದು ಅವಮಾನಿಸುವ ಪ್ರಕರಣಗಳು ಪೊಲೀಸ್ ಠಾಣೆಗಳಲ್ಲಿ ದಾಖಲಾಗುವುದೇ ಇಲ್ಲ. ಸವರ್ಣೀಯ ಅಪರಾಧಿಗಳ ವಿರುದ್ಧ ಕ್ರಮ ಜರುಗಿಸುವುದಿಲ್ಲ. ಇತ್ತೀಚೆಗೆ ಗಜೇಂದ್ರಗಡದಲ್ಲಿ ಲಂಬಾಣಿ ಯುವಕನೊಬ್ಬನನ್ನು ಮಾಜಿ ಶಾಸಕ ಕಳಸಪ್ಪ ಬಂಡಿ ಸಹೋದರ ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದಾಗ್ಯೂ ಪೊಲೀಸರು ಪ್ರಕರಣ ದಾಖಲು ಮಾಡಿಕೊಳ್ಳಲಿಲ್ಲ. ಸಿಪಿಐ(ಎಂ) ಪಕ್ಷದ ಕಾರ್ಯಕರ್ತರ ಸಹಕಾರದಿಂದ ದೌರ್ಜನ್ಯಕ್ಕೊಳಗಾದ ಯುವಕನ ಕುಟುಂಬದ ಸದಸ್ಯರು ವಾರಗಟ್ಟಲೇ ಸತ್ಯಾಗ್ರಹ ನಡೆಸಿದ ನಂತರವಷ್ಟೇ ಅಪರಾಧಿಯನ್ನು ಬಂಧಿಸಲಾಯಿತು.

ದಲಿತರ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳಲ್ಲಿ ಅನ್ಯಾಯಕ್ಕೊಳಗಾದ ದಲಿತರಿಗೆ ಪರಿಹಾರ ಪುರ್ನವಸತಿ ಕಲ್ಪಿಸಲು ಸರ್ಕಾರ ವಿಳಂಬಮಾಡಿ ಸತಾಯಿಸುತ್ತಿದೆ. ಗಂಗಾವತಿ ತಾಲೂಕು ಮರಕುಂಬಿ ದಲಿತ ದೊಡ್ಡ ವಿರೇಶಪ್ಪನ ಹತ್ಯೆಯಾಗಿ ಒಂದು ವರ್ಷ ಆಗಿದ್ದರೂ ಇದುವರೆಗೂ ಆತನ ಕುಟುಂಬಕ್ಕೆ ಪರಿಹಾರ ದೊರೆತಿಲ್ಲ. ದಲಿತರಿಗೆ ಖಾಸಗೀ ಕ್ಷೇತ್ರದಲ್ಲಿಯೂ ಮೀಸಲಾತಿ ನೀಡುವುದು ಅಗತ್ಯವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದು ಸ್ವಾಗತಾರ್ಹವೇ. ಆದರೆ ಅದರ ವಿರುದ್ಧ ಪತ್ರಿಕೆಗಳು ಸಂಪಾದಕೀಯವನ್ನು ಬರೆದಾಗ ಸರ್ಕಾರ ಪ್ರತಿಕ್ರಿಯೆ ನೀಡಲಿಲ್ಲ.

ಹಾಸನ ಜಿಲ್ಲೆಯ ಸಿಗರನಹಳ್ಳಿಯಲ್ಲಿ ದಲಿತರಿಗೆ ದೇವಸ್ಥಾನ ಪ್ರವೇಶ ನಿಷೇಧ ಮತ್ತು ಸಮುದಾಯ ಭವನಕ್ಕೆ ಸವರ್ಣೀಯರು ನಿಷೇಧ ಹೇರಿದ್ದ ಪ್ರಕರಣದಲ್ಲಿ ಮಧ್ಯಪ್ರವೇಶ ಮಾಡಿದ ದಲಿತ ಹಕ್ಕುಗಳ ಸಮಿತಿ ಮತ್ತು ಸಿಪಿಐ(ಎಂ) ಪಕ್ಷವು ಇತರ ದಲಿತ ಸಂಘಟನೆಗಳ ಜತೆಗೆ ನಡೆಸಿದ 8 ತಿಂಗಳ ಸುಧೀರ್ಘ ಹೋರಾಟದ ಫಲವಾಗಿ ಯಶಸ್ಸು ಸಾಧಿಸಲು ಸಾಧ್ಯವಾಗಿದೆ.

ನಮ್ಮ ದಲಿತ ಹಕ್ಕುಗಳ ಸಮಿತಿ ಈ ಅವಧಿಯಲ್ಲಿ ‘ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ಉಪಯೋಜನೆ’ ಕುರಿತು ರಾಜ್ಯ ಮಟ್ಟದ ಸಮಾವೇಶವನ್ನು ಯಶಸ್ವಿಯಾಗಿ ನಡೆಸಿದೆ.

ನಮ್ಮ ಆದಿವಾಸಿ ಬುಡಕಟ್ಟು ಹಕ್ಕುಗಳ ಸಮಿತಿಯ ಆಶ್ರಯದಲ್ಲಿ ಉತ್ತರ ಕನ್ನಡ ಜಿಲ್ಲೆಯ ಜೊಯ್ಡಾದಲ್ಲಿ ಕಾರ್ಯಕರ್ತರ ರಾಜ್ಯ ಮಟ್ಟದ ತರಬೇತಿ ಶಿಬಿರ ಮತ್ತು ವಿಚಾರ ಸಂಕಿರಣ ಯಶಸ್ವಿಯಾಗಿ ನಡೆದಿದೆ.

ಸಂಕಷ್ಟಕ್ಕೆ ಸಿಲುಕಿರುವ ಬಡ ಬಗರ್ ಹುಕುಂ ಸಾಗುವಳಿದಾರರು :

ಮಾಜಿ ಶಾಸಕ ಎ.ಟಿ. ರಾಮಸ್ವಾಮಿ, ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಮತ್ತು ಸಮಾಜ ಪರಿವರ್ತನಾ ಸಮುದಾಯದ ಎಸ್.ಆರ್. ಹಿರೇಮಠ್ ಮೊದಲಾದವರು ಒತ್ತಡ ಹೇರಿದ್ದರಿಂದ ಸರ್ಕಾರಿ ಭೂಮಿ ಒತ್ತುವರಿ ತೆರವಿಗೆ ರಾಜ್ಯ ಸರ್ಕಾರ ವಿಶೇಷ ಕೋರ್ಟ್ ಸ್ಥಾಪನೆ ಮಾಡಿದೆ. ಇದ-ರಿಂದಾಗಿ ಸುಮಾರು 15 ಲಕ್ಷ ಬಡ ಬಗರ್ ಹುಕುಂ ಸಾಗುವಳಿದಾರರು ಬೀದಿ ಪಾಲಾಗುವ ಅಪಾಯವಿದೆ. ವಿಶೇಷ ನ್ಯಾಯಾಲಯ ಅವರಿಗೆ 5 ವರ್ಷ ಶಿಕ್ಷೆ ಮತ್ತು 1ಲಕ್ಷ ದಂಡ ವಿಧಿಸಬಹುದಾಗಿದೆ. ಅದರಂತೆಯೇ ಗೋಮಾಳ, ಗಯರಾಣಾ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವವರನ್ನು ಹಾಗೂ ನಗರ ಪ್ರದೇಶಗಳ ನಿರ್ದಿಷ್ಟ ವ್ಯಾಪ್ತಿಯಲ್ಲಿ ಸಾಗುವಳಿ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಬಡವರು ಒಕ್ಕಲೆಬ್ಬಿಸಲ್ಪಡುವ ಭೀತಿಗೆ ಒಳಗಾಗಿದ್ದಾರೆ. ಸಂಬಂಧಪಟ್ಟ ಕಾಯ್ದೆಗಳಿಗೆ ತುರ್ತಾಗಿ ತಿದ್ದುಪಡಿಗಳನ್ನು ಮಾಡಿ ಈ ಬಡ ರೈತ ಕೂಲಿಕಾರ ವರ್ಗಕ್ಕೆ ಭೂಮಿಯ ಹಕ್ಕು ಸಿಗುವಂತಾಗಲು ಬಲವಾದ ಹೋರಾಟಗಳನ್ನು ರೂಪಿಸುವುದು ಅನಿವಾರ್ಯವಾಗಿದೆ. ಸಾರ್ವಜನಿಕ ಉದ್ದೇಶದ ಹೆಸರಿನಲ್ಲಿ ರೈತರ ಭೂಮಿಯನ್ನು ಬಲವಂತವಾಗಿ ಸ್ವಾಧೀನ ಪಡಿಸಿಕೊಳ್ಳುವ ಸರ್ಕಾರದ ದೌರ್ಜನ್ಯದ ಕ್ರಮವನ್ನೂ ವಿರೋಧಿಸಬೇಕಾಗಿದೆ.

ಕಾಂಗ್ರೆಸ್ ವೈಫಲ್ಯದ ಲಾಭ ಪಡೆಯಲು ಹೊಂಚುಹಾಕುತ್ತಿದೆ ಬಿಜೆಪಿ :

ರಾಜ್ಯದಲ್ಲಿ ಈಗಾಗಲೇ ಕಾಂಗ್ರೆಸ್ ಸರ್ಕಾರದ ಕಾರ್ಯವೈಖರಿ ಬಗ್ಗೆ ಜನರಲ್ಲಿ ಅತೃಪ್ತಿ ಬೆಳೆಯುತ್ತಿದೆ. ಇದರ ರಾಜಕೀಯ ಲಾಭ ಪಡೆಯಲು ಬಿಜೆಪಿ ಹೊಂಚು ಹಾಕುತ್ತಿದೆ. ಕಾಂಗ್ರೆಸ್ ಪಕ್ಷದೊಳಗೆ ಬುಗಿಲೆದ್ದಿರುವ ಭಿನ್ನಮತವನ್ನು ತನ್ನ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳಲು ಬಿಜೆಪಿ ತಂತ್ರ ರೂಪಿಸಿದೆ. ಜೆಡಿಎಸ್ ಬೆಳವಣಿಗೆಗಳನ್ನು ಅದು ಗಮನಿಸುತ್ತಿದ್ದು ಒಡಕಿನ ಲಾಭ ಪಡೆಯಲು ಲೆಕ್ಕಚಾರ ಹಾಕಿಕೊಂಡಿದೆ. ಯಡಿಯೂರಪ್ಪ ಪಕ್ಷದ ರಾಜ್ಯಾಧ್ಯಕ್ಷರಾದ ನಂತರ, ಮುಂದಿನ ವಿಧಾನಸಭಾ ಚುನಾವಣೆಯಲ್ಲಿ 150 ಸ್ಥಾನಗಳನ್ನು ಗೆಲ್ಲುವ ಗುರಿಯಿಟ್ಟುಕೊಂಡು ಅನ್ಯ ಪಕ್ಷಗಳಲ್ಲಿರುವ ವರ್ಚಸ್ಸು ಇರುವ ಮುಖಂಡರನ್ನು ಸೆಳೆಯಲು ಯೋಜನೆಯನ್ನು ರೂಪಿಸಿಕೊಂಡಿದ್ದಾರೆ. ಬೇರೆ ಪಕ್ಷದವರನ್ನು ಸೇರಿಸಿಕೊಳ್ಳುವಾಗ ಪಕ್ಷದಲ್ಲಿ ಭಿನ್ನಾಭಿಪ್ರಾಯಗಳಿಗೆ ಅಸ್ಪದವಾಗದಂತೆ ನೋಡಿಕೊಳ್ಳಬೇಕು ಎಂಬ ಎಚ್ಚರಿಕೆಯನ್ನು ಸಹ ಇಟ್ಟುಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಬಿಜೆಪಿಯಲ್ಲಿ ಯಡಿಯೂರಪ್ಪನವರ ನಡೆಯ ಬಗ್ಗೆ ಎದ್ದಿರುವ ಅತೃಪ್ತಿ, ಆರ್‌ಎಸ್‌ಎಸ್ ಮಧ್ಯಸ್ಥಿಕೆಯಿಂದ ಶಮನವಾಗದೆ ಇರಲಾರದು.

ಮತೀಯ ಶಕ್ತಿಗಳ ಅಕ್ರಮಣಕಾರಿ ಬೆಳವಣಿಗೆ :

ಕಾಂಗ್ರೆಸ್ ಸರ್ಕಾರದ ಮೃದು ಹಿಂದುತ್ವ ಧೋರಣೆಯಿಂದಾಗಿ ಹಿಂದುತ್ವ ಶಕ್ತಿಗಳ ಅಕ್ರಮಣಕಾರಿ ಪ್ರವೃತ್ತಿ ಹೆಚ್ಚುತ್ತಿದೆ. ಸರ್ಕಾರ ಮತ್ತು ಸಮಾಜದ ವಿವಿಧ ರಂಗಗಳಲ್ಲಿ ಹಿಂದುತ್ವ ಕಾರ್ಯಕರ್ತರು ನುಸುಳಿದ್ದಾರೆ. ಪೊಲೀಸರ ಬೇಡಿಕೆಗಳು ನ್ಯಾಯ ಸಮ್ಮತವಾಗಿದ್ದರೂ ಅವರನ್ನು ಹೋರಾಟಕ್ಕಿಳಿಸಿ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿದುಬೀಳುವಂತೆ ಮಾಡಲು ಪ್ರಯತ್ನಿಸಲಾಯಿತು ಎಂದು ಹೇಳಲಾಗುತ್ತಿದ್ದು ಇದರಲ್ಲಿ ಹಿಂದುತ್ವ ಶಕ್ತಿಗಳ ಪಾತ್ರವಿದೆ. ಪ್ರಗತಿಪರ ಚಿಂತನೆಯ ವ್ಯಕ್ತಿಗಳನ್ನು ಕೊಲ್ಲುವ ಪ್ರಕರಣಗಳು ಒಂದೊಂದಾಗಿ ಹೆಚ್ಚಾಗುತ್ತಿವೆ. ದನಗಳ ಸಾಗಾಟವನ್ನು ತಡೆಯುವ ಹೆಸರಿನಲ್ಲಿ ಕರಾವಳಿಯಲ್ಲಿ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯಗಳು ನಡೆಯುತ್ತಲೇ ಇವೆ. ಚರ್ಚುಗಳ ಮೇಲಿನ ದಾಳಿಗಳು ಮತ್ತೆ ಆರಂಭವಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯ ಆರ್.ಟಿ.ಐ ಕಾರ್ಯಕರ್ತ ವಿನಾಯಕ ಬಾಳಿಗರವರ ಕೊಲೆಯ ಪ್ರಮುಖ ಆರೋಪಿ ಎನ್ನಲಾದ ಹಿಂದುತ್ವವಾದೀ ಮುಂದಾಳು ನರೇಶ್ ಶೆಣೈಯ ಬಂಧನ ಹಾಗೂ ಈ ಇಡೀ ಘಟನೆಯ ಬಗೆಗಿನ ತನಿಖೆಯ ವಿಷಯದಲ್ಲಿ ಸರ್ಕಾರ ಮೀನಾಮೇಷ ಎಣಿಸುತ್ತಿದೆ. ಓಟಿನ ಲೆಕ್ಕಾಚಾರಕ್ಕೆ ಆತುಕೊಂಡಿರುವ ಕಾಂಗ್ರೆಸ್ ಸರ್ಕಾರ ಮತೀಯ ಶಕ್ತಿಗಳ ವಿರುದ್ಧ ದೃಢವಾದ ನಿಲುಮೆಯನ್ನು ಪ್ರದರ್ಶಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ಎಡಪಕ್ಷಗಳ ಹೊಣೆಗಾರಿಕೆ ಮಹತ್ವದ್ದಾಗುತ್ತಿದೆ. ರಾಜ್ಯದ ಪ್ರಗತಿಪರ ಮುಸ್ಲಿಂ ಚಿಂತಕರು ಒಂದು ವೇದಿಕೆಯನ್ನು ರಚಿಸಿಕೊಂಡು ಎಲ್ಲಾ ವಿಧದ ಮೂಲಭೂತವಾದದ ವಿರುದ್ಧ ಕ್ರಿಯಾಶೀಲರಾಗಲು ನಿರ್ಧರಿಸಿದ್ದು ನಮ್ಮ ಕೆಲವು ನಾಯಕರು ಅದರ ಜೊತೆ ಸೇರಿಕೊಂಡು ಪ್ರಭಾವ ಬೀರಲು ಸಾಧ್ಯವಾಗಬೇಕು.

ಇದೇ ಸಮಯದಲ್ಲಿ ರಾಜ್ಯದ ಪ್ರಗತಿಪರ ಮಠಾಧೀಶರ ಸಮಾವೇಶ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದಿದ್ದು ಜಾತ್ಯಾತೀತತೆಯ ಪರವಾಗಿ ಮತ್ತು ಕೋಮುವಾದ, ಜಾತಿ ತಾರತಮ್ಯ ಹಾಗೂ ಮೌಢ್ಯಾಚಾರಣೆಯ ವಿರುದ್ಧ ವಿಚಾರಗಳನ್ನು ಚರ್ಚಿಸಿದೆ. ಇದರ ನಡುವೆ ಇತ್ತೀಚೆಗೆ ಹೈಕೋರ್ಟಿನ ಹಾಲಿ ನ್ಯಾಯಾಧೀಶರೊಬ್ಬರು ರಾಮಮಂದಿರ ಕಟ್ಟಬೇಕೆಂದು ನೀಡಿರುವ ಹೇಳಿಕೆಯನ್ನು ನಮ್ಮ ಪಕ್ಷ ಖಂಡಿಸುತ್ತದೆ.

ಎಡಪಕ್ಷಗಳ ಮಧ್ಯಪ್ರವೇಶ :

ಕೇಂದ್ರದ ಬಿಜೆಪಿ ಸರ್ಕಾರದ ಧೋರಣೆಗಳಿಗೂ ರಾಜ್ಯ ಕಾಂಗ್ರೆಸ್ ಸರ್ಕಾರದ ಧೋರಣೆಗಳಿಗೂ ಯಾವುದೇ ಮೂಲಭೂತ ವ್ಯತ್ಯಾಸವಿಲ್ಲ ಎಂಬ ಸತ್ಯವನ್ನು ನಿಧಾನವಾಗಿಯಾದರೂ ಜನರು ಅರ್ಥ ಮಾಡಿಕೊಳ್ಳುತ್ತಿದ್ದಾರೆ. ಈ ಪ್ರಕ್ರಿಯೆಯನ್ನು ತೀವ್ರಗೊಳಿಸುವುದು ಎಡಪಕ್ಷಗಳ ಜವಾಬ್ದಾರಿ. ಎಡಪಕ್ಷಗಳು ಮಾತ್ರ ಕಾಂಗ್ರೆಸ್-ಬಿಜೆಪಿ ಪಕ್ಷಗಳಿಗೆ ಧೋರಣಾತ್ಮಕ ಪರ್ಯಾಯವನ್ನು ನೀಡಬಲ್ಲವು. ಮೋದಿ ‘ಮೇಕ್ ಇನ್ ಇಂಡಿಯಾ’ ಅನ್ನುತ್ತಿದ್ದರೆ ಸಿದ್ದರಾಮಯ್ಯ ‘ಇನ್‌ವೆಸ್ಟ್ ಇನ್ ಕರ್ನಾಟಕ’ ಅನ್ನುತ್ತಿದ್ದಾರೆ. ಇವರ ನಡುವೆ ವ್ಯತ್ಯಾಸವಿಲ್ಲ. ಪರ್ಯಾಯ, ಎಡಪಕ್ಷಗಳ ಬಳಿಯಲ್ಲಿದೆ. ಜನ ಅದನ್ನು ಗುರುತಿಸಬೇಕಾಗಿದೆ.

ಎಡ ಪರ್ಯಾಯವನ್ನು ಜನರ ಬಳಿ ಕೊಂಡೊಯ್ಯುವ ಉದ್ದೇಶದಿಂದ ರಾಜ್ಯದ ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ, ಸಿಪಿಐ(ಎಂ-ಎಲ್) ಲಿಬರೇಷನ್, ಎಸ್‌ಯುಸಿಐ(ಸಿ) ಪರಸ್ಪರ ಚರ್ಚೆ ಮಾಡಿಕೊಂಡು ಮೇ ತಿಂಗಳಲ್ಲಿ ಜಿಲ್ಲಾ ಮಟ್ಟದ ರಾಜಕೀಯ ಸಮಾವೇಶಗಳನ್ನು, ಜಾಥಾ, ಪ್ರಚಾರಾಂದೋಲನಗಳನ್ನು ನಡೆಸಲು ನಿರ್ಧರಿಸಲಾಯಿತು. ಜೂನ್ 6 ರಂದು ಬೆಂಗಳೂರಿನಲ್ಲಿ ಜಂಟಿ ರ್‍ಯಾಲಿಯನ್ನು ನಡೆಸಲು ತೀರ್ಮಾನಿಸಲಾಯಿತು. ಎಡಪಕ್ಷಗಳ ಕಾರ್ಯಕರ್ತರು ಈ ತೀರ್ಮಾನವನ್ನು ತುಂಬಾ ಉತ್ಸಾಹದಿಂದ ಜಾರಿಮಾಡಿದರು. ಬಹುತೇಕ ಜಿಲ್ಲೆಗಳಲ್ಲಿ ರಾಜಕೀಯ ಸಮಾವೇಶಗಳನ್ನು ನಡೆಸಲಾಯಿತು. ಒಂದು ಲಕ್ಷ ಕರಪತ್ರಗಳನ್ನು ಮುದ್ರಿಸಿ ವಿತರಿಸಲಾಯಿತು. ಜೂನ್ 6ರ ರ್‍ಯಾಲಿ ಮತ್ತು ಬಹಿರಂಗ ಸಭೆ ಸಹ ಯಶಸ್ವಿಯಾಯಿತು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಸುಧಾಕರ ರೆಡ್ಡಿ, ಎಸ್‌ಯುಸಿಐ(ಸಿ) ಪೊಲಿಟ್ ಬ್ಯೂ-ರೊ ಸದಸ್ಯ ಕೃಷ್ಣ ಚಕ್ರವರ್ತಿ, ಸಿಪಿಐ(ಎಂ-ಎಲ್) ಪೊಲಿಟ್ ಬ್ಯೂರೊ ಸದಸ್ಯರಾದ ಸ್ವಪನ್ ಮುಖರ್ಜಿ ಬಹಿರಂಗ ಸಭೆಯಲ್ಲಿ ಭಗವಹಿಸಿ ಮಾತನಾಡಿದರು. ಎಡಪಕ್ಷಗಳ ರಾಜ್ಯ ಮುಖಂಡರು ಭಾಗವಹಿಸಿದ್ದರು. ಈ ಆಂದೋಲನವನ್ನು ಜಿಲ್ಲಾ ಮಟ್ಟದಲ್ಲಿ ಮುಂದುವರೆಸಬೇಕೆಂದು ನಿರ್ಧರಿಸಲಾಯಿತು. ಅದರಂತೆಯೇ, ಜಿಲ್ಲಾ ಮಟ್ಟದಲ್ಲೂ ಎಡಪಕ್ಷಗಳ ಜಂಟಿ ರ್‍ಯಾಲಿಗಳನ್ನು ಸಂಘಟಿಸಬೇಕಾಗಿದೆ. ●

ಎಫ್‌ಡಿಐ ಮೋಹ ದೇಶಕ್ಕೆ ಮಾರಕ.... ಪುಟ 8 ರಿಂದ

ಖಾಸಗೀಕರಣದ ಹಾಗೂ ಕಾರ್ಪೋರೇಟ್‌ಗಳಿಗೆ ಆಡಳಿತವನ್ನು ವಹಿಸಿ ಕೊಡುವ ಅದೇ ಯೋಜನೆಯ ಅಭಿನ್ನ ಭಾಗವೇ ಆಗಿದೆ. ಈಗ ತಮ್ಮ ಉತ್ಪಾದನಾ ಸಾಮರ್ಥ್ಯದ ಶೇ. 60 ರಿಂದ 65 ರಷ್ಟನ್ನು ಮಾತ್ರ ಬಳಸುತ್ತಿರುವ ರಕ್ಷಣಾ ಕ್ಷೇತ್ರದಲ್ಲಿನ ಸಾರ್ವಜನಿಕ ಉದ್ದಿಮೆಗಳು ತಮ್ಮ ಕೆಲಸಗಳ 20ಶೇ.ವನ್ನು ಖಾಸಗಿಯವರಿಗೆ ಅವರ ಶರತ್ತುಗಳ ಮೇಲೆಯೇ ಹೊರಗುತ್ತಿಗೆ ನೀಡಬೇಕೆಂದು ನಿರ್ದೇಶನ ನೀಡಲಾಗಿದೆ. ಇದನ್ನು ‘ಮೇಕ್ ಇನ್‌ಇಂಡಿಯಾ’ ಘೋಷಣೆಯಡಿಯಲ್ಲಿ ಮಾಡಲಾಗುತ್ತಿದೆ. ಇದು ಇನ್ನೊಂದು ಮುಂಚೂಣಿಯಲ್ಲಿರುವ ವಂಚಕ ಘೋಷಣೆ. ರಕ್ಷಣಾ ಕ್ಷೇತ್ರದಲ್ಲಿ ವಿದೇಶಿ ನೇರ ಹೂಡಿಕೆಯನ್ನು ಸುಗಮಗೊಳಿಸುವುದಕ್ಕಾಗಿ ಇದನ್ನು ಮಾಡಲಾಗುತ್ತಿದೆ.

ಇವೆಲ್ಲ ವಿದೇಶಿ ನೇರ ಹೂಡಿಕೆಗಳ ಅನಿಯಂತ್ರಿತ ಪ್ರವೇಶದಿಂದಾಗಿ ರಾಷ್ಟ್ರೀಯ ಭದ್ರತೆಗೆ ತೀವ್ರ ಧಕ್ಕೆ ಉಂಟಾಗಬಹುದಾದ ಕ್ಷೇತ್ರಗಳು. ಜೊತೆಗೆ, ಇದು ದೇಶದ ಹಣಕಾಸು ಆರ್ಥಿಕವು ಜೂಜುಕೋರ ಶಕ್ತಿಗಳ ಮೋಸಗಳಿಗೆ, ಕಸರತ್ತುಗಳಿಗೆ ಈಡಾಗುವಂತೆ ಮಾಡುತ್ತದೆ.

ಕಾರ್ಮಿಕ ವರ್ಗವು ಇಂತಹ ಆಪತ್ಕಾರಿ ತಂತ್ರವನ್ನು ಪ್ರತಿರೋಧಿಸಬೇಕಾಗಿದೆ, ಈ ಪ್ರತಿ-ರೋಧ ಹೋರಾಟದಲ್ಲಿ ಸಮಸ್ತ ಜನತೆಯನ್ನು ಒಂದುಗೂಡಿಸುವ ದೃಢ ಪ್ರಯತ್ನ ಮಾಡಬೇಕಾಗಿದೆ. ಶೇರು ಹಿಂಪಡಿಕೆ, ಆಯಕಟ್ಟಿನ ಮಾರಾಟ ಮತ್ತು ಎಫ್‌ಡಿಐ ಮೋಹದಲ್ಲಿ ಕಾರ್ಮಿಕರ, ರೈತರ, ಒಟ್ಟಾರೆಯಾಗಿ ಜನತೆಯ ಮತ್ತು ರಾಷ್ಟ್ರೀಯ ಆರ್ಥಿಕದ ಹಿತಾಸಕ್ತಿಗಳಿಗೆ ಸಂಬಂಧಪಟ್ಟಂತೆ ಸಕಾರಾತ್ಮಕವಾದದ್ದು ಏನೂ ಇಲ್ಲ. ಈ ವಿಷಯದಲ್ಲಿ ಯಾವ ರಾಜಿ ಕೂಡ ಸಾಧ್ಯವಿಲ್ಲ. ●



ದಕ್ಷಿಣ ಕನ್ನಡ ದಂತಹ ಕೋಮುಕುಲುಮೆಯಲ್ಲಿ ಎಲ್ಲಾ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿ, ಎರಡೂವರೆ ವರ್ಷ ಕೆಲಸ ನಿರ್ವಹಿಸಿ, ಜನಸಾಮಾನ್ಯರ ಡಿ ಸಿ ಎಂಬ ಹೆಗ್ಗಳಿಕೆಗೆ ಪಾತ್ರರಾದ ಎ ಬಿ ಇಬ್ರಾಹಿಂ ವರ್ಗಾವಣೆ ಗೊಂಡಿದ್ದಾರೆ. ದಕ್ಷಿಣ ಕನ್ನಡದಲ್ಲಿ ನೆನಪಿನಲ್ಲಿ ಉಳಿಯುವ ಜಿಲ್ಲಾಧಿಕಾರಿಗಳ ಹೆಸರಿನ ಸಾಲಿನಲ್ಲಿ ಇಬ್ರಾಹಿಂ ಹೆಸರು ಮೊದಲ ಸಾಲಿನಲ್ಲಿ ಇರುತ್ತದೆ. ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಇಂತಹ ಓರ್ವ ಸಜ್ಜನ, ದಕ್ಷ ಜಿಲ್ಲಾಧಿಕಾರಿಯ ವರ್ಗಾವಣೆಗೆ ಹಠ ಹಿಡಿದು ಕೊನೆಗೂ ಯಶಸ್ಸು ಸಾಧಿಸಿದ್ದು ಮಂಗಳೂರು ನಗರದ ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯಕ್ಕೆ ಸೇರಿದ ಇಬ್ಬರು ಶಾಸಕರು ಎಂಬುದು ವಿಪರ್ಯಾಸ.

– ಮುನೀರ್ ಕಾಟಿಪಳ್ಳ

ಆರೋಗ್ಯ ಕ್ಷೇತ್ರದಲ್ಲಿ ತರಬೇಕಾದ ಸುಧಾರಣೆಗಳು

ಡಾ|| ಪ್ರಕಾಶ್ ಸಿ.ರಾವ್

ಆರೋಗ್ಯ ವ್ಯವಸ್ಥೆ ಬಗ್ಗೆ ಸರಕಾರ ಎಲ್ಲ ಜವಾಬ್ದಾರಿಯನ್ನು ತೆಗೆದುಕೊಳ್ಳುವುದನ್ನು ಅನೇಕ ದೇಶಗಳಲ್ಲಿ ನೋಡುತ್ತಿದ್ದೇವೆ. ಆದರೆ ಭಾರತದಲ್ಲಿ ಆರೋಗ್ಯ ವ್ಯವಸ್ಥೆ ಕಡೆಗಣಿಸಲ್ಪಟ್ಟಿದೆ. ರಾಜಕೀಯ ಒಲವು ಇಲ್ಲದಿರುವುದು ಮುಖ್ಯಕಾರಣ.

ಆರೋಗ್ಯ ಸುಧಾರಣೆಯಾಗದಿರುವುದಕ್ಕೆ ಹಲವಾರು ಕಾರಣಗಳಿವೆ, ಹಿಂದಿನ 68 ವರ್ಷದ ನಂತರವೂ ಲೇಖನದಲ್ಲಿ ಅನ್ನು ಚರ್ಚೆ ಮಾಡಲಾಗಿದೆ. ಕೇವಲ ಅವುಗಳಲ್ಲಿ ಮುಖ್ಯವಾದುದು ಆರೋಗ್ಯ ನೀತಿ, ಔಷಧಿ ನೀತಿ, ಜನಸಂಖ್ಯಾ ನೀತಿ, ಪ್ರಜಾಸತಾತ್ಮಕ ಹಕ್ಕುಗಳನ್ನು ಜನರಿಗೆ ದೊರಕಿಸಿಕೊಡುವುದು, ಮುಂಗಡ ಪತ್ರದಲ್ಲಿ ಕಡಿಮೆ ಹಣಹೂಡಿಕೆ ಇತ್ಯಾದಿ. ಈ ಎಲ್ಲ ವಿಷಯಗಳ ಬಗ್ಗೆ ಗಮನಹರಿಸಿದಲ್ಲಿ ಮಾತ್ರ ಆರೋಗ್ಯ ಸುಧಾರಣೆ ಸಾಧ್ಯ. ಈ ಎಲ್ಲ ವಿಷಯಗಳಿಗೆ ಗಮನಹರಿಸುವ ಸೂತ್ರಗಳನ್ನು ಇಲ್ಲಿ ಚರ್ಚಿಸಲಾಗಿದೆ. ಸರಕಾರಗಳು ಈ ನಿಟ್ಟಿನಲ್ಲಿ ಕಾರ್ಯ ರೂಪಕ್ಕೆ ಇಳಿದರೆ ಮಾತ್ರ ಆರೋಗ್ಯ ಸುಧಾರಣೆ ಸಾಧ್ಯ.

ಭಾರತದಲ್ಲಿ ರಾಜಕೀಯ ಪಕ್ಷಗಳು ಆರೋಗ್ಯದ ಬಗ್ಗೆ ಯಾವ ಕಾಳಜಿಯನ್ನು ಹೊಂದಿಲ್ಲ. ಚುನಾವಣಾ ಪ್ರಣಾಳಿಕೆಯಿಂದ ಸ್ಪಷ್ಟವಾಗುತ್ತದೆ. ಆದ್ದರಿಂದಲೇ ಇಂದು ಭಾರತದಲ್ಲಿ ಜನಾರೋಗ್ಯ ಪರಿಸ್ಥಿತಿ ಚಿಂತಾಜನಕವಾಗಿದೆ.

ಆರೋಗ್ಯ ಕ್ಷೇತ್ರದಲ್ಲಿ ಬದಲಾವಣೆ ತರಲು ಹಲವಾರು ಕ್ರಮಗಳನ್ನು ಕೂಡಲೇ ಜಾರಿಗೆ ತರಬೇಕಾಗುತ್ತದೆ.

1. ಆರೋಗ್ಯ ತೀರ್ಮಾನಿಸುವ ಸಾಮಾಜಿಕ ಅಂಶಗಳು: ಆರೋಗ್ಯ ನಿರ್ಧರಿಸಲು ಆಹಾರ ಪ್ರಮುಖ ಪಾತ್ರ ವಹಿಸುತ್ತದೆ. ಜನರಿಗೆ ಪೌಷ್ಟಿಕ ಆಹಾರ ದೊರಕದಿದ್ದರೆ, ಅಪೌಷ್ಟಿಕತೆಯಿಂದಾಗಿ ಜನರು ಅನಾರೋಗ್ಯಕ್ಕೆ ತುತ್ತಾಗುತ್ತಾ-ರೆ. ಜನರಿಗೆ ಆಹಾರ ಭದ್ರತೆ ಒದಗಿಸಬೇಕು ಹಾಗೂ ಸಾರ್ವತ್ರಿಕ ಆಹಾರ ಭದ್ರತೆಗಾಗಿ ಪಡಿತರ ವ್ಯವಸ್ಥೆಯನ್ನು ಸುಧಾರಿಸಬೇಕು. ಆ ಮೂಲಕ ಜನರಿಗೆ ಕಾಳುಗಳು, ಆಹಾರ ಧಾನ್ಯ ಹಾಗೂ ಎಣ್ಣೆ ಅಗತ್ಯಕ್ಕೆ ಬೇಕಾದಷ್ಟು ದೊರಕಬೇಕು.
   ಮಕ್ಕಳ ಆರೋಗ್ಯ ಸುಧಾರಿಸಲು ಐಸಿಡಿಎಸ್ (ICDS) ವ್ಯವಸ್ಥೆಯನ್ನು ಬಲಪಡಿಸಬೇಕು.
   ಜನರಿಗೆ ಸ್ವಚ್ಛ ಕುಡಿಯುವ ನೀರು ಹಾಗೂ ಶೌಚಾಲಯಗಳ ವ್ಯವಸ್ಥೆ ಕಡ್ಡಾಯವಾಗಿ ಮಾಡಬೇಕು. ಈ ಎಲ್ಲ ಬದಲಾವಣೆಗಳು ರೋಗಬಾರದಂತೆ ತಡೆಗಟ್ಟುತ್ತವೆ ಹಾಗೂ ಆರೋಗ್ಯ ವೃದ್ಧಿಸಲು ಸಹಾಯಕವಾಗುತ್ತವೆ.
2. ಮಹಿಳಾ ಆರೋಗ್ಯ ಸುಧಾರಣೆ: ಮಹಿಳೆ ಹಾಗೂ ಮಕ್ಕಳ ಜನಸಂಖ್ಯೆ ದೇಶದ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಎಂಬುದು ಗೊತ್ತಿದ್ದ ವಿಷಯ. ಆರೋಗ್ಯ ಸುಧಾರಣೆ ಮಾಡುವಾಗ ಈ ವಿಷಯವನ್ನು ಗಮನಹರಿಸಲೇಬೇಕಾಗುವುದು. ಮಹಿಳೆಯ ಆರೋಗ್ಯವೆಂದರೆ ಕೇವಲ ಹೆರಿಗೆಗೆ ಸಂಬಂಧಿಸಿದ ಆರೋಗ್ಯ ವ್ಯವಸ್ಥೆ ಸುಧಾರಿಸಿದರೆ ಸಾಲದು. ಸಮಗ್ರ ಆರೋಗ್ಯ ವ್ಯವಸ್ಥೆ ಎಲ್ಲ ಮಹಿಳೆಯರಿಗೆ ದೊರಕಬೇಕು, ಹಾಗೂ ಅವರ ಎಲ್ಲ ಆರೋಗ್ಯ ಸಮಸ್ಯೆಗಳನ್ನು ಸರಿಪಡಿಸಲು ಸಹಾಯಕವಾಗಬೇಕು. ಮಹಿಳೆಯ ಮೇಲೆ ಒತ್ತಡ ತರುವ ಎಲ್ಲ ನೀತಿಗಳನ್ನು (ಉದಾ: ಗರ್ಭಧಾರಣೆಗೆ ಸಂಬಂಧಿಸಿದ) ತೆ-ಗೆದು ಹಾಕಬೇಕು ಹಾಗೂ ಮಹಿಳೆಯ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಚ್ಯುತಿ ಬರದಂತೆ ಗಮನಹರಿಸಬೇಕು.
3. ಜಾತ್ಯಾಧಾರಿತ ತಾರತಮ್ಯಗಳನ್ನು ಕೂಡಲೇ ಸರಿಪಡಿಸಬೇಕು: ನಮ್ಮ ಸಮಾಜದಲ್ಲಿ ಲಿಂಗಾಧಾರಿತ ತಾರತಮ್ಯಗಳು ಈಗಲೂ ಇವೆ. ಉದಾ: ಮಲ ಹೊರುವ ಪದ್ಧತಿ, ಕೆಳಜಾತಿಗಳಲ್ಲಿ ಈಗಲೂ ಇದೆ. ಮಲ ಹೊರುವ ಪದ್ಧತಿಯನ್ನು ಕೂಡಲೆ ನಿಷೇಧಿಸಬೇಕು. ಕಡೆಗಣಿಸಲ್ಪಟ್ಟ ಜನ ಸಮುದಾಯಕ್ಕೆ ವಿಶೇಷ ಸವಲತ್ತು ನೀಡಿ ಅವರ ಆರೋಗ್ಯ ಸುಧಾರಣೆಗೆ ಪ್ರಯತ್ನ ಮಾಡಬೇಕು. ಜಗತ್ತಿನಾದ್ಯಂತ ಇಂದು ಆರೋಗ್ಯ ಹಕ್ಕಿನ ವಿಷಯವಾಗಿದೆ ಅದನ್ನು ಜಾರಿಗೆ ತರಲು ಆರೋಗ್ಯ ಹಕ್ಕು ಕಾನೂನು ಜಾರಿಗೆ ಬರಬೇಕು. ಆಗ ಎಲ್ಲರಿಗೂ ಪ್ರಾಥಮಿಕ, ದ್ವಿತೀಯ, ತೃತೀಯ ಆರೋಗ್ಯ ಸೇವೆಗಳನ್ನೊಳಗೊಂಡ ಗುಣಮಟ್ಟದ ಸಮಗ್ರ ಆರೋಗ್ಯ ವ್ಯವಸ್ಥೆ ದೊರಕಬೇಕು. ಜನರು ಚಿಕಿತ್ಸಾ ಸೌಲಭ್ಯಗಳು ಹತ್ತಿರದಲ್ಲಿಲ್ಲ, ಕೊಂಡುಕೊಳ್ಳಲು ಸಾಧ್ಯವಿಲ್ಲ, ಗುಣಮಟ್ಟದ್ದಲ್ಲ ಎಂಬ ಕಾರಣಕ್ಕೆ ವಂಚಿತರಾಗಬಾರದು.



4. ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಮುಂಗಡ ಪತ್ರದಲ್ಲಿ ಹೆಚ್ಚಿನ ಹಣ ಮೀಸಲಿಡುವುದು: ಈಗ 2015ರಲ್ಲಿ ಆರೋಗ್ಯ ಮುಂಗಡಪತ್ರದಲ್ಲಿ ಸರಕಾರ ಒಟ್ಟು ಆಂತರಿಕ ಉತ್ಪನ್ನ 1% ಹಣವನ್ನು ಮೀಸಲಿಟ್ಟಿದೆ. ಆದರೆ ಇದು ಕಡಿಮೆ. ಕನಿಷ್ಠ 5% ಹಣವನ್ನು ಆರೋಗ್ಯಕ್ಕೆ ಮೀಸಲಿಡಬೇಕು. ಈ ಕೂಡಲೇ ಅದು ಸಾಧ್ಯವಿಲ್ಲದಿದ್ದರೆ, ಕನಿಷ್ಠ 3.6% ಹಣವನ್ನು ಆರೋಗ್ಯಕ್ಕೆ ಮೀಸಲಿಡಬೇಕು. ಇಲ್ಲದಿದ್ದರೆ ಗುಣಮಟ್ಟದ ಆರೋಗ್ಯ ಸೇವೆಗಳನ್ನು ನೀಡಲು ಸಾಧ್ಯವಾಗುವುದಿಲ್ಲ.
5. ಗುಣಮಟ್ಟದ ಆರೋಗ್ಯ ಸೇವೆಗಳು ಜನರಿಗೆ ದೊರಕಬೇಕು: ಎಲ್ಲ ಹಂತದಲ್ಲಿ (ಉಪಕೇಂದ್ರದಿಂದ ರಾಜ್ಯ ಆಸ್ಪತ್ರೆಗಳವರೆಗೆ) ಜನರಿಗೆ ಎಲ್ಲ ಆರೋಗ್ಯ ಸೇವೆಗಳು ಸರಕಾರವೇ ಕಡ್ಡಾಯವಾಗಿ ಉಚಿತವಾಗಿ ದೊರಕಬೇಕು. ಇದನ್ನು ಖಾಸಗೀ-ಸಾರ್ವಜನಿಕ ಒಡಂಬಡಿಕೆಯ ಆಸ್ಪತ್ರೆಗಳನ್ನು ಪಡೆಯಲು ಸಾಧ್ಯವಿಲ್ಲ. ಉಪಯೋಗ ಶುಲ್ಕ ಇರಕೂಡದು.
6. ಆರೋಗ್ಯ ಸೇವೆಗಳನ್ನು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಖಾಸಗೀಕರಣಗೊಳಿಸುವುದನ್ನು ತಡೆಯಬೇಕು. ಇಂದು ಜಾಗತೀಕರಣ ನೀತಿ ಬಂದಾಗಿನಿಂದ ಖಾಸಗೀಕರಣ ಪ್ರಕ್ರಿಯೆ ಭರದಿಂದ ಸಾಗಿದೆ. ಸಾರ್ವಜನಿಕ ಆರೋಗ್ಯ ಕೇಂದ್ರ / ಆಸ್ಪತ್ರೆಗಳನ್ನು ಖಾಸಗೀಯವರಿಗೆ ನಡೆಸಿಕೊಂಡು ಹೋಗಲು ಕೊಡಲಾಗುತ್ತಿವೆ. ಅವು ಒಳ್ಳೆಯ ಸೇವೆ ನೀಡುತ್ತದೆಂಬ ಭ್ರಮೆಯಲ್ಲಿ ಸರಕಾರ ಮುಂದೆ ಸಾಗುತ್ತಿದೆ. ಅವು ಒಳ್ಳೆಯ ಲಾಭ ಮಾಡುತ್ತ ಮುಂದುವರೆಯಲು ಸಾಧ್ಯ ಎಂಬ ವಿಚಾರವನ್ನು ಸರಕಾರ ಕಡೆಗಣಿಸುತ್ತಿದೆ. ನೇರವಾಗಿ ಖಾಸಗೀ ವ್ಯವಸ್ಥೆಗೆ ನೀಡದಿದ್ದರೂ, ಪರೋಕ್ಷವಾಗಿ ಸರಕಾರಿ ಸೇವೆಗಳನ್ನು ಕಡಿಮೆ ಮಾಡಿದಾಗ ಖಾಸಗೀ ಕೇಂದ್ರಗಳಲ್ಲಿ ದೊರಕುವುದೂ ಜನಾರೋಗ್ಯಕ್ಕೆ ಅಪಾಯಕರವಾಗಬಹುದು.
7. ಅಗತ್ಯವಿದ್ದಷ್ಟು ಆರೋಗ್ಯ ಸಿಬ್ಬಂದಿಗಳನ್ನು ನೇಮಕ ಮಾಡಿ ತರಬೇತಿ ನೀಡುವುದು: ಆರೋಗ್ಯ ಸಿಬ್ಬಂದಿಗಳು ಅಗತ್ಯತೆಯನ್ನು ನಿರ್ದಿಷ್ಟವಾಗಿ ತೀರ್ಮಾನಿಸಿ, ನೇಮಕ ಮಾಡಿ ಅವರಿಗೆ ತರಬೇತಿ ನೀಡಬೇಕು. ನಂತರದಲ್ಲಿ ಕಲಿಕಾ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗಬೇಕು. ಈ ಕೆಲಸದ ಜವಾಬ್ದಾರಿಯನ್ನು MCI ಹಾಗೂ Nursing Council of India ತೆಗೆದುಕೊಳ್ಳುವಂತೆ ನಿಗಾವಹಿಸಬೇಕು. ಈ ಸಂಸ್ಥೆಗಳಲ್ಲಿ ಭ್ರಷ್ಟಾಚಾರ ಇರದಂತೆ ಜವಾಬ್ದಾರಿ ವಹಿಸಬೇಕು. ಖಾಸಗೀ ಸಂಸ್ಥೆಗಳು ತಮಗೆ ಬೇಕಾದಷ್ಟು ಸೀಟುಗಳನ್ನು ಹಂಚಲು ಅವಕಾಶವಿರಬಾರದು ಹಾಗೂ ಆ ಸಂಸ್ಥೆಗಳಿಗೆ ಬದ್ಧತೆ ಇರುವಂತೆ ಜಾಗರೂಕತೆ ವಹಿಸಬೇಕು.
   ನಮ್ಮ ವ್ಯವಸ್ಥೆಯಲ್ಲಿ ಆಶಾ ಹಾಗೂ ಎ.ಎನ್.ಎಂ.ಗಳಿಗೆ ಬಹಳ ಮಹತ್ವವಿದೆ. ಆ ಹುದ್ದೆಗಳನ್ನು ಉಳಿಸಿಕೊಂಡು ಸರಿಯಾಗಿ ಕೆಲಸ ಮಾಡುವಂತೆ ಪ್ರೋತ್ಸಾಹಿಸಬೇಕು. ಮಹಿಳಾ ಸಿಬ್ಬಂದಿಗೆ ರಕ್ಷಣೆ ಬಗ್ಗೆಯೂ ಸರಕಾರ ಜವಾಬ್ದಾರಿ ವಹಿಸಬೇಕು.
8. ಸರಕಾರ ಎಲ್ಲ ಅಗತ್ಯ ಔಷಧಿಗಳು ಹಾಗೂ ಅಗತ್ಯ ಉಪಕರಣಗಳನ್ನು ಉಚಿತವಾಗಿ ಪಡೆದು ಜನರಿಗೆ ಉಚಿತ ಔಷಧಿ, ಪರೀಕ್ಷೆ ಹಾಗೂ ಚಿಕಿತ್ಸೆಗಳನ್ನು ನೀಡಬೇಕು.
9. ಖಾಸಗೀ ಆಸ್ಪತ್ರೆಗಳು ರೋಗಿಗಳಿಗೆ ಮೋಸಮಾಡದ ಕ್ರಮಗಳನ್ನು ಅನುಸರಿಸುವಿಕೆ ರಾಷ್ಟ್ರೀಯ ಚಿಕಿತ್ಸಾ ವ್ಯವಸ್ಥೆಗೆ ಸಂಬಂಧಪಟ್ಟ ಕಾನೂನಿನಲ್ಲಿ ರೋಗಿಗೆ ಸಂಬಂಧಿಸಿದ ಹಕ್ಕುಗಳನ್ನು ಗುರುತಿಸುವ ವ್ಯವಸ್ಥೆ ಇರುತ್ತದೆ. ಅದಲ್ಲದೆ ಬೇರೆ ಬೇರೆ ಸೇವೆಗಳಿಗೆ ಪಡೆಯುವ ದರವನ್ನು ನಿಯಂತ್ರಿಸಲಾಗಿರುತ್ತದೆ, ಆ ಹಣದಲ್ಲಿ ಔಷಧಿ ಬರೆದುಕೊಡಲು, ಪರೀಕ್ಷೆಗಳನ್ನು ಬರೆದುಕೊಡಲು, ಬೇರೆ ತಜ್ಞರಿಗೆ ಬರೆದುಕೊಡಲು ಹೋಗುವ ದಲ್ಲಾಳಿಯನ್ನು ತೆಗೆದುಹಾಕಲಾಗಿರುತ್ತದೆ. ಸರ್ಕಾರಿ ನಿಯೋಜಿತ ರೋಗಿಯ ದೂರು ಕೇಳಿ ಪರಿಹರಿಸುವ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಈ ಎಲ್ಲ ಕ್ರಮಗಳು ಆರೋಗ್ಯವನ್ನು ಸಾಂಸ್ಥೀಕರಣಗೊಳ್ಳುವಿಕೆಯನ್ನು ತಡೆಯಲು ಸಾಧ್ಯವಾಗುತ್ತವೆ.
10. ವಿಮಾ ಯೋಜನೆಯ ಸರಿಯಾದ ಬಳಕೆ: ಈಗಿರುವ ಆರ್.ಎಸ್.ಬಿ.ವಾಯ್ ರಾಜ್ಯದ ವಿಮಾ ಯೋಜನೆಗಳು ಒಂದುಗೂಡಿಸಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಹಣಕಾಸು ನೀಡುವ ವ್ಯವಸ್ಥೆಯನ್ನು ಸರಕಾರ ಮಾಡಬೇಕು. ಈ ವ್ಯವಸ್ಥೆಯಲ್ಲಿ ಎಲ್ಲರಿಗೂ (ಅಸಂಘಟಿತ ಕ್ಷೇತ್ರದವರಿಗು) ವಿಮಾ ಯೋಜನೆ ದೊರಕಬೇಕು ಹಾಗೂ ಅದು ಪ್ರಾಥಮಿಕ, ದ್ವಿತೀಯ ಹಾಗೂ ತೃತೀಯ ಸೇವೆಗಳನ್ನು ಒಳಗೊಳ್ಳಬೇಕು. ಇದೇ ವೇಳೆ ಈ.ಎಸ್.ಐ.ಎಸ್ ಮನಶ್ಚೇತನಗೊಳಿಸುವ ವ್ಯವಸ್ಥೆಯಾಗಬೇಕು.
11. ಇತರೇ ಮೂಲಗಳಿಂದ ಹಣಕಾಸು ಸಹಾಯ ನಿಲ್ಲಸಬೇಕು. ಭಾರತ ಆರೋಗ್ಯ ವ್ಯವಸ್ಥೆ ಮಾಡಲು ನಿಶಕ್ತವಾಗಿದೆ ಹಾಗೂ ಇತ-ರೇ ಮೂಲಗಳಿಂದ ಹಣಕಾಸು ಪಡೆಯುವ (ವಿಶ್ವಬ್ಯಾಂಕ್, ಯು.ಎಸ್.ಏ.ಯಡ್, ಗೇಟ್ಸ್ ಫೌಂಡೇಷನ್, ಡೆಲೋಯಿಟ್ಟೆ, ಮೆರೆನ್ಸ್) ಅಗತ್ಯವಿಲ್ಲ. ಇತರೇ ಮೂಲಗಳಿಂದ ಬರುವ ಹಣಕಾಸಿನ ಸಹಾಯ ಅತಿ ಕಡಿಮೆಯಾಗಿದೆ. ಇತರೇ ಮೂಲಗಳಿಂದ ಹಣಕಾಸು ಪಡೆದಾಗ ಆ ಸಂಸ್ಥೆಗಳು ನಮ್ಮ ಆರೋಗ್ಯ ನೀತಿಯನ್ನೇ ಬದಲಿಸಿರುವುದು ಕಂಡುಬಂದಿದೆ.
12. ಅಗತ್ಯ ಔಷಧಿಗಳು ಹಾಗೂ ಉಪಕರಣಗಳು: ಎಲ್ಲ ಅಗತ್ಯ ಔಷಧಿಗಳು ದೊರಕುವಂತೆ ಮಾಡಬೇಕು. ಆ ಔಷಧಿಗಳ ಬೆಲೆ ಹಾಗೂ ಗುಣಮಟ್ಟದ ಬಗ್ಗೆ ಸರಕಾರ ನಿಗಾವಹಿಸಬೇಕು. ಅನಗತ್ಯ ಹಾಗೂ ಅಪಾಯಕರ ಔಷಧಿಗಳನ್ನು ಕೂಡಲೆ ನಿಷೇಧಿಸಬೇಕು. ಎಲ್ಲಡೆಯೂ ಜನರಿಕ್ ಔಷಧಿ ಮಳಿಗೆಗಳನ್ನು ಸರಕಾರ ಪ್ರಾರಂಭಿಸಬೇಕು. ವೈದ್ಯರು ಜನರಿಕ್ ಔಷಧಿಗಳನ್ನೇ ಬರೆದುಕೊಡಲು ಕಡ್ಡಾಯ ಮಾಡಬೇಕು. ಭಾರತೀಯ ಪೇಟೆಂಟ್ ಕಾಯಿದೆಯಲ್ಲಿ ಅಗತ್ಯ ತಿದ್ದುಪಡಿತಂದು ಸ್ಥಳೀಯವಾಗಿ ಔಷಧಿಗಳು ಹಾಗೂ ಉಪಕರಣಗಳು ತಯಾರಾಗುವಂತೆ ವ್ಯವಸ್ಥೆ ಮಾಡಬೇಕು.
13. ಔಷಧಿ ಪ್ರಯೋಗ ಹಾಗೂ ಜೀವ ವೈದ್ಯಕೀಯ ಸಂಶೋಧನೆಗಳನ್ನು ನಿಯಂತ್ರಿಸುವುದು: ಭಾರತದಲ್ಲಿ ಇತ್ತೀಚೆಗೆ ಔಷಧಿ ಪ್ರಯೋಗಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾಡಲಾಗುತ್ತದೆ. ಈ ಪ್ರಯೋಗಗಳಲ್ಲಿ ಸಾಕಷ್ಟು ಅವ್ಯವಹಾರಗಳಾಗುತ್ತಿವೆ ಈ ಪ್ರಯೋಗಗಳಿಗೆ ಸಂಬಂಧಿಸಿದ, ಪೋಷಕ, ಸಂಸ್ಥೆ (ಸಿ.ಆರ್.ಪಿ) ಹಾಗೂ ನೀತಿ ಸಮಿತಿ (Epics committee) ಗಳ ಮೇಲೆ ನಿಯಂತ್ರಣ ಸಾಧಿಸುವುದು ಅಗತ್ಯ. ಪ್ರಯೋಗಗಳಿಂದ ಅಪಾಯ ಸಂಭವಿಸಿದಲ್ಲಿ ಅವರಿಗೆ ಸೂಕ್ತ ಪರಿಹಾರ ನೀಡುವಂತೆ ಜವಾಬ್ದಾರಿ ವಹಿಸಬೇಕಿದೆ.

ಆರೋಗ್ಯ ವ್ಯವಸ್ಥೆ ಬಗ್ಗೆ ಸರಕಾರ ಎಲ್ಲ ಜವಾಬ್ದಾರಿಯನ್ನು ತೆಗೆದುಕೊಳ್ಳುವುದನ್ನು ಅನೇಕ ದೇಶಗಳಲ್ಲಿ ನೋಡುತ್ತಿದ್ದೇವೆ. ಆದರೆ ಭಾರತದಲ್ಲಿ ಆರೋಗ್ಯ ವ್ಯವಸ್ಥೆ ಕಡೆಗಣಿಸಲ್ಪಟ್ಟಿದೆ. ರಾಜಕೀಯ ಒಲವು ಇಲ್ಲದಿರುವುದು ಮುಖ್ಯಕಾರಣ. ಅದರಲ್ಲೂ ಜಾಗತೀಕರಣದ ನಂತರ, ಕೂಡಲೆ ಸರಕಾರ ಆರೋಗ್ಯ ಕ್ಷೇತ್ರದ ಜವಾಬ್ದಾರಿ ತೆಗೆದುಕೊಳ್ಳಬೇಕು ಹಾಗೂ ಸುಧಾರಿಸಬೇಕು. ಈ ಮೇಲೆ ತಿಳಿಸಿದ ಸೂತ್ರಗಳನ್ನು ಪಾಲಿಸಿದಲ್ಲಿ ಅದು ಸಾಧ್ಯ. ಜನಸಾಮಾನ್ಯರು ಸರಕಾರದ ಮೇಲೆ ಒತ್ತಡ ತರುವುದು ಅಗತ್ಯ.

PÉÃ½ZÀÄÝ

ಮಹಿಳೆಯರ ಬಗ್ಗೆ – ಮೇಲುಜಾತಿ ಮತ್ತು ಪುರುಷ ಪ್ರಧಾನ – ಧೋರಣೆ ಇದು ಆರೆಸ್ಸೆಸ್ ಪ್ರಣೀತ ಬಿಜೆಪಿಯ ರಾಜಕೀಯ ಡಿಎನ್.ಎ. ಇಲ್ಲಿ ಸಮಾನತೆ ವಿಮೋಚನಕಾರಿ ಅಂಶಗಳಿಗೆ ಜಾಗವೇ ಇಲ್ಲ. ಆದರ್ಶ ಹಿಂದೂ ಮಡದಿ ಮತ್ತು ತಾಯಿಯ ಅವರ ಮಾದರಿಗೆ ಹೊರತಾದ ಎಲ್ಲಾ ಮಹಿಳೆಯರು ಅವರ ಪ್ರಕಾರ ಸಾಮಾಜಿಕ ಪ್ರತಿಕ್ರಿಯೆಗೆ ಗುರಿಯಾಗಬೇಕಾದವರು. ಇಂತಹ ಧೋರಣೆಯಿದ್ದ ಇವರಿಗೆ ಸಾರ್ವಜನಿಕ ಜೀವನ ಮತ್ತು ರಾಜಕೀಯದಲ್ಲಿ ಇರುವ ಮಹಿಳೆಯರೆಲ್ಲಾ "ಸರಿಯಿಲ್ಲ' ಅಥವಾ 'ಕೆಟ್ಟ ಹೆಂಗಸರು'.

– ಬೃಂದಾ ಕಾರಟ್
(ಮಾಯಾವತಿಯನ್ನು ಹಳಿದ ಬಿಜೆಪಿ ನಾಯಕನ ಹೇಳಿಕೆ ಟೀಕಿಸುತ್ತಾ)

ಎಲ್‌ಪಿಜಿ ಸಬ್ಸಿಡಿ ಉಳಿತಾಯ: ಮತ್ತೊಂದು ಅಂಕಿ-ಅಂಶಗಳ ಸರ್ಕಸ್ !

'ಒಳ್ಳೆಯ ದಿನ'ಗಳ ಸಮರ್ಥ ಆಳ್ವಿಕೆಯಿಂದಾಗಿ 2014-15 ಮತ್ತು 2015-16ರಲ್ಲಿ ಅಡುಗೆ ಅನಿಲ (ಎಲ್‌ಪಿಜಿ)ಸಬ್ಸಿಡಿಯಲ್ಲಿ 22,000 ಕೋಟಿ ರೂ.ಗಳ ಉಳಿತಾಯವಾಗಿದೆ ಎಂಬುದು ಮೋದಿ ಸರಕಾರ ಡಂಗುರ ಸಾರುವ 'ಸಾಧನೆ'ಗಳಲ್ಲಿ ಒಂದು. ಆದರೆ ದೇಶದ ಮಹಾಲೆಕ್ಕ ಪರಿಶೋಧಕರ (ಸಿಎಜಿ) ವರದಿ ಇದೂ ಒಂದು ಸಂಖ್ಯಾ ಕರಾಮತ್ತು ಎಂದು ತೋರಿಸುತ್ತದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ(ದಿ ಹಿಂದು, ಜುಲೈ 20). ಈ ಸಿಎಜಿ ವರದಿಯನ್ನು ಈ ಮಳೆಗಾಲದ ಅಧಿವೇಶನದಲ್ಲಿ ಸಂಸತ್ತಿನಲ್ಲಿ ಮಂಡಿಸ ಬೇಕಾಗಿದೆಯಂತೆ.


ತನ್ನ ಎರಡು ಕ್ರಮಗಳಿಂದಾಗಿ ಈ ಭಾರೀ ಉಳಿತಾಯ ಆಗಿದೆ ಎಂದು ಸರಕಾರ ಹೇಳಿಕೊಂಡಿದೆ. ಒಂದು, ಸಬ್ಸಿಡಿಗಳ ನೇರ ಬ್ಯಾಂಕ್ ವರ್ಗಾವಣೆ ಮತ್ತು ಎರಡು, ಸಂಪನ್ನ ಬಳಕೆದಾರರು ಸ್ವಯಂ ಪ್ರೇರಣೆಯಿಂದ ಅನಿಲ ಸಬ್ಸಿಡಿಗಳನ್ನು ಬಿಟ್ಟು ಕೊಡುವಂತೆ(#ಗಿವ್‌ಇಟ್‌ಅಪ್ ಅಂದರೆ ಬಿಟ್ಟು-ಕೊಡಿ) ಪ್ರೇರೇಪಿಸುವ ಪ್ರಚಾರಾಂದೋಲನ.

ಈ ಎರಡೂ ಕ್ರಮಗಳಿಂದ ಆಗಿರುವ ಉಳಿತಾಯ 2000 ಕೋಟಿ ರೂ.ಗಳಿಗಿಂತಲೂ ಕಡಿಮೆ. ವಾಸ್ತವವಾಗಿ ಈ ಭಾರೀ ಉಳಿತಾಯ ಆಗಿರುವುದು ಭಾರತ ಆಮದು ಖರ್ಚಿನಲ್ಲಾಗಿರುವ ಭಾರೀ ಕಡಿತದಿಂದಾಗಿ ಎಂಬುದು ಈ ವರದಿಯ ಸಾರಾಂಶ.

ಆಧಾರ್ ಮತ್ತು ಜನಧನ್ ಯೋಜನೆಯನ್ನು ಬಳಸಿ ಅಡುಗೆ ಅನಿಲದ ಮೇಲಿನ ಸಬ್ಸಿಡಿಯನ್ನು ನೇರವಾಗಿ ಬಳಕೆದಾರರ ಬ್ಯಾಂಕ್ ಖಾತೆಗೆ ವರ್ಗಾಯಿಸಿದ್ದರಿಂದ 2014-15ರಲ್ಲಿ 15,000 ಕೋಟಿ ರೂ. ಉಳಿತಾಯವಾಗಿದೆ ಎಂದು ಇತ್ತೀಚೆಗೆ ವಿದ್ಯುತ್ ಸಬ್ಸಿಡಿಗಳನ್ನು ಕುರಿತ ವಿಚಾರ ಸಂಕಿರಣದಲ್ಲಿ ಪೆಟ್ರೋಲಿಯಂ ಮಂತ್ರಿಗಳು ಹೇಳಿದ್ದರು.

'ನೀವು ಅಡುಗೆ ಅನಿಲ ಸಬ್ಸಿಡಿ ಬಿಟ್ಟು ಕೊಟ್ಟರೆ ಹಳ್ಳಿಯಲ್ಲಿ ಒಂದು ಬಡವರ ಮನೆಯಲ್ಲಿ ಅಡುಗೆ ತಯಾರಾಗುತ್ತದೆ' ಎಂದು ಪ್ರಧಾನ ಮಂತ್ರಿಗಳು ಹೇಳುವಂತಹ ಜಾಹೀರಾತುಗಳ ಭರಾಟೆ ಕಳೆದೆರಡು ವರ್ಷಗಳಿಂದ ಸಾಗಿದೆ. ಈ ಪ್ರಚಾರಾಂದೋಲನ ಮತ್ತು ಮೇಲೆ ಹೇಳಿದಂತಹ ನೇರ ಬ್ಯಾಂಕ್ ವರ್ಗಾವಣೆಯಿಂದ ಭಾರತ ಪ್ರತಿವರ್ಷ ಅಡುಗೆ 'ಅನಿಲ ಸಬ್ಸಿಡಿಯ ಹೆಸರಲ್ಲಿ ಕಳವಾಗುತ್ತಿದ್ದ' 15,000 ಕೋಟಿ ರೂ.ಗಳನ್ನು ಉಳಿಸುತ್ತಿದೆ ಎಂದು ಪ್ರಧಾನ ಮಂತ್ರಿಗಳೂ ಆಗಸ್ಟ್ 2015ರಲ್ಲಿ ಕೆಂಪು ಕೋಟೆಯಿಂದ ಸಾರಿದ್ದರು.

ಸರಕಾರದ ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣೆ ಕೋಷ್ಟ(ಪಿಪಿಎಸಿ) ಪ್ರಕಾರ ಭಾರತ ಆಮದು ಮಾಡಿಕೊಳ್ಳುವ ಅಡುಗೆ ಅನಿಲದ ಮೌಲ್ಯ 2014-15ರಲ್ಲಿ 36571 ಕೋಟಿ ರೂ.ಇದ್ದದ್ದು 2015-16ರಲ್ಲಿ 25,626 ಕೋಟಿ ರೂ.ಗೆ ಇಳಿದಿದೆ, ಅಂದರೆ ಒಂದೇ ವರ್ಷದಲ್ಲಿ ಸುಮಾರು 11ಸಾವಿರ ಕೋಟಿ ರೂ.ಗಳ ಉಳಿತಾಯ. ಇದು ಆಮದು ಪ್ರಮಾಣದಲ್ಲಿ ಆಗಿರುವ ಇಳಿಕೆಯಿಂದ ಅಲ್ಲ, (2015-16 ರಲ್ಲಿ 8313 ಸಹಸ್ರ ಮೆಟ್ರಿಕ್‌ಟನ್‌ನಿಂದ 8885ಕ್ಕೆ ಏರಿತ್ತು), ಬದಲಾಗಿ ಅಡುಗೆ ಅನಿಲಕ್ಕೆ ಬೇಕಾಗುವ ಬುಟೇನ್ ಮತ್ತು ಪ್ರೊಪೇನ್ ಬೆಲೆಗಳಲ್ಲಿ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಗಿರುವ ಭಾರೀ ಇಳಿಕೆಯಿಂದಾಗಿ- ಮೇ 2014ರಿಂದ ಜುಲೈ 2016ರ ನಡುವೆ ಬುಟೇನ್ ಬೆಲೆ ಮೆಟ್ರಿಕ್ ಟನ್ನಿಗೆ 825 ಡಾಲರಿನಿಂದ 310ಕ್ಕೆ ಇಳಿದರೆ, ಪ್ರೊಪೇನ್ ಬೆಲೆ 810ರಿಂದ 295 ಡಾಲರಿಗೆ ಇಳಿದಿದೆ. ಇದು ಪಿಪಿಎಸಿ ವಿಶ್ಲೇಷಣೆಯಿಂದ ಕಂಡು ಬರುವ ಸಂಗತಿ. ಅಂದರೆ ಇದರಲ್ಲಿ ಮೋದಿ ಸರಕಾರದ ಉತ್ತಮ ಆಳ್ವಿಕೆಯ ಪಾತ್ರವೇನಾದರೂ ಇದ್ದರೆ ಅದು ಈ ಭಾರೀ ಇಳಿಕೆಯ ಪ್ರಯೋಜನ ಅಡುಗೆ ಅನಿಲ ಬಳಕೆದಾರರಿಗೆ ಹೋಗದೆ ಸರಕಾರದ ಖಜಾನೆಗೆ ಹೋಗುವಂತೆ ಮಾಡಿದ್ದು ಆ ಮೂಲಕ ಅದನ್ನು ಪ್ರಚಾರದ ಸಾಧನವಾಗಿ ಪರಿವರ್ತಿಸಿದ್ದು!



ಎಬಿವಿಪಿ ಮುಖಂಡನ ಮೇಲೆ ಈಗ ಕಾಶ್ಮೀರಿ ವಿದ್ಯಾರ್ಥಿಯ ಮೇಲೆ ಹಲ್ಲೆಯ ಆರೋಪ

ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ದಲಿತ ಸಂಶೋಧನಾ ವಿದ್ಯಾರ್ಥಿಯ ಆತ್ಮಹತ್ಯೆಗೆ ಕಾರಣರಾಗಿದ್ದಾನೆಂಬ ಸಂಘ ಪರಿವಾರದ ವಿದ್ಯಾರ್ಥಿ ಸಂಘಟನೆಯ ಮುಖಂಡನ ಮೇಲೆ ಈಗ ಕಾಶ್ಮೀರಿ ಎಂದು ಬೇರೊಬ್ಬ ವಿದ್ಯಾರ್ಥಿಯ ಮೇಲೆ ಹಲ್ಲೆ ಮಾಡಿರುವ ಕೇಸ್ ದಾಖಲಾಗಿದೆ.

ಜುಲೈ 16ರಂದು ವಿವಿ ಆವರಣದಲ್ಲಿ ಕಾಶ್ಮೀರದಲ್ಲಿ ಯುವ ಪ್ರತಿಭಟನಾಕಾರರ ವಿರುದ್ಧ ಪೋಲಿಸ್ ಕಾರ್ಯಾಚರಣೆಯನ್ನು ವಿರೋಧಿಸುವ ಒಂದು ಸಭೆಯ ನಂತರ ಹಿಂದಿರುಗುತ್ತಿದ್ದ ದಿಲ್ಲಿಯ ಒಬ್ಬ ಎಂಫಿಲ್ ವಿದ್ಯಾರ್ಥಿ ಅಮೋಲ್ ಸಿಂಗ್ ಮೇಲೆ ಅಖಿಲ ಭಾರತೀಯ ವಿದ್ಯಾರ್ಥಿ ಪೋಲಿಸ್ ಎಂದು ಅಪಹಾಸ್ಯಕ್ಕೆ ಒಳಗಾಗಿರುವ ಈ ಸಂಘಟನೆಯ ಈ ಮುಖಂಡನ ನೇತೃತ್ವದಲ್ಲಿ ಸುಮಾರು 30 ಜನ ಹಲ್ಲೆ ಮಾಡಿದರು. ಆತ ಒಬ್ಬ ಕಾಶ್ಮೀರಿ ಎಂದು ಭಾವಿಸಿ ಈ ಹಲ್ಲೆ ನಡೆಯಿತು ಎನ್ನಲಾಗಿದೆ. ಈಗ ಅಮೋಲ್ ಸಿಂಗ್ ದೂರಿನ ಮೇಲೆ ಅವರ ಮೇಲೆ ಕ್ರಿಮನಲ್ ಬೆದರಿಕೆಯ ಕೇಸ್ ಹಾಕಲಾಗಿದೆ. ಯಥಾಪ್ರಕಾರ ಎಬಿವಿಪಿ ಮುಖಂಡನೂ 'ಪ್ರತ್ಯೇಕವಾದಿ'ಘೋಷಣೆಗಳನ್ನು ಹಾಕಿದ್ದನ್ನು ಆಕ್ಷೇಪಿಸಿದ್ದಕ್ಕೆ ದೂರುದಾರನೇ ಹೊಡೆದ ಎಂದು ಪ್ರತಿದೂರು ಕೊಟ್ಟಿದ್ದಾನಂತೆ!

ಪರಿಸರ ಮಂತ್ರಾಲಯದ 'ಮೇಕ್ ಇನ್ ಯುಎಸ್‌ಎ' ಕರಡು

ಮೋದಿ ಸರಕಾರದ ಪರಿಸರ ಮಂತ್ರಾಲಯ ಮೇ 10ರಂದು 'ಪರಿಸರ ಪೂರಕ ಯೋಜನೆ'ಯ ಕರಡನ್ನು ಸಾರ್ವಜನಿಕರ ಪ್ರತಿಕ್ರಿಯೆಗಳಿಗೆಂದು ತನ್ನ ವೆಬ್‌ಸೈಟಿನಲ್ಲಿ ಹಾಕಿದೆ. ಇದನ್ನು ಪರಿಶೀಲಿಸಿದ ಕೆಲವರಿಗೆ ಇದು ಅಮೆರಿಕಾದ ಯೋಜನೆಯೋ ಭಾರತದ್ದೋ ಎಂಬ ಸಂದೇಹ ಉಂಟಾಗಿದೆಯಂತೆ.

ಏಕೆಂದರೆ ಈ ಕರಡಿನ 3850 ಪದಗಳಲ್ಲಿ 2900 ಪದಗಳು ಅಮೆರಿಕಾದ ಪೂರಕ ಪರಿಸರ ಯೋಜನೆ ಧೋರಣೆಯಿಂದ ಅನಾಮತ್ತಾಗಿ ಎತ್ತಿ ಕೊಂಡವುಗಳು ಎಂದು ಇಂಡಿಯನ್ ಎಕ್ಸ್‌ಪ್ರೆಸ್(ಜುಲೈ8) ವರದಿ ಮಾಡಿದೆ.

ಇದು ನಮ್ಮ ಪ್ರಧಾನ ಮಂತ್ರಿಗಳು ಎರಡು ವರ್ಷಗಳಲ್ಲಿ ನಾಲ್ಕು ಬಾರಿ ಅಮೆರಿಕಾ ಭೇಟಿ ನೀಡಿ ಅಧ್ಯಕ್ಷ ಒಬಾಮರೊಂದಿಗೆ ವಿಶೇಷ ಗೆಳೆತನ ಸ್ಥಾಪಿಸಿದ್ದರ ಫಲವೋ ಅಥವ ಭಾರತವನ್ನು ರಕ್ಷಣಾ ವಲಯದಲ್ಲಿ ಅಮೆರಿಕಾದ ಅಡಿಯಾಳು ಮಿತ್ರನಾಗಿ ಮಾಡುತ್ತಿರುವುದರ ಫಲವೋ ಗೊತ್ತಿಲ್ಲವಂತೆ.

ದೊಡ್ಡ ರಾಜ್ಯ ಘಟಕದ ಉಪಾಧ್ಯಕ್ಷನೇ 'ವಾಂಟೆಡ್' ಆಗಿರುವ 'ಒಳ್ಳೆಯ ದಿನ'ಗಳು!

ಈ ವಾರ ಆರೆಸ್ಸೆಸ್-ಬಿಜೆಪಿಯ ದಲಿತರನ್ನು ಕುರಿತಾದ ಬೂಟಾಟಿಕೆ ಒಂದಾದ ಮೇಲೊಂದರಂತೆ ಬಯಲಾದ ವಾರ. ಮುಂಬೈಯಲ್ಲಿ ಡಾ.ಅಂಬೇಡ್ಕರ್ ಕಟ್ಟಿಸಿದ್ದ ಭವನ ಮತ್ತು ಸ್ಥಾಪಿಸಿದ ಮುದ್ರಣಾಲಯವನ್ನು ಕೆಡವಿದ್ದಕ್ಕೆ ಭಾರೀ ಪ್ರತಿಭಟನೆ, ಅವರ ಮಾದರಿ ರಾಜ್ಯ ಗುಜರಾತಿನಲ್ಲಿ ಭುಗಿಲೆದ್ದ ದಲಿತರ ಆಕ್ರೋಶ, ನಂತರ ಇತ್ತೀಚೆಗೆ ಬಿಜೆಪಿ ಉತ್ತರ ಪ್ರದೇಶದಲ್ಲಿ ವಿಧಾನ ಸಭಾ ಚುನಾವಣೆಗಳ ತಯಾರಿಯ ಭಾಗವಾಗಿ ರಾಜ್ಯದ ಉಪಾಧ್ಯಕ್ಷನಾಗಿ ನೇಮಿತರಾದ ದಯಾಶಂಕರ್‌ಸಿಂಗ್ ಬಿಎಸ್‌ಪಿ ಮುಖ್ಯಸ್ಥರಾದ ಮಾಯಾವತಿಯವರ ರಾಜಕೀಯ ನಿರ್ವಹಣೆಯನ್ನು ಟೀಕಿಸುವಾಗ 'ಒಬ್ಬ ಸೂಳೆಗಿಂತಲೂ ಕೆಟ್ಟದಾಗಿ' ಎಂಬ ಪದವನ್ನು ಬಳಸಿದ ಬಗ್ಗೆ ಆಕ್ರೋಶ.

ಯಥಾಪ್ರಕಾರ ಬಿಜೆಪಿ ಆರಂಭದಲ್ಲಿ, ಇದೊಂದು ಸಣ್ಣ ಪ್ರಕರಣ ಎಂದು ಬದಿಗೆ ತಳ್ಳಲು ಪ್ರಯತ್ನಿಸಿತು. ಸಂಸದೀಯ ವ್ಯವಹಾರಗಳ ಮಂತ್ರಿಗಳು ಸದನದ ಮುಖಂಡರು 'ಪರಿಶೀಲಿಸುವ' ಮಾತನ್ನಷ್ಟೇ ಆಡಿದರು. ಆದರೆ ಬಿಹಾರದ ಹೊಡೆತದ ನಂತರ ಉತ್ತರಪ್ರದೇಶವನ್ನು ಪಡೆಯಲು ದೊಡ್ಡ ಯೋಜನೆ ಹಾಕುತ್ತಿರುವಾಗ ನಿರ್ವಾಹವಿಲ್ಲದೆ ಆತನ ವಿರುದ್ಧ ಕನಿಷ್ಟ ಕ್ರಮಗಳನ್ನಾದರೂ ಕೈಗೊಳ್ಳಲೇ ಬೇಕಾಗಿ ಬಂತು. ಆತನನ್ನು ಪಕ್ಷದ ಎಲ್ಲ ಹುದ್ದೆಗಳಿಂದ ತೆಗೆದು ಹಾಕಿ ಆರು ವರ್ಷಗಳ ಕಾಲ ಅಮಾನತುಗೊಳಿಸಿರುವುದಾಗಿ ಪ್ರಕಟಿಸಲಾಗಿದೆ.

ದೇಶದ ಕಾನೂನು ಪ್ರಕಾರ ಆತನನ್ನು ಬಂಧಿಸಬೇಕಾಗಿತ್ತು. ಆದರೆ ದೇಶದ ಒಂದು ದೊಡ್ಡ ರಾಜ್ಯ ಘಟಕದ ಉಪಾಧ್ಯಕ್ಷನಾಗಿದ್ದ ಈ ದೇಶವನ್ನಾಳುವ ಪಕ್ಷದ ಮುಖಂಡ ಈಗ ತಲೆ ಮರೆಸಿಕೊಂಡಿದ್ದಾನಂತೆ!

ಬಿಜೆಪಿ ಮುಖಂಡರು ಪ್ರತಿಪಕ್ಷಗಳು ರಾಜಕೀಯ ಮಾಡುತ್ತಿವೆ ಎಂದು ದೂರುತ್ತಿದ್ದಾರೆ, ನಾವು ಕ್ರಮ ಕೈಗೊಂಡಿದ್ದೇವಲ್ಲ, ಇದರಲ್ಲಿ 'ರಾಜಕೀಯ ತರಬೇಡಿ' ಎಂದು ಹೇಳುತ್ತಿದ್ದಾರೆ.

ಇದೊಂದು ದೊಡ್ಡ ಗೋಸುಂಬೆತನ, ಹೌದು ಇದು ರಾಜಕೀಯವೇ ಎನ್ನುತ್ತಾರೆ ಹಿರಿಯ ಸಿಪಿಐ(ಎಂ) ಮುಖಂಡರಾದ ಬೃಂದಾ ಕಾರಟ್. ಒಬ್ಬ ಮಹಿಳಾ ರಾಜಕಾರಣಿಯ ವಿರುದ್ಧ ಪಿತೃಪ್ರಧಾನ ಮಾನಸಿಕತೆಯ, ಪುರುಷ ಸಂಕುಚಿತವಾದದ, ಸ್ತ್ರೀದ್ವೇಷಿ ಲೈಂಗಿಕ ಟಿಪ್ಪಣಿ ಖಂಡಿತಾ ಒಂದು ನಿರ್ದಿಷ್ಟ ಬ್ರಾಂಡಿನ ರಾಜಕೀಯದ ಭಾಗವೇ ಆಗಿದೆ ಎಂದು ಅವರು ನೆನಪಿಸುತ್ತಾರೆ. ಮೇಲ್ಜಾತಿ, ಪುರುಷಪ್ರಧಾನ ಮೌಲ್ಯಗಳು ಈ ಆಳುವ ಪಕ್ಷದ ಜೀವಾಳ ತಾನೇ. ಮಹಿಳೆಯರು ಗೃಹಿಣಿಯರಾಗಿರಬೇಕು ಎಂಬುದೇ ಇವರ ಗುರುಗಳಾದ ಆರೆಸ್ಸೆಸ್ ಮುಖ್ಯಸ್ಥರ ನಂಬಿಕೆ ತಾನೇ. ಒಬ್ಬ ಆದರ್ಶ ಹಿಂದೂಪತ್ನಿ ಮತ್ತು ತಾಯಿಯ ಅವರ ವಿಚಾರಕ್ಕೆ ಹೊಂದಿಕೆಯಾಗದವರು ಅವರ ಮಟ್ಟಿಗೆ ಸಾಮಾಜಿಕ ಪ್ರತಿಕ್ರಿಯೆಗೆ ಗುರಿಯಾಗಬೇಕು! ರಾಜಕೀಯದಲ್ಲಿ ಅಥವ ಸಾರ್ವಜನಿಕ ಜೀವನದಲ್ಲಿ ಇರುವ ಮಹಿಳೆಯರು ಅವರ ಮಟ್ಟಿಗೆ ಒಳ್ಳೆಯ ಹೆಂಗಸರಂತೂ ಅಲ್ಲ!

ರಾಜಕೀಯ ಕಾರಣಕ್ಕಾಗಿಯಷ್ಟೇ ಉತ್ತರಪ್ರದೇಶದ ಈ ಬಿಜೆಪಿ ಉಪಾಧ್ಯಕ್ಷನನ್ನು ಬಿಟ್ಟುಕೊಡಲಾಗಿದೆ ಎಂಬುದು ಸ್ಪಷ್ಟ. ಆದರೆ ಇದು ಈಗ ದೇಶವನ್ನಾಳುವ ಪಕ್ಷದ ಮಾನಸಿಕತೆಯ ಅಭಿನ್ನ ಭಾಗ ಎಂಬುದು ಹೆಚ್ಚೆಚ್ಚು ಜನರ ಗಮನಕ್ಕೆ ಬರಲಾರಂಭಿಸಿದೆ. ಸ್ವತಃ ಪ್ರಧಾನ ಮಂತ್ರಿಗಳೇ ತಮ್ಮ ಭಾಷಣವೊಂದರಲ್ಲಿ '50-ಕೋಟಿ ಗರ್ಲ್‌ಫ್ರೇಂಡ್' ಬಗ್ಗೆ ಹೇಳಿದರಲ್ಲವೇ? ಅವರು ಅದಕ್ಕೆ ಕ್ಷಮೆ ಕೇಳಲಿಲ್ಲ, ಹಾಗೆ ಕೇಳಬೇಕೆಂದು ಅವರ ಪಕ್ಷವೂ ಬಯಸಲಿಲ್ಲ ಎಂದು ಬೃಂದಾ ಕಾರಟ್ ನೆನಪಿಸುತ್ತಾರೆ. 56ಇಂಚಿನ ಎದೆಯ ಬಗ್ಗೆ ಹೇಳಿಕೊಳ್ಳುವುದು ಇದೇ ಮಾನಸಿಕತೆಯ ಭಾಗವಲ್ಲವೇ?

ಮಾಯಾವತಿಯವರು ನಾಲ್ಕು ಬಾರಿ ಉತ್ತರಪ್ರದೇಶದ ಮುಖ್ಯಮಂತ್ರಿಯಾಗಿದ್ದವರು, ಹಲವು ಬಾರಿ ಲೋಕಸಭೆಗೆ ಚುನಾಯಿತರಾಗಿದ್ದಾರೆ. ಅವರ ಬಗ್ಗೆಯೇ ಈ ರೀತಿಯ ಹೊಲಸು ಟಿಪ್ಪಣಿ ಮಾಡಬಹುದಾದಂತಹ ಮಾನಸಿಕತೆ ಈ ದೇಶದ ಆಳುವ ಪಕ್ಷದ ಮುಖಂಡರಲ್ಲಿದೆಯೆಂದಾದರೆ, ಪಂಚಾಯತುಗಳಲ್ಲಿ ಚುನಾಯಿತ ದಲಿತ, ಆದಿವಾಸಿ ಮಹಿಳೆಯರ ಪಾಡೇನು -ಇದು ಸಹಜವಾಗಿ ಏಳುವ ಪ್ರಶ್ನೆ. ಅವರು ಜಾತಿವಾದಿ ಮತ್ತು ಲೈಂಗಿಕ ಎರಡೂ ರೀತಿಗಳ ಬೈಗುಳನ್ನು ಕೇಳಬೇಕಾದಂತಹ ಪರಿಸ್ಥಿತಿಯಿದೆ ಎನ್ನುತ್ತಾರೆ ಬೃಂದಾ ಕಾರಟ್.

ರಾಜ್ಯಸಭೆಯಲ್ಲಿ ಈ ವಿಷಯದ ಚರ್ಚೆಯಲ್ಲಿ ಮಾತಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಯವರು ಕೂಡ ಇದು ಬಿಜೆಪಿಯ ಆಂತರಿಕ ಮಾನಸಿಕತೆಯನ್ನು ಪ್ರದರ್ಶಿಸಿದೆ ಎಂದಿದ್ದಾರೆ. ಕಳೆದೆರಡು ವರ್ಷಗಳಲ್ಲಿ ಗಟ್ಟಿಗೊಂಡಿರುವ ಕಂದಾಚಾರದ ವಾತಾವರಣದ ಪ್ರತಿಫಲನ ಇದು ಎಂದು ರಾಜಕೀಯ ವೀಕ್ಷಕರು ವಿಶ್ಲೇಷಿಸುತ್ತಿದ್ದಾರೆ.

ಬಿಜೆಪಿಯ 'ಸ್ಟಾರ್' ಗಳಿಕೆಗಳಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟಿದ್ದ , ಇತ್ತೀಚೆಗೆ ರಾಜ್ಯಸಭೆಗೂ ಆಪಕ್ಷದಿಂದ ನೇಮಕಗೊಂಡಿದ್ದ ಮಾಜಿ ಕ್ರಿಕೆಟಿಗ ನವ್‌ಜೋತ್‌ಸಿಂಗ್ ಸಿದ್ದು ರಾಜೀನಾಮೆ . ಪಂಜಾಬಿನಲ್ಲಿ ಆಪ್ ಪಕ್ಷದ ಪ್ರಮುಖ ಮುಖಂಡನಾಗುವ ನಿರೀಕ್ಷೆ. -ಸುದ್ದಿ




ವ್ಯಂಗ್ಯಚಿತ್ರ: ಮಂಜುಲ್, ಡಿಎನ್‌ಎ

ರಾಜ್ಯಪಾಲರ ಮೂಲಕ ದುಸ್ಸಾಹಸ ನಿಲ್ಲಿಸಿ

ಅಂತರ-ರಾಜ್ಯ ಮಂಡಲಿಯಲ್ಲಿ ಬಿಜೆಪಿಯೇತರ ಮುಖ್ಯಮಂತ್ರಿಗಳ ಆಗ್ರಹ

ಕಳೆದ ವಾರ 'ಒಳ್ಳೆಯ ದಿನ'ಗಳಲ್ಲಿ ಮೊದಲ ಬಾರಿಗೆ ಅಂತರ-ರಾಜ್ಯ ಮಂಡಳಿ ಸಭೆ ನಡೆಯಿತು. ಇದರಲ್ಲಿ ಪ್ರಧಾನಿಗಳು ಇತ್ತೀಚೆಗೆ ಉತ್ತರಾಖಂಡ ಮತ್ತು ಅರುಣಾಚಲ ಪ್ರದೇಶದಲ್ಲಿ ಕಲಮು 356ರ ದುರುಪಯೋಗ ಮಾಡಿ ಕೈಸುಟ್ಟುಕೊಂಡ ಹಿನ್ನೆಲೆಯಲ್ಲಿ ತಮ್ಮ 'ಸಹಕಾರಿ ಒಕ್ಕೂಟ ತತ್ವ'ದ ರಾಗಕ್ಕೆ ತೀವ್ರ ಆಕ್ರೋಶವನ್ನು ಎದುರಿಸಬೇಕಾಯಿತು ಎಂದು ವರದಿಯಾಗಿದೆ. ಬಿಹಾರದ ಮುಖ್ಯಮಂತ್ರಿಗಳು ರಾಜ್ಯಪಾಲರ ಹುದ್ದೆಯನ್ನೇ ರದ್ದು ಮಾಡಿ ಎಂದು ಹೇಳಿದರೆ, ಬಿಜೆಪಿಯೊಂದಿಗೆ ಸರಕಾರ ನಡೆಸುತ್ತಿರುವ ಪಂಜಾಬ್ ಮುಖ್ಯಮಂತ್ರಿ ರಾಜ್ಯಗಳನ್ನು 'ಕೇವಲ ಭಿಕ್ಷಕುರ 'ಮಟ್ಟಕ್ಕೆ ಇಳಿಸಲಾಗಿದೆ ಎಂದು ಟಿಪ್ಪಣಿ ಮಾಡಿದರಂತೆ.

ಅರುಣಾಚಲ ಪ್ರದೇಶದ ರಾಜ್ಯಪಾಲರ ಕ್ರಮವನ್ನು ರದ್ದು ಮಾಡಿ ಸುಪ್ರಿಂ ಕೋರ್ಟ್ ತೀರ್ಪು. ಉತ್ತರಾಕಂಡದ ನಂತರ ಅರುಣಾಚಲ ಪ್ರದೇಶದಲ್ಲೂ ಮತ್ತೆ ಕಾಂಗ್ರೆಸ್‌ಮುಖ್ಯಮಂತ್ರಿಗಳ ಅಧಿಕಾರ ಸ್ವೀಕಾರ-ಸುದ್ದಿ



ವ್ಯಂಗ್ಯಚಿತ್ರ: ಕೀರ್ತಿಶ್, ಬಾಮುಲಾಹಿಜಾ. ಕಾಂ

'ಗುಜರಾತ ಮಾದರಿ' ಅಂದರೆ 'ಮೋದಾಣಿ ಮಾದರಿ'

ಶ್ರಮದ, ನೈಸರ್ಗಿಕ ಸಂಪನ್ಮೂಲಗಳ ಶೋಷಣೆಯ ಮೇಲೆ ನಿಂತಿರುವ ಮಾದರಿ



ಎರಡು ವರ್ಷಗಳ ಹಿಂದೆ ಟಾಂ ಟಾಂ ಮಾಡಿದ 'ಗುಜರಾತ ಅಭಿವೃದ್ಧಿ ಮಾದರಿ 'ವಾಸ್ತವವಾಗಿ ಇನ್ನೊಂದು ವಿದೇಶೀ ಮಾದರಿ, ಐಎಂಎಫದದ–ವಿಶ್ವಬ್ಯಾಂಕ್ ಧೋರಣೆಗಳ ಮೇಲೆ ನಿಂತಿರುವ ಮಾದರಿ, ಅಂದರೆ ಅಗ್ಗದ ಶ್ರಮಶಕ್ತಿ ಮತ್ತು ನೈಸರ್ಗಿಕ ಸಂಪನಮೂಲಗಳ ಕಾರ್ಪೊರೇಟ್ ಕೂಟಿಯ ಮೇಲೆ ನಿಂತಿರುವ ಮಾದರೆ– ಇದು ಕಳೆದ ವಾರ ಅದೇ ಗುಜರಾತಿನ ಪ್ರಖ್ಯಾತ ಸಾಬರಮತಿ ಆಶ್ರಮದಲ್ಲಿರುವ ಗುಜರಾತ ವಿದ್ಯಾಪೀಠದಲ್ಲಿ ನಡೆದ ಒಂದು ವಿಚಾರ ಸಂಕಿರಣದಲ್ಲಿ ಮೂಡಿಬಂದ ಒಮ್ಮತಾಭಿಪ್ರಾಯ.

ಮೋದಿ ಸರಕಾರದ ರೈತ–ವಿರೋಧಿ, ದೇಶ–ವಿರೋಧಿ ಭೂಸ್ವಾಧೀನ ತಿದ್ದುಪಡಿ ಮಸೂದೆಯ ವಿರುದ್ಧ ಯಶಸ್ವಿ ಹೋರಾಟದಲ್ಲಿ ಮೂಡಿ ಬಂದ 'ಭೂಮಿ ಅಧಿಕಾರ ಆಂದೋಲನ' ದ ಮೂರು ದಿನಗಳ ರಾಷ್ಟ್ರೀಯ ಸಮಾವೇಶದಲ್ಲಿ ಒಂದು ವಿಶೇಷ ಅಧಿವೇಶನವಾಗಿ ಈ ವಿಚಾರ ಸಂಕಿರಣ ನಡೆಯಿತು.

ಇದರಲ್ಲಿ ಗುಜರಾತದಲ್ಲಿ ಕಳೆದ 17 ವರ್ಷಗಳಿಂದ ಜಾರಿಯಾಗುತ್ತಿರುವ ಅಭಿವೃದ್ಧಿ ಧೋರಣೆಗಳ ಕರಾಳ ಮುಖಗಳನ್ನು ಉಪನ್ಯಾಸಕಾರರು ಬಯಲಿಗೆಳೆದರು. ಇವುರೈತರ, ಕಾರ್ಮಿಕರ, ಆದಿವಾಸಿಗಳ ಮತ್ತು ದಲಿತರ ಹಕ್ಕುಗಳ ಮೇಲೆ ದಾಳಿಗಳನ್ನು ನಡೆಸುತ್ತಿರುವ ಧೋರಣೆಗಳು. ಆದ್ದರಿಂದಲೇ ಇದನ್ನು ಜನ 'ಮೋದಾಣಿ ಮಾದರಿ' ಎಂದು ಗೇಲಿ ಮಾಡುತ್ತಿದ್ದಾರೆ. ಮೋದಿ ಮತ್ತು ಅದಾಣಿ ಕೂಟದ ನೇತೃತ್ವದಲ್ಲಿ ಕಾರ್ಪೊರೇಟ್ ಶಕ್ತಿಗಳು ಗುಜರಾತಿನ ವಿಶಾಲ ಭೂಪ್ರದೇಶಗಳ ಮೇಲ ಕಬ್ಜಾ ನಡೆಸಿ ಲೂಟಿ ಮಾಡಿವೆ ಎಂಬುದನ್ನು ಅಂಕಿ–ಅಂಶಗಳ ಮೂಲಕ ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಉಪನ್ಯಾಸಕಾರರು ಬಯಲಿಗೆಳೆದರು.

ಗುಜರಾತ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ(ಎಸ್‌ಜಿಡಿಪಿ)ಯ 78% ಉದ್ಯಮಗಳು ಮತ್ತು ವಿದ್ಯುತ್ತಿನ ಮೇಲೆ ಖರ್ಚಾಗುತ್ತಿದೆ. ಶಿಕ್ಷಣ ಮತ್ತು ಆರೋಗ್ಯಕ್ಕೆ ಮಾಡುತ್ತಿರುವ ಖರ್ಚು 2%ಕ್ಕಿಂತಲೂ ಕಡಿಮೆ. ಪರಿಣಾಮವೆಂದರೆ ಉದ್ಯಮಗಳಿಗೆ ಕೇವಲ 1000ಲೀಟರಿಗೆ 10ರೂ. ದರದಲ್ಲಿ ಕೊಡುಗೆಯಂತೆ ನೀಡಲಾಗುತ್ತಿದೆ, ಆದರೆ ಬಡ ಗುಜರಾತಿಗಳಿಗೆ ಸುರಕ್ಷಿತ ಕುಡಿಯುವ ನೀರೂ ಸಿಗುತ್ತಿಲ್ಲ.

ಜನಗಳ ಶಿಕ್ಷಣ, ಆರೋಗ್ಯವನ್ನು ಮರೆತ ಮಾದರಿ

ಪ್ರೊ. ರೋಹಿತ್ ಶುಕ್ಲ, ಪ್ರಖ್ಯಾತ ಅರ್ಥಶಾಸ್ತ್ರಜ್ಞರು ಮಾತಾಡುತ್ತ ಗುಜರಾತಿನ ಜಿಡಿಪಿ ಬೆಳವಣಿಗೆ ದರ ಬಿಹಾರದ ಅರ್ಧದಷ್ಟು ಎಂದರು. ಶಿಕ್ಷಣಕ್ಕೆ ಮಾಡುವ ಖರ್ಚು ಜಿಡಿಪಿಯ 1.78%, ಆರೋಗ್ಯಕ್ಕೆ 0.42% ಮತ್ತು ಪೌಷ್ಟಿಕ ಆಹಾರಕ್ಕೆ 2.28%.

ಆದ್ದರಿಂದಲೇ 15–17 ವರ್ಷವಯೋಗುಂಪಿನ ಹೆಣ್ಣು ಮಕ್ಕಳಲ್ಲಿ 74% ಮಾತ್ರ ಶಾಲೆಗೆ ಹೋಗುತ್ತಿದ್ದಾರೆ. ಪಕ್ಕದ ಮಹಾರಾಷ್ಟ್ರ ಮತ್ತು ಹರಿಯಾಣದಲ್ಲಿ ಇದು 90% ದಾಟಿದೆ. ರಾಷ್ಟ್ರೀಯ ಸರಾಸರಿ 83.8%.

ಒಂದು ಸರ್ವೆಯ ಪ್ರಕಾರ ಹೆಣ್ಣು ಮಕ್ಕಳ ಶಿಕ್ಷಣದಲ್ಲಿ 21 ರಾಜ್ಯಗಳಲ್ಲಿ ಗುಜರಾತಿನದ್ದು 20ನೇ ಸ್ಥಾನ .ಕೇವಲ 7.3% ಹೆಣ್ಣು ಮಕ್ಕಳು ಡಿಗ್ರಿ ಶಿಕ್ಷಣ ಪಡೆದಿದ್ದಾರೆ.

0–6 ವಯೋಗುಂಪಿನ ಮಕ್ಕಳಲ್ಲಿ ಒಟ್ಟು 47% ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ.

ಅಘೋಷಿತ ತುರ್ತು ಪರಿಸ್ಥಿತಿಯ ಮಾದರಿ

ಪರಿಸರತಜ್ಞ ರೋಹಿತ್ ಪ್ರಜಾಪತಿಯವರು ಮಾತಾಡುತ್ತ ಗುಜರಾತ್ ಮಾದರಿಯೆಂದರೆ ಸಿಎಂಒ ಅಂದರೆ ಮುಖ್ಯಮಂತ್ರಿಗಳ ಕಚೇರಿ(ಈಗ ಪಿಎಂಒ.?) ಯೇ ಎಲ್ಲವನ್ನೂ ನಿರ್ಧರಿಸುವ ಮಾದರಿ. ಇತರ ಮಂತ್ರಿಗಳೂ ತಮ್ಮ ಇಲಾಖೆಗೆ ಸಂಬಧಪಟ್ಟ ನಿರ್ಧಾರಗಳನ್ನು ವಿವರಿಸುವ ಸ್ತಿತಿಯಲ್ಲಿಲ್ಲ. ಇನ್ನು ಜನಸಾಮಾನ್ಯರ ಹಕ್ಕುಗಳಿಗೆಲ್ಲಿ ಜಾಗ?

ಗುಜರಾತ್ ಮಾದರಿಯಲ್ಲಿ ಯಾವುದೇ ಘೋಷಣೆಯಿಲ್ಲದೆ ತುರ್ತು ಪರಿಸ್ಥಿತಿಯನ್ನು ಜಾರಿ ಮಾಡಲಾಗುತ್ತಿದೆ ಎಂದು ರೋಹಿತ್ ಹೇಳಿದರು. ಪ್ರತಿಭಟನೆ ಅಥವ ಸಭೆಗಳಿಗೆ ಅನುಮತಿಯಿಲ್ಲ. ದೊಡ್ಡ ಕಂಪನಿಗಳಲ್ಲಿ ಕಾರ್ಮಿಕರ ಸಂಖ್ಯೆಯಲ್ಲಿ ಭಾರೀ ಕಡಿತ ತರಲಾಗಿದೆ. ಬಹುಪಾಲು ಕಾರ್ಮಿಕರಿಗೆ ಕನಿಷ್ಟ ವೇತನವಿಲ್ಲ, ಇಎಸ್‌ಐ, ಪಿಎಫ್ ಸೌಲಭ್ಯಗಳಿಲ್ಲ.

ಕಾರ್ಮಿಕ ವರ್ಗದ ಆರ್ಥಿಕ ಹಕ್ಕುಗಳ ಕಡಿತ ಕಾರ್ಪೊರೇಟ್‌ಗಳ ಅಗಾಧ ಲಾಭಗಳ ಭಾಗವಾಗಿರುವುದು ಈ ಮಾದರಿಯ ಇನ್ನೊಂದು ಪ್ರಮುಖ ಲಕ್ಷಣ. ಪರಿಸರ ಮಾಲಿನ್ಯ ಕೂಡ ಇದೇ ಅಗಾಧ ಕಾರ್ಪೊರೇಟ್ ಲಾಭಗಳ ಬಾಗ ಎನ್ನುತ್ತಾರೆ ಈ ಪರಿಸರ ತಜ್ಞ, ಪರಿಣಾಮವೆಂದರೆ ರಾಜ್ಯದ ನದಿಗಳು ಮತ್ತು ಮಣ್ಣೆಲ್ಲ ದೂಷಿತಗೊಂಡಿದೆ, ಅದು ತರಕಾರಿ ಮತ್ತು ಹಾಲಿನ ಉತ್ಪಾದನೆಯನ್ನು ತಟ್ಟುತ್ತಿದೆ ಎಂದು ಅವರು ಹೇಳಿದರು.

ಅಗ್ಗದ ಶ್ರಮ ಮತ್ತು ಸಂಪನ್ಮೂಲಗಳ ಲಭ್ಯತೆಯೇ ಮುಖ್ಯ ಆಕರ್ಷಣೆ

ಯಾವುದೇ ಅಭಿವೃದ್ಧಿ ಮಾದರಿ ಒಂದು ರಾಜ್ಯ ಅಥವ ಪ್ರದೇಶಕ್ಕೆ ನಿರ್ದಿಷ್ಟವಾಗಿರುವುದಿಲ್ಲ, ಬದಲಿಗೆ ಅದು ರಾಜಕೀಯ ಧೋರಣೆಗಳಿಂದ ಪ್ರೇರಿತವಾಗಿರುತ್ತದೆ ಎಂದ ಪ್ರಖ್ಯಾತ ಸಮಾಜ ಶಾಸ್ತ್ರಜ್ಞ ಪ್ರೊ. ಘನಶ್ಯಾಮ ಶಹಾ, ಗುಜರಾತ ಮಾದರಿಯ ಆಕರ್ಷಣೆಯೆಂದರೆ ಅಗ್ಗದಲ್ಲಿ ಶ್ರಮಶಕ್ತಿಯ ಲಭ್ಯತೆ ಮತ್ತು ನಾಮಮಾತ್ರದ ಬೆಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಭೂಮಿಯ ಲಭ್ಯತೆ ಎಂದು ವಿಶ್ಲೇಷಿಸಿದರು. ಇದರಿಂದಾಗಿಯೇ ಕಾರ್ಪೊರೇಟ್ ಕುಳಗಳು ಇಲ್ಲಿ ಹೂಡಿಕೆ ಮಾಡಿ ಅಪಾರ ಲಾಭಗಳನ್ನು ಗಿಟ್ಟಿಸಿದ್ದಾರೆ. ವಾಸ್ತವವಾಗಿ ಗುಜರಾತ ಮಾದರಿಯನ್ನು ಐಎಂಎಫ್–ವಿಶ್ವಬ್ಯಾಂಕ್ ಧೋರಣೆಗಳ ಆಧಾರದಲ್ಲೇ ರೂಪಿಸಲಾಗಿದೆ ಎಂದು ಅವರು ಹೇಳಿದರು.

ಈ ಧೋರಣೆಗಳು ಆದಿವಾಸಿಗಳ ನಿರ್ದಿಷ್ಟ ಹಕ್ಕುಗಳನ್ನು ಮೊಟಕುಗೊಳಿಸಿವೆ. ಈಗ ಗುಜರಾತದಲ್ಲಿ ಆದಿವಾಸಿಗಳ ಜಮೀನನ್ನು ಇತರರು ಖರೀದಿಸಲು ಅವಕಾಶ ಕಲ್ಪಿಸಲಾಗಿದೆ. ಗ್ರಾಮಿಣ ಆರ್ಥಿಕ ಕಾರ್ಪೊರೇಟ್‌ಗಳ ರಾಕ್ಷಸೀ ಶೋಷಣ ಎಮತ್ತು ನಿರ್ಲಕ್ಷ್ಯದಿಂದ ಜರ್ಝರಿತಗೊಂಡಿವೆ ಎಂದು ಶಹಾ ಆತಂಕ ವ್ಯಕ್ತಪಡಿಸಿದರು.

'ಗಣಿಗಳು, ಖನಿಜಗಳ ಮತ್ತು ಜನತೆ ವೇದಿಕೆ'ಯ ಕಾರ್ಯಕರ್ತ ಅಸೋಕ ಶ್ರೀಮಾಲಿ ಈ ವಿಶೇಷ ಅಧಿವೇಶನವನ್ನು ಸಂಯೋಜಿಸಿದ್ದರು. ಕಿಸಾನ್ ಸಂಘರ್ಷ ಸಮಿತಿ ಮುಖಂಡ ಡಾ.ಸುನಿಲಂ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರೀಯ ಸಮಾವೇಶ ಗುಜರಾತ್ ಮಾದರಿಯನ್ನು ಖಂಡಿಸುವ ಒಂದು ನಿರ್ಣಯವನ್ನು ಅಂಗೀಕರಿಸಿ ಗುಜರಾತಿನ ರೈತರು, ಜನತೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಮೇಲಿನ ದಾಳಿಗಳನ್ನು ನಿಲ್ಲಿಸುವಂತೆ ಗುಜರಾತ್ ಸರಕಾರವನ್ನು ಆಗ್ರಹಿಸಿತು.

ಬಲವಂತದ ಕೃಷಿ ಭೂಮಿ ಸ್ವಾಧೀನಕ್ಕೆ ದೇಶವ್ಯಾಪಿ ಪ್ರತಿರೋಧ 'ಭೂಮಿ ಅಧಿಕಾರ ಆಂದೋಲನ' ಮುಖಂಡರ ನಿರ್ಧಾರ

*** ಆಗಸ್ಟ್ 10ರಂದು 'ಪಾರ್ಲಿಮೆಂಟ್ ಚಲೋ'– ರಾಷ್ಟ್ರಪತಿಗಳನ್ನು ಭೇಟಿ ಮಾಡಿ ಕುಖ್ಯಾತ ಭೂಸ್ವಾಧೀನ ಮಸೂದೆಯನ್ನು ಸಂಸತ್ತಿನಿಂದ ಹಿಂದಕ್ಕೆ ಪಡೆಯುವಂತೆ ಅವರಿಗೆ ವಿನಂತಿ**

*** ಸಪ್ಟಂಬರ್2 ರ ಕಾರ್ಮಿಕರ ಸಾರ್ವತ್ರಿಕ ಮುಷ್ಕರಕಕೆ ಬೆಂಬಲ–ಅದೇ ದಿನ ಕರ್ಷಕ ಮುಷ್ಕರ ಸಂಘಟಿಸಲು ರೈತಾಪಿಗಳಿಗೆ ಕರೆ**

*** ಡಿಸೆಂಬರ್ 15: ಅರಣ್ಯ ಹಕ್ಕುಗಳ ದಿನಾಚರಣೆ**

ಅಹಮದಾಬಾದಿನ ಗುಜರಾತ ವಿದ್ಯಾಪೀಠ, ಸಾಬರಮತಿ, ಇಲ್ಲಿ ನಡೆದ 'ಭೂಮಿ ಅಧಿಕಾರ ಆಂದೋಲನ'ದ ಮುಖಂಡರ ಮೂರು ದಿನಗಳ ಅಖಿಲ ಭಾರತ ಸಮಾವೇಶ ರಾಜ್ಯ ಸರಕಾರಗಳು ಕೃಷಿ ಭೂಮಿಯನ್ನು ಬಲವಂತದಿಂದ ಸ್ವಾಧೀನ ಪಡಿಸಿಕೊಳ್ಳುತ್ತಿರುವದಕ್ಕೆ ಪ್ರತಿರೋಧ'ವನ್ನು ಬಲಪಡಿಸಲು ನಿರ್ಧರಿಸಿದೆ.

ಗುಜರಾತ, ರಾಜಸ್ತಾನ, ಒಡಿಶ, ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಸರಕಾರಗಳು 2013ರ ಭೂಸ್ವಾಧೀನ ಕಾಯ್ದೆಯನ್ನು ಬುಡಮೇಲು ಮಾಡುವ ಕರಾಳ ಶಾಸನಗಳನ್ನು ತರುತ್ತಿವೆ. ರೈತರು, ಕೃಷಿಕೂಲಿಕಾರರು ಮತ್ತು ಸಾಮಾಜಿಕ ಸಂಘಟನೆಗಳ ಐಕ್ಯ ವೇದಿಕೆಯಾದ 'ಭೂಮಿ ಅಧಿಕಾರ ಆಂದೋಲನ'ದ ಸಂಘಟನೆಯನ್ನು ರಾಜ್ಯ ಮಟ್ಟಕ್ಕೆ ವಿಸ್ತರಿಸಿ ಈ ಬಲವಂತದ ಭೂಸ್ವಾಧೀನ, ಆಮೂಲಕ ಬೇಸಾಯಗಾರರನ್ನು ಹೊರತಳ್ಳುವ ಪ್ರಯತ್ನಗಳ ವಿರುದ್ಧ ಪ್ರತಿರೋಧವನ್ನು ತೀವ್ರಗೊಳಿಸಲು ಸಮಾವೇಶ ನಿರ್ಧರಿಸಿದೆ.

ಇದರ ಭಾಗವಾಗಿ ಈ ವೇದಿಕೆಯ ರಾಜ್ಯ ಮುಖಂಡರುಗಳು ಆಗಸ್ಟ್ 10ರಂದು 'ಪಾರ್ಲಿಮೆಂಟ್ ಚಲೋ'ದಲ್ಲಿ ಭಾಗವಹಿಸಲಿದ್ದಾರೆ ಮತ್ತು ರಾಷ್ಟ್ರಪತಿಗಳನ್ನು ಭೇಟಿ ಮಾಡಿ ಕುಖ್ಯಾತ ಭೂಸ್ವಾಧೀನ ಮಸೂದೆಯನ್ನು ಸಂಸತ್ತಿನಿಂದ ಹಿಂದಕ್ಕೆ ಪಡೆಯುವಂತೆ ಅವರನ್ನು ವಿನಂತಿಸಿಕೊಳ್ಳುತ್ತಾರೆ ಎಂದು ಸಮಾವೇಶದ ಕೊನೆಯಲ್ಲಿ ನೀಡಿದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಕೃಷಿಯಲ್ಲಿ 100% ಎಫ್‌ಡಿಐ, ದೇಶಾದ್ಯಂತ ಕೃಷಿ ಮಾರುಕಟ್ಟೆಯನ್ನು ಸಮಗ್ರೀಕರಿಸಿ ರೈತರ ಕಾರ್ಪೊರೇಟ್ ಲೂಟಿಗೆ ಅನುಕೂಲ ಮಾಡಿಕೊಡುವ ಇ–ಪ್ಲಾಟ್‌ಫಾರ್ಮ್‌ನ್ನು ಹಿಂತೆಗೆದುಕೊಳ್ಳಬೇಕು ಎಂದು ಸಮಾವೇಶ ಮೋದಿ ಸರಕಾರವನ್ನು ಆಗ್ರಹಿಸಿದೆ. ಕಳೆದ 25 ವರ್ಷಗಳಲ್ಲಿ ನವ–ಉದಾರವಾದಿ ಸುಧಾರಣೆಗಳ ಅನುಷ್ಠಾನ ಕರ್ಷಕ ಬಿಕ್ಕಟ್ಟನ್ನು ತೀವ್ರಗೊಳಿಸಿದೆ ಎಂಬ ತೀರ್ಮಾನಕ್ಕೆ ಬಂದಿರುವ ಸಮಾವೇಶ ಸಂಸತ್ತು ಸಮಾಜದ ವಿವಿಧ ವಿಭಾಗಗಳ ಮೇಲೆ ಈ ಸುಧಾರಣೆಗಳ ಪರಿಣಾಮವನ್ನು ಪರಾಮರ್ಶಿಸಬೇಕು ಎಂದು ಕರೆ ನೀಡಿದೆ.

ಸಮಾವೇಶ ಸಪ್ಟಂಬರ್2 ರ ಕಾರ್ಮಿಕರ ಸಾರ್ವತ್ರಿಕ ಮುಷ್ಕರವನ್ನು ಬೆಂಬಲಿಸಲು ನಿರ್ಧರಿಸಿ ಅದೇ ದಿನ ಕರ್ಷಕ ಮುಷ್ಕರ ಸಂಘಟಿಸಬೇಕು ಎಂದು ರೈತಾಪಿ ಜನಗಳಿಗೆ ಕರೆ ನೀಡಿದೆ, ಇದು ನವ–ಉದಾರವಾಧಿ ಧೋರಣೆಗಳಿಗೆ ಒಂದು ವಿಶ್ವಾಸಾರ್ಹ ಪರ್ಯಾಯವಾಗಿ ಒಂದು ಬಲಿಷ್ಟ ಕಾರ್ಮಿಕ–ರೈತ ಮೈತ್ರಿ ಮೂಡಿಬರಲು ದಾರಿ ಮಾಡಿಕೊಡುತ್ತದೆ ಎಂದು ಅದು ಹೇಳಿದೆ.

ಡಿಸೆಂಬರ್ 15ನ್ನು ಅರಣ್ಯ ಹಕ್ಕುಗಳ ದಿನವಾಗಿ ಆಚರಿಸಲು ಸಮಾವೇಶ ನಿರ್ಧರಿಸಿದೆ. ಅಂದಿಗೆ ಅರಣ್ಯ ಹಕ್ಕುಗಳ ಕಾಯ್ದೆ ಜಾರಿಯಾಗಿ 10 ವರ್ಷಗಳಾಗುತ್ತವೆ. ದಿಲ್ಲಿಯಲ್ಲಿ ಆ ದಿನ ಒಂದು ರ್‍ಯಾಲಿಯನ್ನು ಸಂಘಟಿಸಲಾಗುವುದು ಎಂದು ಈ ವೇದಿಕೆಯ ಹೇಳಿಕೆ ತಿಳಿಸಿದೆ.

ಗುಜರಾತ್ ಸಾರ್ವಜನಿಕರು 'ಮೋದಾಣಿ ಮಾದರಿ' ಎಂದು ಗೇಲಿ ಮಾಡುವ ಗುಜರಾತ ಅಭಿವೃದ್ಧಿ ಮಾದರಿಯನ್ನು ಖಂಡಿಸಿದ ಸಮಾವೇಶ ಮೊದಿ–ಅದಾನಿ ಕೂಟ ಪ್ರಾಯೋಜಿಸಿರುವ ಈ ಮಾದರಿ ಅಗ್ಗದ ಶ್ರಮ ಮತ್ತು ಅಗ್ಗ ದರದಲ್ಲಿ ದೊಡ್ಡ ಪ್ರಮಾಣದಲ್ಲಿ ಭೂಮಿಯನ್ನು ಸುಲಭವಾಗಿ ಲಭ್ಯಗೊಳಿಸಿ ಮಾಡುವ ದುಡಿಯುವ ಜನರ ಶೋಷಣೆಯ ಮೇಲೆ ನಿಂತಿರುವ ಮಾದರಿ ಎಂದು ಹೇಳಿದೆ. ಇದು ಐಎಂಎಫ್–ವಿಶ್ವ ಬ್ಯಾಂಕ್ ಧೋರಣೆಗಳ ಆಧಾರದಲ್ಲಿ ರೂಪಿಸರುವ ಮಾದರಿಯಾದ್ದರಿಂದ ಇದು ಇಲ್ಲಿ ಜನಸಾಮಾನ್ಯರ ಬದುಕನ್ನು, ಶಿಕ್ಷಣ ಮತ್ತು ಆರೋಗ್ಯವನ್ನು ಮತ್ತು ಗ್ರಾಮೀಣ ಆರ್ಥಿಕವನ್ನು ಹದಗೆಡಿಸಿದೆ, ಈ ಮಾದರಿಯ ಟೊಳ್ಳುತನವನ್ನು ಬಯಲಿಗೆಳೆಯಲು 'ಭೂಮಿ ಅಧಿಕಾರ ಆಂದೋಲನ' ಮತ್ತು ಅದರ ಅಂಗ ಸಂಘಟನೆಗಳು ದೇಶಾದ್ಯಂತ ಪ್ರಚಾರಾಂದೋಲನ ನಡೆಸಲು ನಿರ್ಧರಿಸಿವೆ.





ಆಂಧ್ರಪ್ರದೇಶ: ಹಳಸಲು ಅಮೆರಿಕನ್ ತಂತ್ರಜ್ಞಾನದ ಪರಮಾಣು ಶಕ್ತಿಯ ವಿರುದ್ಧ ಪ್ರಚಾರಾಂದೋಲನ

ವಿಶಾಖಪಟ್ಟಣದಲ್ಲಿ ಜುಲೈ 17ರಂದು ಒಂದುರಾಷ್ಟ್ರೀಯ ಮಟ್ಟದ ಪರಮಾಣು ಶಕ್ತಿ–ವಿರೋಧಿ ಸಭೆ ನಡೆಯಿತು. ಉತ್ತರ ಆಂಧ್ರಪ್ರದೇಶದಲ್ಲಿ ದೇಶದ ಅತಿ ದೊಡ್ಡ ಪರಮಾಣು ಸ್ಥಾವರವನ್ನು ಹಾಕಲು ಕೇಂದ್ರ ಸರಕಾರ ಹವಣಿಸುತ್ತಿರುವುದರ ವಿರುದ್ಧ ಅಲ್ಲಿ ನಡೆಯುತತಿರುವ ಪ್ರಚಾರಾಂದೋಲನದ ಭಾಗವಾಗಿ ಈ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಸಿಪಿಐ(ಎಂ)ನ ಹಿರಿಯ ಮುಖಂಡ ಪ್ರಕಾಶ ಕಾರಟ್ ಮಾತಾಡಿದರು. ಆರು ರಿಯಾಕ್ಟರುಗಳುಳ್ಳ ಈ ದೊಡ್ಡ ಪರಮಾಣು ಸ್ಥಾವರವನ್ನು ಪ್ರಧಾನ ಮಂತ್ರಿಗಳ ರಾಜ್ಯವಾದ ಗುಜರಾತಿನ ಮೀಟಿವಿಡಿ ಗ್ರಾಮದ ಜನ ಬಿಡಲಿಲ್ಲ. ಅದನ್ನೀಗ ಇಲ್ಲಿಯ ಕೊವ್ವಡ ಗ್ರಾಮಕ್ಕೆ ವರ್ಗಾಯಿಸಲಾಗಿದೆ. ಗುಜರಾತಿನವರು ತಿರಸ್ಕರಿಸಿರುವುದನ್ನು ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಸ್ವೀಕರಿಸಬಾರದು ಎಂದು ಪ್ರಕಾಶ ಕಾರಟ್ ಹೇಳಿದರು.

ಅವರು ಜುಲೈ 3ರಂದು ಕೊವ್ವಡ ಗ್ರಾಮಕ್ಕೂ ಭೇಟಿ ನೀಡಿ ಅಲ್ಲಿಯ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದರು.

ಅಮೆರಿಕಾದಲ್ಲಿ ಹಳಸಲಾದ ಪರಮಾಣು ತಂತ್ರಜ್ಞಾನವನ್ನು ಇಲ್ಲಿ ತಂದು ಸುರಿಯಲಾಗುತ್ತಿದೆ. ಜಪಾನಿನ ಫುಕುಶಿಮಾ ಮುಂತಾದೆಡೆಗಳಲ್ಲಿ ವಿಫಲವಾದ ತಂತ್ರಜ್ಞಾನವಿದು ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಕೇಂದ್ರ ಸರಕಾರದಲ್ಲಿ ವಿದ್ಯುತ್ ಕಾರ್ಯದರ್ಶಿಯಾಗಿದ್ದ ಇ ಎ ಎಸ್ ಶರ್ಮ, ಮತ್ತು ಆಂಧ್ರಪ್ರದೇಶ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯ ಚ ನರಸಿಂಗ್ ರಾವ್ ಕೂಡ ಸಭೆಯನ್ನುದ್ದೇಶಿ ಮಾತನಾಡಿದರು.

ಮುಂಬೈಯಲ್ಲಿ ಬೃಹತ್ ನೀಲಿ–ಕೆಂಪು ರ್‍ಯಾಲಿ

ಪುಟ 2 ರಿಂದ

ನ್ಯಾಯದ ಮಂತ್ರಿ ಥಾವರ್‌ಚಂದ್ ಗೆಹ್ಲೋಟ್ ಈ ಕಟ್ಟಡವನ್ನು ನೆಲಸಮ ಮಾಡಬಾರದಾಗಿತ್ತು ಎಂದು ಒಪ್ಪಿಕೊಂಡರು, ಅಗತ್ಯವಿದ್ದರೆ ರಾಜ್ಯಸರಕಾರದೊಡನೆ ಮಾತಾಡಿ ಅಲ್ಲಿ ಸ್ಮಾರಕದ ಮರುನಿರ್ಮಾಣವನ್ನು ಕೈಗೆತ್ತಿಕೊಳ್ಳುತ್ತೇವೆ ಎಂದರು.

ಬೃಹತ್ ಶಕ್ತಿಪ್ರದರ್ಶನ

ರಾಜ್ಯಸಭೆಯಿಂದ ಯೆಚೂರಿಯವರು ನೇರವಾಗಿ ಮುಂಬೈಗೆ ಬಂದು ಈ ರ್‍ಯಾಲಿಯಲ್ಲಿ ಭಾಗವಹಿಸಿದರು. ಇದೊಂದು ಬೃಹತ್‌ಶಕ್ತಿಪ್ರದರ್ಶನವೂ ಆಗಿತ್ತು. ಹತ್ತಾರು ಸಾವಿರ ಪ್ರತಿಭಟನಾಕಾರರು ಸುರಿಯುತ್ತಿದ್ದ ಮಳೆಯನ್ನೂ ಲೆಕ್ಕಿಸದೆ ಏಳು ಮೈಲು ನಡೆದು ಬಂದರು.

ರ್‍ಯಾಲಿಯನ್ನು ಉದ್ದೇಶಿ ಸೀತಾರಾವ್ ಯೆಚೂರಿ, ಪ್ರಕಾಶ ಅಂಬೇಡ್ಕರ್, ಸಿಪಿಐ(ಎಂ) ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯ ಡಾ. ಅಶೋಕ ಧವಳೆ, ಸಿಪಿಐ ಮಹಾರಾಷ್ಟ್ರ ರಾಜ್ಯ ಕಾರ್ಯದರ್ಶಿ ಡಾ. ಭಾಲಚಂದ್ರ ಕಂಗೊ, ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹೈಯ ಕುಮಾರ್, ಭಾರತೀಯ ರಿಪಬ್ಲಿಕನ್ ಪಾರ್ಟಿ, ಲಾಲ್ ನಿಶಾನ್ ಪಾರ್ಟಿ, ಲಾಲ್‌ನಿಶಾನ್ ಪಾರ್ಟಿ(ಲೆನಿನಿಸ್ಟ್), ಸತ್ಯಶೋಧಕ ಕಮ್ಯುನಿಸ್ಟ್ ಪಾರ್ಟಿ ಮತ್ತು ಶ್ರಮಿಕ ಮುಕ್ತಿ ದಳದ ಮುಖಂಡರಲ್ಲದೆ ಸಾಂಸ್ಕೃತಿಕ ಕಾರ್ಯಕರ್ತರಾದ ಶೀತಲ್ ಸಾಠೆ ಮಾತನಾಡಿದರು.ಒಬ್ಬ ಕಾಂಗ್ರೆಸ್ ಶಾಸಕ ಮತ್ತು ಶಿವಸೇನಾ ಶಸಕ ಕೂಡ ವೈಯಕ್ತಿಕ ನೆಲೆಯಲ್ಲಿ ಭಾಗವಹಿದರು.

ಇದು ಎರಡು ಐತಿಹಾಸಿಕ ಸ್ಥಳಗಳ ಮೇಲಿನ ದಾಳಿ ಮಾತ್ರವಲ್ಲದೆ ಅವು ಪ್ರತಿನಿಧಿಸುತ್ತಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರಗತಿಪರ, ಸಮಾನತಾ–ಪರ ಸಿದ್ಧಾಂತದ ಮೇಲಿನ ದಾಳಿ ಕೂಡ ಆಗಿದೆ ಎಂದ ಪ್ರಕಾಶ ಅಂಬೇಡ್ಕರ್ ರಾಜ್ಯದ ಬಿಜೆಪಿ ನೇತರತ್ವದ ಸರಕಾರದ ಮಂಜೂರಾತಿಯಿಲ್ಲದೆ ಈ ಧ್ವಂಸಕಾರ್ಯ ನಡೆಯಲು ಸಆಧ್ಯವಿರಲಿಲ್ಲ ಎಂದರು. ಆಗ್ರಹಿಸಲಾಯಿತು. ಈ ಕಟ್ಟಡ ಜನಗಳ ಭಾಗವಹಿಸುವಿಕೆಯೊಂದಿಗೆ ಮರುನಿರ್ಮಾಣಗೊಳ್ಳುತ್ತದೆ, ಜುಲೈ 30ರಂದು ದಾದರ್‌ನಲ್ಲಿ ಕಟ್ಟಡ ಇದ್ದ ಸ್ಥಳದಲ್ಲಿ ನೆರೆಯಿರಿ ಎಂದು ಪ್ರಕಾಶ ಅಂಬೇಡ್ಕರ್ ಕರೆ ನೀಡಿದರು. ಕಟ್ಟಡವನ್ನು ಧ್ವಂಸ ಮಾಡಿದ ಕೂಡಲೇ ಪ್ರತಿಭಟನೆ ವ್ಯಕ್ತಗೊಂಡರೂ ಮೂರು ವಾರಗಳ ನಂತೆರ, ಜುಲೈ 19ರಂದು ಜನಸಾಗರವನ್ನು ನೋಡಿ ತನಿಖೆಗೆ ಮುಖ್ಯಮಂತ್ರಿಗಳು ಆದೇಶ ನೀಡಿದ್ದಾರೆ ಎಂದು ಗೇಲಿ ಮಾಡಿದರು.

ಸೀತಾರಾವ್ ಯೆಚೂರಿ ರಾಜ್ಯ ಸರಕಾರ ಮತ್ತು ಮುಂಬೈ ನಗರಪಾಲಿಕೆ ಒಂದು ಐತಿಹಾಸಿಕ ಕಟ್ಟಡವನ್ನು ನೆಲಸಮ ಮಾಡಿದ್ದಷ್ಟೇ ಅಲ್ಲ, ಸ್ವಾತಂತ್ರ್ಯ ಹೋರಾಟದ, ದಲಿತ ಆಂದೋಲನದ ಪ್ರತೀಕವೊಂದನ್ನು ನೆಲಸಮ ಮಾಡಿವೆ ಎನ್ನುತ್ತ ಕೇಂದ್ರ ಮತ್ತು ಮಹಾರಾಷ್ಟ್ರದಲ್ಲಿನ ಬಿಜೆಪಿ ನೇತೃತ್ವದ ಸರಕಾರಗಳ ದಲಿತ–ವಿರೋಧಿ, ಜನ–ವಿರೋಧಿ ಮತ್ತು ಕೋಮುವಾದಿ ಧೋರಣೆಗಳನ್ನು ಬಲವಾಗಿ ಟೀಕಿಸಿದರು. ಬಿಜೆಪಿ–ಆರೆಸ್ಸೆಸ್‌ನ ಅಪಾಯಕಾರಿ ಕೂಟವನ್ನು ಸೋಲಿಸಲು, ಭಾರತದಲ್ಲಿ ತೀವ್ರಗಾಮಿ ಸಾಮಾಜಿಕ–ಆರ್ಥಿಕ–ರಾಜಕೀಯ ಪರಿವರ್ತನೆ ತರಲು ಕೆಂಪು ಮತ್ತು ನೀಲಿ ಬಾವುಟಗಳ ಮುರಿಯಲಾಗದ ಐಕ್ಯತೆಯನ್ನು ಬೆಸೆಯಬೇಕು ಎಂದು ಕರೆ ನೀಡಿದರು.

ಪ್ರಧಾನ ಮಂತ್ರಿಗಳು ಜಮ್ಮು–ಕಾಶ್ಮೀರದ ಜನತೆಯನ್ನು ತಲುಪಲು ಸಂಸತ್ತಿನ ವೇದಿಕೆಯನ್ನು ಬಳಸಬೇಕು–ಸಿಪಿಐ(ಎಂ)

ಕಾಶ್ಮೀರ: ಜುಲೈ 20ರಂದು ಪ್ರಧಾನ ಕಾರ್ಯದರ್ಶಿ ಸೀತಾರಾವ್ ಯೆಚೂರಿಯವರ ನೇತೃತ್ವದಲ್ಲಿ ಸಿಪಿಐ(ಎಂ)ನ ಒಂದು ನಿಯೋಗ ಕೇಂದ್ರ ಗೃಹಮಂತ್ರಿ ರಾಜನಾಥ್ ಸಿಂಗ್ ಅವರನ್ನು ಭೇಟಿ ಮಾಡಿ ಕೇಂದ್ರ ಸರಕಾರ ಜಮ್ಮು –ಕಾಶ್ಮೀರದ ಜನತೆಯನ್ನು ತಲುಪಬೇಕು ಎಂದು ಆಗ್ರಹಿಸಿತು.

ಈ ನಿಯೋಗದಲ್ಲಿ ಕಾಶ್ಮೀರ ಕಣಿವೆಯ ಸಿಪಿಐ(ಎಂ) ಶಾಸಕ ಹಾಗು ಹಿರಿಯ ಮುಖಂಡ ಮಹಮ್ಮದ್ ಯೂಸುಫ್ ತರಿಗಾಮಿ ಮತ್ತು ಸಂಸದ್ ಸದಸ್ಯರಾದ ಮಹಮ್ಮದ್ ಸಲೀಂ ಮತ್ತು ಖುತಬೃತ ಬ್ಯಾನರ್ಜಿ ಇದ್ದರು.



" ಪ್ರಧಾನ ಮಂತ್ರಿಗಳು ಜಮ್ಮು ಮತ್ತು ಕಾಶ್ಮೀರದ ಜನತೆಯನ್ನು ತಲುಪಲು, ಪೋಲೀಸ್ ಗೋಲೀಬಾರಿನಲ್ಲಿ ಹಲವು ಜೀವಗಳ ನಷ್ಟದ ಬಗ್ಗೆ ದುಃಖ ವ್ಯಕ್ತಪಡಿಸುವುದಲ್ಲದೆ, ಅವರಿಗೆ ಸುರಕ್ಷತೆ–ಯ ಭರವಸೆ ನೀಡಲು ಸಂಸತ್ತಿನ ವೇದಿಕೆಯನ್ನು ಬಳಸಬೇಕು" ಎಂದು ನಿಯೋಗ ಗೃಹಮಂತ್ರಿಗಳಿಗೆ ಸೂಚಿಸಿರುವುದಾಗಿ ತರಿಗಾಮಿ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತ ಹೇಳಿದರು.

ಜನಜಂಗುಳಿಯನ್ನು ಹತೋಟಿಗೆ ತರಲು ಕೃತಕ ಗುಂಡುಗಳ ಪೆಲೆಟ್ ಗನ್ನುಗಳನ್ನು ಬಳಸುವುದನ್ನು ತಕ್ಷಣವೇ ನಿಲ್ಲಿಸಿ ಎಂದು ಆಗ್ರಹಿಸಲಾಯಿತು. ಭದ್ರತಾ ಪಡೆಗಳನ್ನು ಸಂಯಮದಿಂದ ವರ್ತಿಸುವಂತೆ ಹೇಳಿದ್ದೇವೆ ಎಂದು ಜುಲೈ 18ರಂದು ಸಂಸತ್ತಿನಲ್ಲಿ ಗೃಹಮಂತ್ರಿಗಳು ಭರವಸೆ ನೀಡಿದ್ದರು. ಅದೆ ದಿನ ಸಂಜೆ ಕಾಝೀಗುಂದ್ ನಲ್ಲಿ ಸೇನಾಪಡೆಗಳು ಮತ್ತೆ ಮೂವರನ್ನು ಕೊಂದಿವೆ, ಕೇಂದ್ರ ಸರಕಾರ ಮಾತನ್ನು ಕೃತಿಗೆ ಇಳಿಸುತ್ತಿದೆಯೇ ಎಂದು ತರಿಗಾಮಿ ಪ್ರಶ್ನಿಸಿದರು. (ಹಲವರು ದೃಷ್ಟಿ ಕಳಕೊಳ್ಳಲು ಕಾರಣವಾದ ಪೆಲೆಟ್‌ಗನ್ನುಗಳ ಬಳಕೆಯನ್ನು ಸದ್ಯಕ್ಕಂತೂ ನಿಲ್ಲಿಸಲಾಗುವದಿಲ್ಲ ಎಂದು ಭದ್ರತಾಪಡೆಗಳ ವಕ್ತಾರರು ಹೇಳಿರುವುದಾಗಿ ಈಗ ವರದಿಯಾಗಿದೆ)

ಸರಕಾರ ಕಾಶ್ಮೀರದ ಬಗ್ಗೆ ಇನ್ನೂ ಗಂಭೀರವಾಗಿ ಯೋಚಿಸಬೇಕು, ದಿಲ್ಲಿಯಲ್ಲಿ ಒಂದು ಸರ್ವಪಕ್ಷ ಸಭೆ ನಡೆಸಿ ಕಾಶ್ಮೀರ ಕಣಿವೆಗೆ ಭೇಟಿ ನೀಡಿ ವಿವಿಧ ಜನವಿಭಾಗಗಳೊಂದಿಗೆ ಮಾತಾಡಲು ಒಂದು ನಿಯೋಗವನ್ನು ಆರಿಸಬೇಕು ಎಂದು ಸಿಪಿಐ(ಎಂ) ಮತ್ತೊಮ್ಮೆ ಗೃಹಮಂತ್ರಿಗಳನ್ನು ಆಗ್ರಹಿಸಿತು.

ಕಾಶ್ಮೀರದಲ್ಲಿ ಮಾಧ್ಯಮಗಳ ಬಾಯಿಗೆ ಬೀಗ ಹಾಕಿರುವುದರಿಂದ ಆರು ದಿನಗಳಿಂದ ಪತ್ರಿಕೆಗಳು ಪ್ರಕಟವಾಗುತ್ತಿಲ್ಲ ಎಂಬ ಸಂಗತಿಯತ್ತ ಗೃಹಮಂತ್ರಿಗಳ ಗಮನ ಸೆಳೆದ ಸಿಪಿಐ(ಎಂ) ನಿಯೋಗ ಈ ಬಗ್ಗೆ ರಾಜ್ಯ ಸರಕಾರದ ಗೊಂದಲಮಯ ಹೇಳಿಕೆಗಳ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿತು.

ಒಂದೆಡೆಯಲ್ಲಿ ಶಿಕ್ಷಣ ಮಂತ್ರಿ ನಯೀಂ ಅಖ್ತರ್ 2–3ದಿನಗಳ ವರೆಗೆ ಪತ್ರಿಕೆಗಳನ್ನು ಪ್ರಕಟಿಸಬೇಡಿ ಎಂದು ಪತ್ರಿಕಾ ಮಾಲಕರಿಗೆ ಹೇಳುತ್ತಾರೆ, ಇನ್ನೊಂದೆಡೆಯಲ್ಲಿ ಮುಖ್ಯಮಂತ್ರಿಗಳ ಸಲಹೆಗಾರ ಅಮಿತಾಭ್ ಮಟ್ಟೂ ಪತ್ರಿಕಾ ಮಾಲಕರುಗಳ ಕ್ಷಮೆ ಕೋರುತ್ತಾರೆ, ಮುಖ್ಯಮಂತ್ರಿಗಳಿಗೆ ಈ ವಿಷಯ ತಿಳಿದೇ ಇಲ್ಲ ಎನ್ನುತ್ತಾರೆ. ಮುಖ್ಯಮಂತ್ತಿಗಳಿಗೇ ತಿಳಿಯದಿರುವ ರಾಜ್ಯದಲ್ಲಿ ದೈನಂದಿನ ವ್ಯವಹಾರಗಳನ್ನು ನೋಡಿಕೊಳ್ಳುವವರು ಯಾರು ಎಂಬದು ನಿಮಗಾದರೂ ತಿಳಿದಿದೆಯೇ ಎಂದು ತಾನು ಕೇಂದ್ರ ಗೃಹಮಂತ್ರಿಗಳನ್ನು ಕೇಳಿದುದಾಗಿ ತರಿಗಾಮಿಯವರು ಹೇಳಿದರು.

ಎಲ್ಲಿ ಹೋಯಿತು 'ಮಾನವೀಯತೆ'ಯ ಮಾತು?–ರಾಜ್ಯಸಭೆಯಲ್ಲಿ ಯೆಚೂರಿ

ಪುಟ 2 ರಿಂದ

"ರಾಜಕೀಯ ಪ್ರಕ್ರಿಯೆ ನಡೆಯಬೇಕಾಗಿದೆ. ಗೃಹಮಂತ್ರಿಗಳು ಪರಿಹಾರದ ಬಗ್ಗೆ ಕೇಳಿದರು, ಮಾತುಕತೆ ನಡೆಸಿ ಎಂದಿದ್ದೇನೆ. ಮುನ್ನಡೆಯಲು ಅದೇ ದಾರಿ. ವಾಜಪೇಯಿಯವರು ಹೇಳುತ್ತಿದ್ದ ಇನ್ಸಾನಿಯತ್ (ಮಾನವೀಯತೆ) ಎಲ್ಲಿ ಹೋಯಿತು?" ಎಂದೂ ಅವರು ಪ್ರಶ್ನಿಸಿದರು.

ಕೆಲವೊಮ್ಮೆ 56 ಇಂಚಿನ ಎದೆಯ ಮಾತಾಡುತ್ತೀರಿ, ಕೆಲವೊಮ್ಮೆ ಅಲ್ಲಿ ಬಿರಿಯಾನಿ ತಿನ್ನಲು ಇಳಿಯುತ್ತೀರಿ ಎಂದು ಕಾಶ್ಮೀರ ಕುರಿತ ಇಬ್ಬಂದಿ ನಿಲುವನ್ನು ಟೀಕಿಸಿದರು.

2010ರಲ್ಲಿ ಸಂಸತ್ತಿನ ನಿಯೋಗವೊಂದು ಅಲ್ಲಿಗೆ ಹೋಗಿತ್ತು. ಅದರಿಂದ ಪರಿಸ್ಥಿತಿ ಸ್ವಲ್ಪವಾದರೂ ತಿಳಿಯಾಗಿತ್ತು, ಕನಿಷ್ಟ ಆ ಬಗ್ಗೆ ಮುತುವರ್ಜಿಯನ್ನಾದರೂ ವಹಿಸಿ, ಒಂದು ಸರ್ವಪಕ್ಷ ಸಭೆ ಕರೆಯಿರಿ, ಎಂದು ಸರಕಾರವನ್ನು ಆಗ್ರಹಿಸಿದ ಯೆಚೂರಿ ಸಮುದಾಯಗಳನ್ನು ಪರಸ್ಪರ ಎತ್ತಿಕಟ್ಟುವುದನ್ನು ನಾವು ನಿಲ್ಲಿಸಬೇಕು ಎಂದು ಎಚ್ಚರಿಸಿದರು.

ಇಡೀ ದೇಶಕ್ಕೇ ನಾಚಿಕೆಗೇಡಿನ ಸಂಗತಿ–ಬೃಂದಾ ಕಾರಟ್

ಎಲ್ಲರ ಕಣ್ಣೆದುರೇ ತನ್ನ ಒಬ್ಬ ಪ್ರೀತಿಯ ಸದಸ್ಯನ ಅಮಾನುಷ ಹತ್ಯೆಯಿಂದ ಕಂಗೆಟ್ಟಿರುವ ಒಂದು ಕುಟುಂಬ ಅದರಿಂದ ಇನ್ನೂ ಚೇತರಿಸಿ ಕೊಂಡಿರದಿರುವಾಗ ಆ ಕುಟುಂಬದ ಮೇಲೆಯೇ ಸುಳ್ಳು ಆಪಾದನೆ ಹೊರಿಸಿ ಮಾನಸಿಕ ಯಾತನೆ ನೀಡುತ್ತಿರುವುದು ಇಡೀ ದೇಶಕ್ಕೇ ನಾಚಿಕಗೇಡಿನ ಸಂಗತಿ ಎಂದು ಸಿಪಿಐ(ಎಂ) ಹಿರಿಯ ಮುಖಂಡರಾದ ಬೃಂದಾ ಕಾರಟ್ ಹೇಳಿದ್ದಾರೆ.

ಅವರು ಈ ಕುರಿತು ಉತ್ತರಪ್ರದೇಶದ ಮುಖ್ಯಮಂತ್ರಿಗೆ ಪತ್ರ ಬರೆದು ಮಹಮ್ಮದ್ ಅಕ್ಲಾಖ್‌ನ ಕುಟುಂಬಕ್ಕೆ ರಕ್ಷಣೆ ಮತ್ತು ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ.

ಆಪಾದಿತರು ಈ ಹೀನ ಕೃತ್ಯಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿರುವ ಕುಟುಂಬ ದೂರನ್ನು ಹಿಂತೆಗೆದುಕೊಳ್ಳುವಂತೆ ಮಾಡಲು ಬೆದರಿಕೆಯ ಒಂದು ತಂತ್ರವಾಗಿ ಹೀಗೆ ಮಾಡುತ್ತಿದ್ದಾರೆ, ಅವರು ಮತ್ತು ಮತ್ತು ಕೇಂದ್ರದಲ್ಲಿ ಸರಕಾರದಲ್ಲಿ ಕೂತಿರುವ ಕೆಲವರೂ ಸೇರಿದಂತೆ ಅವರ ಬಲಿಷ್ಟ ಪೋಷಕರು ಈ ಬರ್ಬರ ಕೊಲೆಯನ್ನು ಸಮರ್ಥಿಸಿಕೊಳ್ಳಲು, ಗೋಹತ್ಯೆಯ ಸುಳ್ಳು ಆಪಾದನೆಯನ್ನು ಹಾಕಿ ಕೇಸನ್ನು ದೀರ್ಘ ಎಳೆದು ಈ ಪ್ರಕ್ರಿಯೆಯಲ್ಲಿ ಕೋಮುಧ್ರುವೀಕರಣದ ಪ್ರಯೋಜನ ಪಡೆಯಲು ನಡೆಸಿರುವ ತಂತ್ರ ಇದು ಎಂಬದು ಸ್ಪಷ್ಟ. ಅವರ ಈ ದುಷ್ಟ ಯೋಜನೆಗಳನ್ನು ತಡೆಯಲು ಅಗತ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಬೃಂದಾ ಕಾರಟ್ ಉತ್ತರ ಪ್ರದೇಶದ ಮುಖ್ಯಮಂತ್ರಿಗಳನ್ನು ಆಗ್ರಹಿಸಿದ್ದಾರೆ.



ಟರ್ಕಿ ದಂಗೆ 'ದೇವರು ಕೊಟ್ಟ ಉಡುಗೊರೆ' : ಎರ್ಡೋಗನ್



ಶರತ್‌ಚಂದ್ರ

ಟರ್ಕಿಯ ಇತ್ತೀಚಿನ ವಿಫಲ ಮಿಲಿಟರಿ ದಂಗೆ ಟರ್ಕಿಗೆ ಮಾತ್ರವಲ್ಲ, ಇಡೀ ಮಧ್ಯಪ್ರಾಚ್ಯ ಪ್ರದೇಶಕ್ಕೆ ಮತ್ತು ಇಡೀ ಜಗತ್ತಿಗೇ ಅತ್ಯಂತ ಗೊಂದಲಮಯ ಮತ್ತು ಗಂಭೀರ ಬೆಳವಣಿಗೆ. ಈ ಮಿಲಿಟರಿ ದಂಗೆಯ ಹಿಂದಿದ್ದವರು ಯಾರು? ಇದು ಬರಿಯ ಟರ್ಕಿಯ ಒಳಗಿನ ಶಕ್ತಿಗಳ ಕೃತ್ಯವೇ? ಅಥವಾ ಅಂತರ್ರಾಷ್ಟ್ರೀಯ ಶಕ್ತಿಗಳ ಪಾತ್ರವಿತ್ತೇ? ಟರ್ಕಿಯ, ಮಧ್ಯ ಪ್ರಾಚ್ಯ ಪ್ರದೇಶದ ಮತ್ತು ಜಗತ್ತಿನ ಮೇಲೆ ಈ ವಿಫಲ ದಂಗೆ-ಯ ಪರಿಣಾಮಗಳೇನು? ವಿಫಲ ದಂಗೆಯ ಹಲವು ದಿನಗಳ ನಂತರವೂ ಇವೆಲ್ಲವೂ ಪ್ರಶ್ನೆಯಾಗಿಯೇ ಉಳಿದಿದೆ. ಎಲ್ಲವೂ ಗೊಂದಲಮಯವಾಗಿದೆ.

ದಂಗೆ ಹೇಗೆ ವಿಫಲವಾಯಿತು?

ಆದರೆ ಕೆಲವು ಸಂಗತಿಗಳು ಸ್ಪಷ್ಟವಾಗುತ್ತಿವೆ. ಈ ದಂಗೆ ಸಂಘಟಿಸಿದ್ದು ಹಿಂದೆ ಟರ್ಕಿಯಲ್ಲಿ ಆದಂತೆ ಉನ್ನತ ಮಿಲಿಟರಿ ಅಧಿಕಾರಿಗಳ ನಾಯಕತ್ವದಲ್ಲಿ ಅಲ್ಲ. ಭೂಸೇನೆ, ನೌಕಾಸೇನೆ ಮತ್ತು ವಾಯುಸೇನೆಯ ಮುಖ್ಯಸ್ಥರನ್ನು ಬಂಡುಕೋರರು ಬಂಧಿಸಿ ಒತ್ತೆ ಇಟ್ಟುಕೊಂಡಿದ್ದರು. ಮಧ್ಯಮ ಹಂತದ ಮಿಲಿಟರಿ ಅಧಿಕಾರಿಗಳು ಈ ದಂಗೆಯನ್ನು ಯೋಜಿಸಿ ನಡೆಸಿರುವಂತೆ ಕಾಣುತ್ತಿದೆ. ಇದೇ ಈ ದಂಗೆ ವಿಫಲವಾಗಲು ಕಾರಣ ಎನ್ನಲಾಗುತ್ತಿದೆ. ಬಂಡುಕೋರರು ಅಂಕಾರಾ, ಇಸ್ತಾನ್‌ಬುಲ್ ನಗರಗಳ ಆಯಕಟ್ಟಿನ ಪ್ರದೇಶಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದರು. ಸರಕಾರಿ ಟಿವಿ ಸ್ಟೇಶನ್ ಮುಚ್ಚಿದ್ದರು. ಆದರೆ ಖಾಸಗಿ ಟಿವಿ ಸ್ಟೇಶನ್‌ಗಳನ್ನು ಮತ್ತು ಸಾಮಾಜಿಕ ಮಾಧ್ಯಮ ಮುಚ್ಚಲು ಅವರಿಗೆ ಸಾಧ್ಯವಾಗಲಿಲ್ಲ. ಅದೇ ರೀತಿ ಅಧ್ಯಕ್ಷ ಎರ್ಡೋಗನ್ ಮತ್ತು ಪ್ರಮುಖ ಮಂತ್ರಿಗಳನ್ನು ಬಂಧಿಸಲು ಅವರಿಗೆ ಸಾಧ್ಯವಾಗಲಿಲ್ಲ. ಅಧ್ಯಕ್ಷ ಎರ್ಡೋಗನ್ ಮತ್ತು ಪ್ರಮುಖ ಮಂತ್ರಿಗಳು ಸಿ.ಎನ್.ಎನ್. ಟರ್ಕಿ ಮತ್ತು ಸಾಮಾಜಿಕ ಮಾಧ್ಯಮಗಳನ್ನು ಬಳಸಿ ಆಳುವ ಎಕೆಪಿ ಪಕ್ಷದ ಕಾರ್ಯಕರ್ತರನ್ನು ಅಣಿ ನೆರೆಸಲು ಸಾಧ್ಯವಾಯಿತು.

ಇದು ಬಹಳಷ್ಟು ಜನ ಅಂದುಕೊಂಡಂತೆ ಸೆಕ್ಯುಲರ್ ಕೆಮಾಲ್ ವಾದಿಗಳು ಸಂಘಟಿಸಿದ ದಂಗೆ ಆಗಿರಲಿಲ್ಲ. ಎಡ-ಬಲ-ನಡು ಪಕ್ಷಗಳಲ್ಲಿ ಯಾವ ಪಕ್ಷವೂ ದಂಗೆಯನ್ನು ಬೆಂಬಲಿಸಿರಲಿಲ್ಲ. ಅದನ್ನು ಕಟುವಾಗಿ ಖಂಡಿಸಿದವು ಕೂಡಾ. ಎಲ್ಲಾ ಪಕ್ಷಗಳೂ ಅಧ್ಯಕ್ಷ ಎರ್ಡೋಗನ್ ರ ಸರ್ವಾಧಿಕಾರಿ ಮತ್ತು ಪ್ರಜಾಪ್ರಭುತ್ವ ದಮನ ಮಾಡುವ ಧೋರಣೆಯನ್ನ ಕಟುವಾಗಿ ವಿರೋಧಿಸಿದವು. ಆದರೆ ಪ್ರಜಾಪ್ರಭುತ್ವವನ್ನು ಮಿಲಿಟರಿ ದಂಗೆ ಮೂಲಕ ಬಲಪಡಿಸಲು ಸಾಧ್ಯವಿಲ್ಲ. ಚುನಾಯಿತ ಮುಖ್ಯಸ್ಥ ಮತ್ತು ಸರಕಾರ ಎಷ್ಟೇ ಸರ್ವಾಧಿಕಾರಿ ಧೋರಣೆ ತೋರಿಸಿದರೂ ಮಿಲಿಟರಿ ಆಡಳಿತಕ್ಕಿಂತ ಹೆಚ್ಚು ಒಳ್ಳೆಯದು ಎಂಬುದು ಈಜಿಪ್ಟಿನ ಉದಾಹರಣೆಯಿಂದ ಟರ್ಕಿಯ ವಿರೋಧ ಪಕ್ಷಗಳು ಕಂಡುಕೊಂಡಿವೆ. ಮಿಲಿಟರಿ ದಂಗೆಗೆ ಮಿಲಿಟರಿಯ ಎಲ್ಲಾ ವಿಭಾಗಗಳಿಂದಾಗಲಿ, ಜನತೆಯಿಂದಾಗಲಿ ಬೆಂಬಲ ದೊರೆಯಲಿಲ್ಲ. ಬಂಡುಕೋರ ಮಿಲಿಟರಿ ಅಧಿಕಾರಿಗಳು ಇಂತಹ ಬೆಂಬಲ ಸಿಗಬಹುದು ಎಂದು ನಿರೀಕ್ಷಿಸಿದಂತೆ ಕಾಣುತ್ತದೆ. ಅವರ ನಿರೀಕ್ಷೆ ಹುಸಿಯಾದ್ದು ಸಹ ದಂಗೆ ವಿಫಲವಾಗಲು ಕಾರಣ ಎನ್ನಲಾಗಿದೆ.

ಗುಲೆನಿಸ್ಟರು ದಂಗೆಯ ಸಂಘಟಕರೇ?

ಹಾಗಿದ್ದರೆ ಈ ದಂಗೆಯನ್ನು ಸಂಘಟಿಸಿದವರು ಯಾರು? ಎರ್ಡೋಗನ್ ಮತ್ತು ಟರ್ಕಿ ಸರಕಾರ ಪ್ರಕಾರ ಫೆತುಲ್ಲಾ ಗುಲೆನ್ ಮತ್ತು ಟರ್ಕಿಯಲ್ಲಿರುವ ಅವರ ಬೆಂಬಲಿಗರು ಇದನ್ನು ಸಂಘಟಿಸಿದ್ದು. ಈಗ ಅಮೆರಿಕದಲ್ಲಿ ನೆಲೆಸಿರುವ ಗುಲೆನ್ ಮತ್ತು ಅವರ ಬೆಂಬಲಿಗರು ಹಿಂದೆ ಎರ್ಡೋಗನ್ ಮತ್ತು ಎಕೆಪಿ ಪಕ್ಷವನ್ನು ಬಲವಾಗಿ ಬೆಂಬಲಿಸಿದವರು. ಅವರು ಸರಕಾರ, ಮಿಲಿಟರಿ ಮತ್ತು ನ್ಯಾಯಾಂಗ ಮತ್ತಿತರ ಪ್ರಭುತ್ವದ ಸಂಸ್ಥೆಗಳಲ್ಲಿ ಎಕೆಪಿ ಜತೆ ನುಸುಳಿ ಜತೆಯಾಗಿ ಕೆಲಸ ಮಾಡಿದ್ದರು. ಗುಲೆನಿಸ್ಟರು ಚುನಾವಣೆಯಲ್ಲೂ, ಪ್ರಭುತ್ವದ ಇಸ್ಲಾಮೀಕರಣದಲ್ಲೂ ಎಕೆಪಿಗೆ ಬೆಂಬಲಿಸಿದ್ದರು. ಇತ್ತೀಚೆಗಷ್ಟೇ ಎಕೆಪಿ ಪಕ್ಷ, ಸರಕಾರ ಮತ್ತು ಪ್ರಭುತ್ವ ಎಲ್ಲದರಲ್ಲೂ ತನ್ನ ಏಕಚಕ್ರಾಧಿಪತ್ಯವನ್ನು ಸ್ಥಾಪಿಸುವ ಅಧ್ಯಕ್ಷ ಎರ್ಡೋಗನ್ ಪ್ರಯತ್ನವನ್ನು ಗುಲೆನಿಸ್ಟರು ವಿರೋಧಿಸಿದ್ದರು. ಗುಲೆನಿ ಕಳೆದ ಎರಡು ದಶಕಗಳಿಂದ ಅಮೆರಿಕದಲ್ಲಿ ಶಾಶ್ವತವಾಗಿ ನೆಲೆಸಿದ್ದು, ಎರ್ಡೋಗನ್ ಮತ್ತು ಟರ್ಕಿ ಸರಕಾರದ ತಮ್ಮ ಪಾತ್ರದ ಬಗೆಗಿನ ಈ ಆಪಾದನೆಯನ್ನು ತಳ್ಳಿ ಹಾಕಿದ್ದಾರೆ. ಆದರೆ ಗುಲೆನಿ ನೀಡಿದ ಹೇಳಿಕೆಯಲ್ಲಿ ಈ ದಂಗೆಯಲ್ಲಿ ತಮ್ಮ ಯಾವುದೇ ಪಾತ್ರ ಇಲ್ಲ. ಟರ್ಕಿಯಲ್ಲಿರುವ ತಮ್ಮ ಬೆಂಬಲಿಗರ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲ ಟರ್ಕಿಯಲ್ಲಿರುವ ತಮ್ಮ ಬೆಂಬಲಿಗರು ಅವರ ಸ್ವಂತ ನಿರ್ಣಯದಿಂದ ದಂಗೆಯಲ್ಲಿ ಭಾಗವಹಿಸಿರಬಹುದು ಎಂಬ ಹೇಳಿಕೆ ಗಮನಾರ್ಹವಾಗಿದೆ.

ಗುಲೆನಿ ಅವರನ್ನು ಅಮೆರಿಕನ್ ಸರಕಾರ ತಮ್ಮ ವಶಕ್ಕೆ ಕೊಡಬೇಕೆಂದು ಟರ್ಕಿ ಸರಕಾರದ ಒತ್ತಾಯದ ಬಗ್ಗೆ ಅಮೆರಿಕ ಸರಕಾರ ಮೌನವಾಗಿದೆ. ಗುಲೆನಿ ಅಮೆರಿಕ ಸರಕಾರಕ್ಕೆ ನಿಕಟವರ್ತಿಯಾಗಿದ್ದು, ಮಧ್ಯ ಪ್ರಾಚ್ಯದ ಮತ್ತು ರಶ್ಯವನ್ನು ಸುತ್ತುವರೆಯುವ ದೂರಗಾಮಿ ಯೋಜನೆಗಳಲ್ಲಿ ದೊಡ್ಡ ಪಾತ್ರ ಇದೆ ಎನ್ನಲಾಗಿದೆ. ದಂಗೆ ನಡೆಯುತ್ತಿದ್ದಾಗ ಅಮೆರಿಕ ಸರಕಾರವಾಗಲಿ ಮಾಧ್ಯಮಗಳಾಗಲಿ, ಮಿಲಿಟರಿ ದಂಗೆಯನ್ನು ಖಂಡಿಸುವ ಅಥವಾ 'ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುವ', ಆ ಬಗ್ಗೆ ಸುದ್ದಿ ಕೊಡುವ ಗೋಜಿಗೆ ಹೋಗಿರಲಿಲ್ಲ. ದಂಗೆ ವಿಫಲವಾಗಿದ್ದು ಖಚಿತವಾದ ಮೇಲೇನೆ ಇವೆಲ್ಲ ನಡೆದವು. ಇದ-ರಿಂದ ದಂಗೆಗೆ ಸಿಐಎ ಬೆಂಬಲಿಸಿತ್ತು ಅಥವಾ ಅದನ್ನು ಸಿಐಎ ಸಂಘಟಿಸಿತ್ತು ಎಂಬ ಗುಮಾನಿ ಪ್ರಬಲವಾಗಿತ್ತು. ಇದು ಬಹಳ ಮಟ್ಟಿಗೆ ಯುರೋ ಕೂಟ ಮತ್ತು ಅದರ ದೇಶಗಳ ಬಗೆಗೂ ನಿಜ. ನಾಟೋ ಮಿಲಿಟರಿ ಕೂಟದ ಭಾಗವಾಗಿರುವ ಟರ್ಕಿ ಮಿಲಿಟರಿಯ ಒಂದು (ಸಾಕಷ್ಟು ದೊಡ್ಡ) ವಿಭಾಗ ಭಾಗವಹಿಸುವಾಗ ನಾಟೋ ನಾಯಕತ್ವಕ್ಕೆ ಏನೂ ಮಾಹಿತಿ ಇರಲಿಲ್ಲವೇ ಎಂದು ಅನುಮಾನಿಸಲಾಗಿದೆ. ಐಸಿಸ್ ಮತ್ತು ಸಿರಿಯಾ ಬಗ್ಗೆ ಅಮೆರಿಕ, ಯುರೋ ಕೂಟ ಮತ್ತು ನಾಟೋ ಜತೆ ಅಧ್ಯಕ್ಷ ಎರ್ಡೋಗನ್ ತೀವ್ರ ಭಿನ್ನಾಭಿಪ್ರಾಯ ಹೊಂದಿದ್ದ ಹಿನ್ನೆಲೆಯಲ್ಲಿ, ಅವರನ್ನು ಮಣಿಸಲು ಅಮೆರಿಕ, ಯುರೋಕೂಟ, ನಾಟೋಗಳ ಪಾತ್ರವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಹಾಗಾದರೆ ಗುಲೆನಿಸ್ಟ್ ಮಿಲಿಟರಿ ಅಧಿಕಾರಿಗಳನ್ನು ದಾಳವಾಗಿ ಬಳಸಲಾಯಿತೇ ಎಂಬ ಅನುಮಾನಗಳ ದಟ್ಟವಾಗಿವೆ.

ಬಲಗೊಂಡ ಸರ್ವಾಧಿಕಾರ

ದೇಶದೊಳಗೆ, ಪ್ರದೇಶದಲ್ಲಿ ಮತ್ತು ಜಾಗತಿಕವಾಗಿ ಟರ್ಕಿಯ ವಿಫಲ ದಂಗೆಯ ಪರಿಣಾಮಗಳೇನು? ವಿಫಲ ದಂಗೆಯ ನಂತರ ಟರ್ಕಿ ಸರಕಾರ ದಂಗೆಯಲ್ಲಿ ಭಾಗವಹಿಸಿದವರು ಎಂದು ಹೇಳಲಾದ ಆರು ಸಾವಿರ ಮಿಲಿಟರಿ, ನ್ಯಾಯಾಂಗ ಮತ್ತಿತರ ಪ್ರಭುತ್ವದ ಸಂಸ್ಥೆಯ ಅಧಿಕಾರಿಗಳನ್ನು ಬಂಧಿಸಲಾಗಿದೆ. ಅವರನ್ನು 'ವಿಚಾರಣೆ'ಯ ನಂತರ ಗಲ್ಲಿಗೇರಿಸಲಾಗುವುದು. ಇವರಲ್ಲಿ ಎಲ್ಲರೂ ದಂಗೆಯಲ್ಲಿ ಭಾಗವಹಿಸಿದವರಲ್ಲ. ಎರ್ಡೋಗನ್ ಅವರ ಸರ್ವಾಧಿಕಾರವನ್ನು ವಿರೋಧಿಸುವ ಎಲ್ಲರನ್ನೂ ದಂಗೆಯ ಆಪಾದನೆಯ ನೆಪದಲ್ಲಿ ಹೆಳಹೆಸರಿಲ್ಲದಂತೆ ಮಾಡಲಾಗುತ್ತಿದೆ ಎಂದು ಹೇಳಲಾಗಿದೆ. ಮಾತ್ರವಲ್ಲ ಸಾವಿರಾರು ವಿ.ವಿ. ಮತ್ತಿತರ ಶಿಕ್ಷಕರು ಮತ್ತು ಪರ್ತಕರ್ತರನ್ನು ಬಂಧಿಸಲಾಗುತ್ತಿದೆ. ಎಲ್ಲಾ ರಾಜಕೀಯ ಪಕ್ಷಗಳು ದಂಗೆಯನ್ನು ವಿರೋಧಿಸಿದ್ದರೂ, ಗುಲೆನಿಸ್ಟರ ಜತೆ ಕುರ್ದಿಶ್ ಮತ್ತು ಎಡಪಕ್ಷಗಳೂ ಶಾಮೀಲಾಗಿದ್ದವು ಎಂದು ಸರಕಾರ ಆಪಾದಿಸಿದೆ ಮತ್ತು ಪ್ರಚಾರ ಮಾಡುತ್ತಿದೆ. ದಂಗೆ ತಮಗೆ 'ದೇವರು ಕೊಟ್ಟ ಉಡುಗೊರೆ', ಇದರಿಂದ ಮಿಲಿಟರಿ ಸ್ವಚ್ಛಗೊಳಿಸುವ ಕೆಲಸ ಸುಗಮವಾಗಲಿದೆ' ಎಂದು ಅಧ್ಯಕ್ಷ ಎರ್ಡೋಗನ್ ಯಾವುದೇ ಭಿಡೆಯಿಲ್ಲದೆ ಹೇಳಿದ್ದಾರೆ. ವಿರೋಧ ಪಕ್ಷಗಳ ವಿರುದ್ಧ ಹಿಂಸಾತ್ಮಕ ದಾಳಿಗಳನ್ನು ಮಾಡಲಾಗುತ್ತಿದೆ. ಅಧ್ಯಕ್ಷ ಎರ್ಡೋಗನ್ ವಿಫಲ ದಂಗೆಯನ್ನು ತಮ್ಮ ಸರ್ವಾಧಿಕಾರ ಬಲಪಡಿಸಲು ಬಳಸುತ್ತಿದ್ದಾರೆ. ವಿರೋಧ ಪಕ್ಷಗಳು ಐಕ್ಯತೆ ಕಾಪಾಡಿಕೊಂಡಿದ್ದರೂ ದಾಳಿಗಳನ್ನು ಎದುರಿಸಲಾಗುತ್ತಿಲ್ಲ. ಆದರೆ ಎರ್ಡೋಗನ್ ಇದೇ ಆಕ್ರಾಮಕತೆ ಮುಂದುವರೆಸಿದರೆ ಟರ್ಕಿಯನ್ನು ಆಳಲು ಸಾಧ್ಯವೇ?





ಅಮೆರಿಕದ ಜತೆ ಟರ್ಕಿಯ ಸಂಬಂಧಗಳು ಕೆಡಲಿವೆ. ನಾಟೋ ಮತ್ತು ಯುರೋಕೂಟದ ಜತೆ ಸಹ ಗಂಭೀರ ಬಿಗುವು ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಟರ್ಕಿಯಲ್ಲಿ ಅಣ್ವಸ್ತ್ರ ಶೇಖರಿಸಿ ಇಟ್ಟಿರುವ ಮಿಲಿಟರಿ ನೆಲೆಯನ್ನು ದಂಗೆಯ ನಂತರ ಮುಚ್ಚಲಾಗಿದೆ. ರಶ್ಯದ ವಿಮಾನ ಉರುಳಿಸಿದ್ದು ದಂಗೆಯಲ್ಲಿ ಭಾಗವಹಿಸಿದ್ದ ಒಬ್ಬ ಹಿರಿಯ ವಾಯುಸೇನಾ ಅಧಿಕಾರಿ ಎಂಬ ಟರ್ಕಿ ಸಚಿವರೊಬ್ಬರ ಹೇಳಿಕೆ, ಟರ್ಕಿ ರಶ್ಯ 'ಕಾರ್ಡು' ಬಳಸಲು ಸಿದ್ಧವಾಗುತ್ತಿದೆ ಎಂಬ ಸೂಚನೆ ನೀಡುತ್ತಿದೆ. ಇದು ಮಧ್ಯ ಪ್ರಾಚ್ಯ ಪ್ರದೇಶದ ಮತ್ತು ಜಾಗತಿಕ ವ್ಯೂಹಗಳ ಮೇಲೆ ಯಾವ ಪರಿಣಾಮ ಬೀರಬಹುದು ಎಂಬುದನ್ನು ಈಗಲೇ ಹೇಳುವುದು ಕಷ್ಟ. ಕುರ್ದಿಶ್ ಮೇಲೆ ದಾಳಿ, ಐಸಿಸ್ ಗೆ ಗುಪ್ತ ಬೆಂಬಲ, ಸಿರಿಯಾ ಸರಕಾರ ಬದಲಾಯಿಸುವ ಆಕ್ರಾಮಕತೆಯ ನೀತಿ ಬದಲಾಗುವುದೇ? ಇದರಿಂದ ಸಿರಿಯಾ ಸಮಸ್ಯೆ ಬಗೆಹರಿಯುವುದು ಸುಲಭವಾಗಬಹುದೇ? ಆದ-ರೆ ಜಾಗತಿಕ ಪಾತ್ರ ವಹಿಸುವ ಹಂಬಲ ಇರುವ ಸರ್ವಾಧಿಕಾರಿ ಧೋರಣೆಯ ಆಕ್ರಾಮಕತೆಯ ನೀತಿಯ ಎರ್ಡೋಗನ್ ಸಕಾರಾತ್ಮಕ ಬೆಳವಣಿಗೆಗೆ ಎಡೆ ಮಾಡಬಹುದು ಎಂಬುದು ನಂಬುವುದ ಕಷ್ಟ. ಎರ್ಡೋಗನ್ ಆಕ್ರಾಮಕತೆ ಮಟ್ಟ ಹಾಕಲು ಅಮೆರಿಕ-ಯುರೋ ಕೂಟಗಳು ಏನು ಮಾಡಲು ತಯಾರಾಗುತ್ತವೆ ಎನ್ನುವುದರ ಮೇಲೆ ಇದು ಅವಲಂಬಿತವಾಗಿರುತ್ತದೆ.

ಸದ್ಯಕ್ಕೆ ಪರಿಸ್ಥಿತಿ ಗೊಂದಲಮಯವಾಗಿದೆ. ಆದರೆ ಈ ವಿಫಲ ದಂಗೆ ಇನ್ನಷ್ಟು ಅಪಾಯಕಾರಿ ಬೆಳವಣಿಗೆಗಳಿಗೆ ಎಡೆ ಮಾಡುವ ಸಾಧ್ಯತೆಯೇ ಹೆಚ್ಚು.

ಬದುಕಿಗೆಂದೂ ಶಾಸ್ತ್ರಗಳಿಂದ ಉತ್ತರ ಸಿಗುವುದಿಲ್ಲ.... ಪುಟ 16 ರಿಂದ

ಪ್ರಾಣೇಶಾಚಾರ್ಯ ನದಿ ದಡದಲ್ಲಿರುವ ಮಾರುತಿ ದೇವಸ್ಥಾನಕ್ಕೆ ತೆರಳುತ್ತಾರೆ, ಅಲ್ಲಿಯೂ ಪರಿಹಾರ ಸಿಗುವುದಿಲ್ಲ. ಅಲ್ಲಿಗೆ ಆಗಮಿಸುವ ಚಂದ್ರಿಯೊಂದಿಗೆ ಸಮಾಗಮಗೊಳ್ಳುತ್ತಾರೆ. ನಾರಾಣಪ್ಪ ಶವ 'ಸಂಸ್ಕಾರ' ಆಗಲಿಲ್ಲ ಎಂದು ಒಂದು ಕಡೆ, ಚಂದ್ರಿಯೊಂದಿಗಿನ ಸಂಬಂಧದ ಗೊಂದಲದ ಪ್ರಶ್ನೆಗಳಿಂದಾಗಿ ಪ್ರಾಣೇಶಾಚಾರ್ಯರು ಊರು ಬಿಡುವ ಪರಿಸ್ಥಿತಿ ಬರುತ್ತದೆ. ಇದೇ ಸಂದರ್ಭದಲ್ಲಿ ಅವರ ಹೆಂಡತಿಯೂ ನಿಧನ ಹೊಂದುತ್ತಾಳೆ.

ನಾರಾಣಪ್ಪನ ಶವ 3-4 ದಿನ ಕಳೆದರೂ 'ಸಂಸ್ಕಾರ' ಆಗಲಿಲ್ಲ ಎಂದು ಒದ್ದಾಡುವ ಚಂದ್ರಿಯು ಗೊತ್ತಿದ್ದವರನ್ನೆಲ್ಲ ಕೇಳಿ ಮಹಮ್ಮದ್ ಬ್ಯಾರಿ ಅವರ ಮೂಲಕ ಕಡೆಗೆ ಶವಕ್ಕೆ ಚಂದ್ರಿಯೇ ಬೆಂಕಿ ಇಡುತ್ತಾಳೆ. ಶವ 'ಸಂಸ್ಕಾರ' ಮಾಡಲು ಶಾಸ್ತ್ರಗ್ರಂಥಗಳ ಅಪ್ಪಣೆ ಬೇಕಿಲ್ಲ, ಹೆಣ್ಣು ಸಹ ಅದನ್ನೂ ಮಾಡಬಲ್ಲಳು ಎಂದು ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ. ಊರಿಗೆ ಪ್ಲೇಗ್ ಎಂಬ ಮಹಾ ಮಾರಿ ಬಂದು ಜಾತಿಯತೆ, ವಿನಾಶದ ಸಂಕೇತವಾಗಿ ಅಪ್ಪಳಿಸುವ ದುರ್ವಾಸಪುರದ ಜನರಲ್ಲಿ ಅನಾವರಣಗೊಳ್ಳತ್ತಾ ಸಾಗಿದೆ. ಮಠಕ್ಕೆ ಹೊರಟ ಕೆಲವರು ಅರ್ಧ ದಾರಿಯಲ್ಲೇ ಸಾಯುವಂತಹ ಪರಿಸ್ಥಿತಿ ಅಪ್ಪಳಿಸುತ್ತದೆ.


ಊರು ಊರು ತಿರುಗುವ ಪ್ರಾಣೇಶಾಚಾರ್ಯ ಅನ್ನ ನೀರಿಗಾಗಿ ಅಲೆಯುವ ಪ್ರಸಂಗದೊಂದಿಗೆ ದಾರಿಹೋಕ ಮಾಲೇರ ಪುಟ್ಟನೊಂದಿಗೆ ಒಂದಷ್ಟು ತಿರುಗುತ್ತಾ ಜಾತ್ರೆಯಲ್ಲಿ ಜಾತಿ ಮತ ಎಂದು ಕೇಳದೆ ಎಲ್ಲರೊಂದಿಗೂ ಬೆರೆಯುವ ಜನರನ್ನು ಸಂಪರ್ಕಿಸುತ್ತಾ, ನಾರಾಣಪ್ಪನೊಂದಿಗಿನ ಸಂಘರ್ಷದಿಂದ ಮತ್ತಷ್ಟು ಗೊಂದಲಕ್ಕೆ ಒಳಗಾಗಿ ಹುಚ್ಚನಂತೆ ಅಲೆಯುವ ಪರಿಸ್ಥಿತಿ ಬರುತ್ತದೆ. ಸ್ಮಶಾಣದಂತಾಗಿರುವ ದುರ್ವಾಸಪುರದ ಕಡೆಗೆ ಹೋಗಬೇಕಾ ಅಥವಾ ಇನ್ನೆಲ್ಲಾದರೂ ಹೋಗಲೇ ಎಂದು ತಳಮಳಕ್ಕೆ ಒಳಗಾಗುತ್ತಾನೆ.

ಮೈಸೂರು ರಂಗಾಯಣದವರು ಪ್ರಸ್ತುತ ಪಡಿಸಿದ ಈ ನಾಟಕ ಮಾತ್ರವಲ್ಲ ಕಾದಂಬರಿ ಕೂಡ ಇಂದಿಗೂ ಪ್ರಸ್ತುತವೆನಿಸುತ್ತದೆ. ಸ್ವಾತಂತ್ರ್ಯ ಪೂರ್ವದ ಕಥಾನಕ ಹೊಂದಿರುವ ನಾಟಕ ಜಾತಿ-ಧರ್ಮ ಹಾಗೂ ಸಾಮಾನ್ಯ ಜನಜೀವನದ ಪರಿಸ್ಥಿತಿ ಮತ್ತು ಎಲ್ಲಿಯೂ ಯಾವುದಕ್ಕೂ ಭಯಪಡಬೇಕಿಲ್ಲ, ಎಲ್ಲವನ್ನು ಎದುರಿಸಬಲ್ಲೆವು ಎಂಬಂತೆ ಮೂಡಿಬಂದಿದೆ.

ನಾಟಕಕ್ಕೆ ಪ್ರಾರಂಭದಿಂದ ಕೊನೆಯವರೆಗೂ ಸಹ ಎಲ್ಲಿಗೂ ಕೊರತೆಯಾಗದಂತೆ ಮೈಸೂರು ರಂಗಾಯಣದ ಕಲಾವಿದರು ಸಮರ್ಥವಾಗಿ ಅಭಿನಯ ಮಾಡಿದ್ದಾರೆ. ಸಂದರ್ಭಕ್ಕೆ ಅನುಸಾರವಾಗಿ ಹಾಡುಗಳನ್ನು ಬಳಕೊಂಡಿದ್ದು, ಕೆಲವು ಹಾಸ್ಯಮಿಶ್ರಿತ ಸಂಭಾಷಣೆಯೂ ಪ್ರೇಕ್ಷಕರನ್ನು ತಲುಪುವಲ್ಲಿ ನೆರವಾಗಿದೆ, ವಸ್ತ್ರ ವಿನ್ಯಾಸ, ಬೆಳಕಿನ ವಿನ್ಯಾಸವೂ ಉತ್ತಮವಾಗಿತ್ತು.

JANASHAKTHI KANNADA VARA PATRIKE JULY 31, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Satuarday
Licensed to Post without prepayment License No. WPP-283

ಬದುಕಿಗೆಂದೂ ಶಾಸ್ತ್ರಗಳಿಂದ ಉತ್ತರ ಸಿಗುವುದಿಲ್ಲ



ಬದುಕಿನ ಎಲ್ಲಾ ಪ್ರಶ್ನೆಗಳಿಗೂ ಶಾಸ್ತ್ರಗ್ರಂಥಗಳಲ್ಲಿ ಎಂದಿಗೂ ಉತ್ತರ ಸಿಗುವುದೇ ಇಲ್ಲ. ಜೀವನ ಎಂಬ ಅನುಭವದಲ್ಲಿ ಪ್ರಯಾಣಿಸಬೇಕು ಮತ್ತು ಸುತ್ತಲಿನ ಜಗತ್ತನ್ನು ಒಳಗಣ್ಣಿನಿಂದ ನೋಡಿದರೆ ನಮ್ಮನ್ನು ನಾವು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಕೆಲವನ್ನು ಧಿಕ್ಕರಿಸಿದರೆ ಹೊಸದೊಂದು ಮೊಳಕೆ ಒಡೆಯುತ್ತದೆ. ಸಮಾಜ, ಬದುಕು ಇವು ನಿರಂತರ ಚಲನೆಯಲ್ಲಿರುತ್ತವೆ. ಚಿಂತನೆಗಳು ಸ್ಥಿರವಾಗಿ, ನಿಂತ ನೀರಿನಂತೆ ಎಂದಿಗೂ ಇರುವುದಿಲ್ಲ. ಹೆಣ್ಣು ಸಹ ಶವ ಸಂಸ್ಕಾರ ಮಾಡಬಹುದು– ಹೀಗೆ ಹಲವು ಅರ್ಥಗಳನ್ನು ನೀಡಿದ್ದು 'ಸಂಸ್ಕಾರ' ನಾಟಕ ಪ್ರದರ್ಶನ.

ವಿನೋದ, ಶ್ರೀರಾಮಪುರ

ಜುಲೈ 04ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ 'ಮೈಸೂರು ರಂಗಾಯಣ' ತಂಡದವರು ಹಿರಿಯ ಸಾಹಿತಿ ಯು.ಆರ್. ಅನಂತಮೂರ್ತಿ ಅವರ ಕಾದಂಬರಿ ಆಧಾರಿತ ನಾಟಕ 'ಸಂಸ್ಕಾರ' ಪ್ರದರ್ಶಿಸಿದರು. ಕಾದಂಬರಿಯನ್ನು ಓ.ಎಲ್.ನಾಗಭೂಷಣಸ್ವಾಮಿರವರು ರಂಗರೂಪಕ್ಕೆ ತಂದಿದ್ದಾರೆ ಮತ್ತು ಸಂಗೀತ ಮತ್ತು ನಿರ್ದೇಶನ ರಂಗಾಯಣ ನಿರ್ದೇಶಕರಾದ ಹೆಚ್.ಜನಾರ್ದನ್ (ಜನ್ನಿ)ರವರಿಂದ.


'ಸಂಸ್ಕಾರ' ಕಾದಂಬರಿ ಬಂದು 5 ದಶಕಗಳೇ ಕಳೆದರೂ ಸಹ ಇಂದಿಗೂ ಪ್ರಸ್ತುತವೆನಿಸುತ್ತದೆ. ಸಮಾಜದಲ್ಲಿನ ಹಲವು ಘಟನೆಗಳನ್ನು ಗಮನಿಸಿದಾಗ ಕಾದಂಬರಿ ಬಂದ ಸಂದರ್ಭ ಮತ್ತು ಈಗಿನ ಸಂದರ್ಭಗಳಲ್ಲಿ ಭಾರೀ ವ್ಯತ್ಯಾಸ ಇದ್ದರೂ ಸಹ ಈಗಿನ ಸಂದರ್ಭಕ್ಕೂ 'ಸಂಸ್ಕಾರ'ವನ್ನು ಅನ್ವಯಿಸಿ ನೋಡಬಹುದು. ಈ ಹಿನ್ನೆಲೆಯಲ್ಲಿಯೇ ಕಳೆದ ವರ್ಷ ಕಾದಂಬರಿಯ 50ನೇ ವರ್ಷದ ಸಂದರ್ಭದಲ್ಲಿ ನಾಟಕ ಪ್ರದರ್ಶಿಸಿದ ರಂಗಾಯಣವು ಮತ್ತೆ ಮತ್ತೆ ಜನರ ಬಳಿಗೆ 'ಸಂಸ್ಕಾರ'ವನ್ನು ಕೊಂಡ್ಯೊಯ್ಯುತ್ತಿದೆ.

ಪ್ರಾಣೇಶಾಚಾರ್ಯರು (ಜಗದೀಶ ಮನವಾರ್ತೆ ಮತ್ತು ಪ್ರಶಾಂತ್ ಹಿರೇಮಠ) ಕಾಶಿಯಲ್ಲಿ ಪುರಾಣ ಶಾಸ್ತ್ರಗಳಲ್ಲಿ ಪಾಂಡಿತ್ಯ ಪಡೆದು ದುರ್ವಾಸಪುರದ ಜನತೆಗೆ ಪುಣ್ಯ ಕಥೆಗಳನ್ನು ವೈಭವೀಕರಿಸಿ ಬೋಧಿಸುತ್ತಾರೆ. ಅನಾರೋಗ್ಯ ಪೀಡಿತ ಹೆಂಡತಿಯೊಂದಿಗೆ ಜೀವನ ಸಾಗಿಸುತ್ತಾ, ಆಕೆಯ ಆರೈಕೆ ಮಾಡಿಕೊಂಡು, ಗಂಜಿ ಮಾಡಿಕೊಂಡು ದೇವರ ಪೂಜೆಯನ್ನು ಮಾಡುತ್ತಾ ಸಂಸಾರ ಸಾಗಿಸುತ್ತಾರೆ.

ಬ್ರಾಹ್ಮಣರೇ ಇರುವ ಅಗ್ರಹಾರದಂತ ದುರ್ವಾಸಪುರದಲ್ಲಿಯೂ ವಿಧವೆಯರ ಸಂಕಷ್ಟದ ಜೀವನ, ಜಾತಿ ತಾರತಮ್ಯ, ವೈಷಮ್ಯ, ದುರಾಸೆ, ಸ್ವಾರ್ಥ, ಎಲ್ಲವನ್ನು ತುಂಬಿಕೊಂಡ ಜನತೆ ಇದ್ದಾರೆ.

ನಾರಾಣಪ್ಪ (ಹುಲುಗಪ್ಪ ಕಟ್ಟಿಮನಿ) ಪುರೋಹಿತ ಆಚರಣೆಯನ್ನು ಧಿಕ್ಕರಿಸಿ, ಜಾತಿ ಮತಗಳು ಜನರನ್ನು ಕೀಳಾಗಿ ನೋಡುವ ವೈದಿಕ ಆಚರಣೆಗಳನ್ನು ಧಿಕ್ಕರಿಸುತ್ತಾ, ಪ್ರತಿಭಟಿಸುತ್ತಾ, ಜಾತಿ ಜನಾಂಗವನ್ನು ಮೀರಿ ನಿಲ್ಲುತ್ತಾನೆ. ಮಾನವರೆಲ್ಲರೂ ಒಂದೇ ಎಂದು ಮುಸ್ಲಿಮರು, ದಲಿತರು ಸೇರಿದಂತೆ ಎಲ್ಲರೊಂದಿಗೆ ಬೆರೆಯುತ್ತಾನೆ ಮಾತ್ರವಲ್ಲ, ಚಂದ್ರಿ ಎಂಬ ಕೆಳಜಾತಿಯ ಹೆಣ್ಣಿನೊಂದಿಗೆ ಜೀವನ ಸಾಗಿಸುತ್ತಾನೆ. ಹೆಂಡ–ಮಾಂಸ ಸೇವಿಸುತ್ತಾ, ಎಲ್ಲರೊಂದಿಗೂ ಬೆರೆಯುವ ಮನುಷ್ಯ ನಾರಾಣಪ್ಪ ಪ್ರಾಣೇಶಾಚಾರ್ಯರನ್ನು, ಇವರು ಅವರನ್ನು ಬದಲಿಸುವ ಪ್ರಯತ್ನಗಳು ನಡೆಯುತ್ತಲೇ ಇರುತ್ತವೆ.

ಶಾಸ್ತ್ರ ಗ್ರಂಥಗಳಿಗೂ ನಮ್ಮ ಬದುಕಿಗೂ ಸಂಬಂಧವಿಲ್ಲ ಎಂದು ಪುರೋಹಿತಶಾಹಿಯ ಕಟ್ಟಳೆಗಳನ್ನು ಧಿಕ್ಕರಿಸಲು ನಾರಾಣಪ್ಪ ವರ್ತನೆಗಳು ಅತಿ ಎನ್ನಿಸಬಹುದು. ಹೆಣ್ಣಿನ ಸಹವಾಸ, ಹೆಂಡದ ಸಹವಾಸ ಇದು ಧಿಕ್ಕಾರದ ರೀತಿಯಾಗಿರಬೇಕಿಲ್ಲ. ಬೇರೇ ರೀತಿಗಳಲ್ಲಿ ಸಂಪ್ರದಾಯವನ್ನು ಧಿಕ್ಕರಿಸಿಯೂ ಇನ್ನೂ ಉತ್ತಮವಾಗಿ ಬದುಕು ನಡೆಸಬಲ್ಲೇವು ಎಂದು ಚಿತ್ರಿಸಬಹುದಿತ್ತು. ಸಮಾಜದ ಬೇರೆ ಜನ ವಿಭಾಗಗಳನ್ನು ಹಲವು ಬಂಧನಗಳಿಂದ ಮುಕ್ತಗೊಳಿಸಬಹುದಾದ ಮತ್ತಷ್ಟು ಉತ್ತಮ ಬದುಕು ನಮ್ಮ ಮುಂದಿದೆ ಎಂದು ನಾಟಕದಲ್ಲಾದರೂ ಬಂದಿದ್ದರೆ ಇನ್ನೂ ಪರಿಣಾಮಕಾರಿಯಾಗಿ ಎಲ್ಲರನ್ನೂ ತಲುಪಲು ಸಾಧ್ಯವಾಗುತ್ತಿತ್ತೇನೋ.



ಎರಡು ವಿರುದ್ಧ ದಿಕ್ಕುಗಳ ನಡುವಿನ ಅನುಭವವೇ ಇಲ್ಲಿ ಪ್ರಧಾನ. ಒಂದು ಕಡೆ ಜಾತಿ ಧರ್ಮದ ಹೆಸರಿನಲ್ಲಿ ಬ್ರಾಹ್ಮಣ್ಯರ ಪ್ರಾಬಲ್ಯ ಮೆರೆಯುವ ಸಂದರ್ಭದಲ್ಲಿ, ಇಂದಿಗೂ ಕಾಡುವ ಜಾತಿ ವೈಷಮ್ಯಗಳು, ತಾತ್ವಿಕವಾಗಿ, ಪ್ರಾಯೋಗಿಕವಾಗಿ ಆಗುವ ಚರ್ಚೆಯ ಸಂದರ್ಭದಲ್ಲಿ, ಮಠಗಳಲ್ಲಿ ನಡೆಯುತ್ತಿರುವ ಬೆಳವಣಿಗೆಗಳು, ಪರಿಸ್ಥಿತಿಗೆ ಅನುಗುಣವಾಗಿ ಜನ ತಮ್ಮನ್ನು ತಾವು ಬದಲಿಸಿಕೊಳ್ಳುತ್ತಿರುವ ಈಗಿನ ಸಂದರ್ಭದಲ್ಲಿ 'ಸಂಸ್ಕಾರ' ಪ್ರಸ್ತುತವೆನಿಸುತ್ತದೆ.

ನಾರಾಣಪ್ಪ ಸತ್ತ ನಂತರ ಪ್ರಾರಂಭವಾಗುವ ನಾಟಕದಲ್ಲಿ ಶವ 'ಸಂಸ್ಕಾರ' ಯಾರು ಮಾಡುವುದೆಂದು ಮುಖ್ಯ ಪ್ರಶ್ನೆಯಾಗುತ್ತದೆ. ಸತ್ತ ನಂತರವು ಜಾತಿಯಿಂದ ಹೊರ ಹಾಕಲಿಲ್ಲವೆಂದು ಮತ್ತು ಅಲ್ಪಸ್ವಲ್ಪ ಒಡವೆಯನ್ನು ಲಪಟಾಯಿಸಲು ಇರುವ ಅಗ್ರಹಾರದ ಬ್ರಾಹ್ಮಣರು ಪ್ರಮುಖವಾಗಿ ಗರುಡಾಚಾರ್ಯ(ವಿನಾಯಕ ಭಟ್ ಹಣಸಗಿ) ಮತ್ತು ಲಕ್ಷ್ಮಣಚಾರ್ಯ(ನೂರ್ ಅಹ್ಮದ್ ಶೇಖ್) ಕುಟುಂಬದ ನಡುವೆ ಒಡವೆಗಳನ್ನು ಕಸಿಯುವ ಪ್ರಯತ್ನ ನಡೆಯುತ್ತದೆ.

ಮನುಷ್ಯ ಜೀವನದಲ್ಲಿ ಶಾಸ್ತ್ರಗ್ರಂಥಗಳು ಮತ್ತು ಸಂಪ್ರದಾಯ ಆಚರಣೆಗಳು ಸಮಾಜಕ್ಕಾಗಿ ಅಲ್ಲ ಅದು ಆಸ್ತಿಯ ರಕ್ಷಣೆಗಾಗಿಯೇ ಇರುವುದು ಎಂದು ಪರಿಣಾಮಕಾರಿಯಾಗಿ 'ಸಂಸ್ಕಾರ'ದಲ್ಲಿ ಬಂದಿದೆ. ಇದು ಸಾವಿನ ವಿಚಾರದಲ್ಲೂ ಇನ್ನೂ ಅತಿ–ರೇಕ ಪಡೆಯುವುದನ್ನು ಇಂದಿಗೂ ಸಮಾಜದಲ್ಲಿ ಗಮನಿಸಬಹುದು.


ತಾವು ಶವ ಸಂಸ್ಕಾರ ಮಾಡಿದರೆ ಬ್ರಾಹ್ಮಣ ಜಾತಿಯಿಂದ ಬಹಿಷ್ಕಾರಕ್ಕೆ ಒಳಗಾಗಬೇಕಾದೀತು ಎಂದು ಮುಂಬರುವ ಕೇಡನ್ನು ನಿವಾರಿಸಿಕೊಳ್ಳಲು ಪ್ರಯತ್ನ ನಡೆಯುತ್ತದೆ. ಈ ನಡುವೆ ಶವ 'ಸಂಸ್ಕಾರ' ಮಾಡುವವರೆಗೂ ಅನ್ನ–ನೀರು ಸೇವಿಸುವಂತಿಲ್ಲ ಅಗ್ರಹಾರದ ಬ್ರಾಹ್ಮಣರು. ದಾಸಾಚಾರ್ಯರ(ಸಂತೋಷಕುಮಾರ್ ಕುಸನೂರು) ಊಟ ಇಲ್ಲದೆ ಹೇಗೆ ಬದುಕುವುದು ಎಂಬ ಪರಿಪಾಟಲು ಹಾಸ್ಯಮಯವಾಗಿ ಸಾಗುತ್ತದೆ.

ನಟರಾಜ್ ಹುಳಿಯಾರ್‌ರವರು ಹಿಂದೊಮ್ಮೆ "ನಾರಾಣಪ್ಪನ ಬಂಡಾಯದ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಚಳವಳಿಯ ಹೊಸ ರಾಜಕೀಯವೂ ಇದೆ; ಇಂಡಿಯಾವನ್ನು ಪ್ರವೇಶಿಸಿರುವ ಹೊಸ ರಂಗಭೂಮಿ ಜಡ ಸಮಾಜವೊಂದರಲ್ಲಿ ಹುಟ್ಟಿಸಿರುವ ಹೊಸ ಕಂಪನವೂ ಇದೆ. ಆ ಕಾಲದಲ್ಲಿ ಮತ್ತೆ ಮತ್ತೆ ಕಿವಿಗೆ ಬೀಳುತ್ತಿದ್ದ 'ಸ್ವಾತಂತ್ರ್ಯ' ಎಂಬ ಶಬ್ದ ಅಗ್ರಹಾರದ ವಿಧವೆಯರಲ್ಲಿ, ಸಂಪ್ರದಾಯದಡಿ ಸಿಕ್ಕು ನರಳುತ್ತಿರುವವರಲ್ಲಿ ಹಲಬಗೆ ಸ್ವಾತಂತ್ರ್ಯಗಳ ಅಸ್ಪಷ್ಟ ನಿರೀಕ್ಷೆ ಮೂಡಿಸುತ್ತಿರುವ ಸೂಚನೆಯೂ ಕಾಣುತ್ತದೆ. ಸಂಸ್ಕೃತಿಗಳು ತಮ್ಮನ್ನು ತಾವು ತೀವ್ರ ಪರೀಕ್ಷೆಗೆ ಒಡ್ಡಿಕೊಳ್ಳಬೇಕಾದ ತುಡಿತವೂ ಈ ಚಾರಿತ್ರಿಕ ಸನ್ನಿವೇಶದಲ್ಲಿ ಸೃಷ್ಟಿಯಾಗಿದೆ". ಎಂದು ಬರೆದಿದ್ದಾರೆ.

ಸಮಸ್ಯೆಗೆ ಪರಿಹಾರ ಸಿಗುವುದೇ ಇಲ್ಲ, ಪ್ರಾಣೇಶಾಚಾರ್ಯರಿಂದಲೇ ಪರಿಹಾರವಾಗದಿದ್ದಾಗ ಅರೆ–ಬರೆ ಬ್ರಾಹ್ಮಣರು ಎನಿಸಿಕೊಂಡವರ ಬಳಿಗೂ ಹೋಗುವರು ಅವರು ಮಾಡಲು ಒಪ್ಪುವರು. ಜಾತಿ ಮಠದ ಮಠಾಧಿಪತಿಯನ್ನು ಸಂಪರ್ಕಿಸಲು ಮೂರು ದಿನಗಳ ಪ್ರಯಾಣಿಸಬೇಕಾದ ಮಠಕ್ಕೆ ಭೇಟಿಯಾಗಲು ಹೊರಡುತ್ತಾರೆ. ಮಠಾಧಿಪತಿಯ ಉತ್ತರವೂ 'ಸಂಸ್ಕಾರ' ಮಾಡಲು ಅಡ್ಡಿ ಇಲ್ಲ. ಆದರೆ ಅವನ ಬಳಿಯ ಆಸ್ತಿ–ಪಾಸ್ತಿ ಮಠಕ್ಕೆ ಸೇರಲೇಬೇಕೆಂದು ಕಟ್ಟಪ್ಪಣೆಯಾಗುತ್ತದೆ.

ಧರ್ಮಗ್ರಂಥಗಳಲ್ಲಿ ಪರಿಹಾರ ಸಿಗದಿದ್ದಾಗ

ಪುಟ 15 ಕ್ಕೆ





JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**